ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ


ಕನ್ನಡ ವಾರಪತ್ರಿಕೆ




ಬಂಧಿತ ಫೇಕ್ ಸುದ್ದಿ
postbox.news ಸ್ಥಾಪಕ
ಮಹೇಶ್ ವಿಕ್ರಮ್ ಹೆಗಡೆ

ಸಂಪುಟ 12 | ಸಂಚಿಕೆ 14 | ಏಪ್ರಿಲ್ 2–8, 2018 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com









ಮೂಡಬಿದಿರೆ ಕ್ಷೇತ್ರ





ಬಿಗ್ ಡಾಟಾ+ಫೇಕ್ ಸುದ್ದಿ+
ಬಿಗ್ ಮನಿ = ಅಚ್ಛೇ ದಿನ್

ದೌರ್ಜನ್ಯ ತಡೆ ಕಾಯಿದೆ ದುರ್ಬಲಗೊಳಿಸಬೇಡಿ





ಬಂಗಾಳದಲ್ಲಿ
ರಾಮನವಮಿ ಗಲಭೆಗಳು

ಜಾಗತೀಕರಣದೊಂದಿಗೆ ಏಗುತ್ತಿರುವ ಟ್ರಂಪ್ ಹತಾಶ ಕ್ರಮ

ಪಶ್ಚಿಮ ಬಂಗಾಲದಲ್ಲಿ ರಾಮನವಮಿ ಗಲಭೆಗಳು:

ಸರಕಾರಗಳನ್ನು ನಡೆಸುವ ಶಕ್ತಿಗಳೇ ಕೋಮುದಳ್ಳುರಿ ಹರಡಿಸುತ್ತಿರುವಾಗ, ಶಾಂತಿಪ್ರಿಯ ಜನರೇ ಈ ಸವಾಲನ್ನು ಎದುರಿಸಬೇಕಾಗಿದೆ–ಸಿಪಿಐ(ಎಂ) ಕೇಂದ್ರ ಸಮಿತಿ

ಪಶ್ಚಿಮ ಬಂಗಾಲದಲ್ಲಿ ಆರೆಸ್ಸೆಸ್ ನೇತೃತ್ವದ ಸಂಘಟನೆಗಳು ಮತ್ತು ಬಿಜೆಪಿ ರಾಮನವಮಿಯನ್ನು ಹಿಂಸಾತ್ಮಕವಾಗಿ ಆಚರಿಸಲು ಪ್ರಯತ್ನಿಸಿವೆ. ಇದರಿಂದಾಗಿ ಕೆಲವು ಭಾಗಗಳಲ್ಲಿ ಕೋಮು ಗಲಭೆಗಳು ಆರಂಭವಾಗಿವೆ. ಪುರುಲಿಯಾದ ಅರ್ಷ ಮತ್ತು ಉತ್ತರ 24 ಪರಗಣಾದ ಕಕ್ಕಿನಾಡದಲ್ಲಿ ಕೋಮು ಗಲಭೆಗಳು ಆರಂಭವಾಗಿ ನಂತರ ಪಶ್ಚಿಮ ಬರ್ದ್ವಾನ್ ಜಿಲ್ಲೆಯ ಅಸನ್‌ಸೋಲ್ ಮತ್ತು ರಾಣೀಗಂಜ್‌ಗೆ ಹರಡಿವೆ. **ಇಲ್ಲಿ ಪ್ರತಿಯೊಂದು ಕಡೆಯೂ ಸಶಸ್ತ್ರ ರಾಮನವಮಿ ಮೆರವಣಿಗೆಗಳು ಉದ್ವೇಗ, ಲಂಗುಲಗಾಮಿಲ್ಲದ ಹಿಂಸಾಚಾರ, ಲೂಟಿ, ಅಗ್ನಿಸ್ಪರ್ಶಗಳ ಸರಣಿಯನ್ನು ಹರಿಯ ಬಿಟ್ಟಿವೆ.** ಇದುವರೆಗೆ ಅಧಿಕೃತವಾಗಿ ನಾಲ್ಕು ಸಾವುಗಳು ಸಂಭವಿಸಿವೆ. ರಾಣೀಗಂಜ್‌ನಲ್ಲಿ ಸಶಸ್ತ್ರ ಹಿಂಸಾಚಾರದಲ್ಲಿ ಪೋಲೀಸ್ ಸಿಬ್ಬಂದಿಯೊಬ್ಬರ ಕೈಗೆ ವಿಪರೀತ ಏಟಾಗಿದೆ. **ಕೋಮುಸೌಹಾರ್ದ ಮತ್ತು ಗಲಭೆ–ಮುಕ್ತ ಪರಿಸರದ ದಾಖಲೆ ಹೊಂದಿರುವ ಪಶ್ಚಿಮ ಬಂಗಾಲಕ್ಕೆ ಈಗ ದೋಷ ತಟ್ಟಿದೆ ಎಂಬುದು ಸ್ಪಷ್ಟ** ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಖೇದ ವ್ಯಕ್ತಪಡಿಸಿದೆ.

ಕಳೆದ ವರ್ಷವೇ, ಮೊದಲ ಬಾರಿಗೆ ಖಡ್ಗಗಳು, ತ್ರಿಶೂಲಗಳು, ಮಚ್ಚುಗಳನ್ನು ರಾಮನವಮಿ ಆಚರಣೆಗಳಲ್ಲಿ ಪ್ರದರ್ಶಿಸಲಾಗಿತ್ತು. ಚಿಕ್ಕ ವಯಸ್ಸಿನ ಮಕ್ಕಳ ಕೈಗಳಲ್ಲೂ ಈ ಅಸ್ತ್ರಗಳಿದ್ದವು. ಈ ವರ್ಷ, ಒಂದು ರಿಯಾಯ್ತಿ ಕ್ರಮವಾಗಿ ರಾಜ್ಯ ಸರಕಾರ ಮೆರವಣಿಗೆಗಳಲ್ಲಿ ಶಸ್ತ್ರಾಸ್ತ್ರ ಪ್ರದರ್ಶನಕ್ಕೆ ಅವಕಾಶ ಕೊಟ್ಟಿತ್ತು. ಅಷ್ಟೇ ಅಲ್ಲ, ಸ್ಪರ್ಧಾತ್ಮಕ ಕೋಮುವಾದದ ಹುರುಪಿನಲ್ಲಿ ಟಿಎಂಸಿ ಪಕ್ಷದ ಮತ್ತು ಆಡಳಿತದ ಸಹಕಾರ ಇನ್ನಷ್ಟು ಬಹಿರಂಗ ಸ್ವರೂಪ ಪಡೆಯಿತು. ಆಳುವ ಪಕ್ಷವೇ ಈ ಆಚರಣೆಗಳಲ್ಲಿ ಭಾಗವಹಿಸಲು ಕರೆ ನೀಡಿತು, ಹಲವೆಡೆಗಳಲ್ಲಿ ಟಿಎಂಸಿ ಮತ್ತು ಆರೆಸ್ಸೆಸ್–ಬಿಜೆಪಿ ಮುಖಂಡರು ಜಂಟಿಯಾಗಿಯೇ ಭಾಗವಹಿಸಿದರು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಇದು ದೇಶದ ಇತರೆಡೆಗಳಲ್ಲಿ ಹಿಂದುತ್ವ ಶಕ್ತಿಗಳು ಮುಂಚೂಣಿಯಲ್ಲಿದ್ದು ನಡೆಸಿರುವ ಕೋಮುವಾದಿ ಧ್ರುವೀಕರಣದ ದುಷ್ಟ ಪ್ರಯತ್ನಗಳ ಭಾಗವೇ ಆಗಿದೆ, ಟಿಎಂಸಿಯಿಂದ ಕೋಮುವಾದಿ ಶಕ್ತಿಗಳ ತುಷ್ಟೀಕರಣ ಮತ್ತು ರಾಜ್ಯ ಆಢಳಿತದ ಅಸಮರ್ಥತೆ ಈ ಶಕ್ತಿಗಳ ಮಾರಣಾಂತಿಕ ಪ್ರಹಾರಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಗಲಭೆ ಪೀಡಿತ ಪ್ರದೇಶಗಳಲ್ಲಿ ಸಾಮಾನ್ಯ ಪರಿಸ್ಥಿತಿ ಮತ್ತು ಶಾಂತಿಯನ್ನು ಮತ್ತೆ ನೆಲೆಗೊಳಿಸಲು ರಾಜ್ಯಸರಕಾರ ಸೂಕ್ತ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. **ಈ ಕೊಲೆಗಡುಕ ಪ್ರಚಾರವನ್ನು ದೃಢವಾಗಿ ವಿರೋಧಿಸಬೇಕು ಎಂದು ಶಾಂತಿಪ್ರಿಯ ಜನವಿಭಾಗಗಳಿಗೆ ಸಿಪಿಐ(ಎಂ) ಮನವಿ ಮಾಡಿದೆ. ಇತರ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಕೂಡ ಬೀದಿಗಿಳಿದು ಶಾಂತಿ ಮತ್ತು ಸಾಮರಸ್ಯದ ಕಾಳಜಿಯನ್ನು ವ್ಯಕ್ತಗೊಳಿಸಬೇಕು ಎಂದೂ ಅದು ಮನವಿ ಮಾಡಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ನಡೆಸುವ ಶಕ್ತಿಗಳೇ ಈ ಕೋಮುದಳ್ಳುರಿ ಹರಡಿಸಲು ಸಕ್ರಿಯವಾಗಿ ಕಾಣಿಕೆ ನೀಡುತ್ತಿರುವಾಗ ಶಾಂತಿ, ಐಕ್ಯತೆ ಮತ್ತು ಸೋದರತ್ವವನ್ನು ಬಯಸುವ ಜನಗಳೇ ತಾವಾಗಿ ಈ ಸವಾಲನ್ನು ಸಾಮೂಹಿಕವಾಗಿ ಎದುರಿಸಲು ಮುಂದೆ ಬರಬೇಕಾಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಶಿಸಿದೆ.**

ನಾಗರಿಕರ ಖಾಸಗಿತನ ಮತ್ತು ಮಾಹಿತಿಗಳ ರಕ್ಷಣೆಗೆ ತಕ್ಷಣವೇ ಕ್ರಮಗಳು ಅಗತ್ಯ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಬ್ರಿಟನ್ನಿನ ಒಂದು ಕಂಪನಿ, ಕೇಂಬ್ರಿಜ್ ಅನಾಲಿಟಿಕ ಮತದಾರರ ಮೇಲೆ ಪ್ರಭಾವ ಬೀರಲಿಕ್ಕಾಗಿ ಫೇಸ್‌ಬುಕ್ ಮಾಹಿತಿಯನ್ನು ದೊರಕಿಸಿಕೊಂಡು ಬಳಸುತ್ತಿದೆ ಎಂಬುದು ಬಯಲಿಗೆ ಬಂದಿದೆ. ಇದು ದುಡ್ಡಿರುವ ಮತ್ತು ಬೃಹತ್ ಮಾಹಿತಿಗಳನ್ನು ಚುನಾವಣೆಗಳ ಮೇಲೆ ಪ್ರಭಾವ ಬೀರಲು ಬಳಸಬಲ್ಲ ಪಕ್ಷಗಳಿಂದ ಪ್ರಜಾಪ್ರಭುತ್ವ ಅಪಾಯಕ್ಕೀಡಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಇಂತಹ ಕೃತ್ಯದ ಒಂದು ಭಾರತೀಯ ಕೊಂಡಿಯೂ ಇದೆ, ಕೇಂಬ್ರಿಜ್ ಅನಾಲಿಟಿಕದೊಂದಿಗೆ ಸಹಕಾರ ಇರುವ ಒಂದು ಕಂಪನಿ ಭಾರತದಲ್ಲಿ ಇಂತಹ ಕಾರ್ಯಾಚರಣೆ ನಡೆಸುತ್ತಿದೆ ಎಂಬುದೂ ಪ್ರಕಟಗೊಂಡಿದೆ.

ಮಾಹಿತಿ ತಂತ್ರಜ್ಞಾನ ಮಂತ್ರಿ ರವಿಶಂಕರ್ ಪ್ರಸಾದ್ ಫೇಸ್‌ಬುಕ್‌ನಲ್ಲಿನ ಮಾಹಿತಿ ಭಂಗದ ಬಗ್ಗೆ ಹೇಳಿಕೆ ನೀಡಿದ್ದಾರೆ. ಆದರೆ ಸರಕಾರ ನಾಗರಿಕರ ಖಾಸಗಿತನ ಮತ್ತು ಮಾಹಿತಿರಕ್ಷಣೆಗೆ ಒಂದು ಕಾನೂನಾತ್ಮಕ ರಚನೆಯನ್ನು ನಿರ್ಮಿಸದಿರುವಾಗ ಇದು ಕೇವಲ ಬೂಟಾಟಿಕೆಯಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಇಂತಹ ಒಂದು ಕಾಯ್ದೆಯೇ ಇಲ್ಲದಿರುವಾಗ ಗೂಗಲ್, ಫೇಸ್‌ಬುಕ್‌ನಂತಹ ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮ ಮಾಹಿತಿಗಳ ದುರುಪಯೋಗವಾಗದಂತೆ ರಕ್ಷಿಸುವ ಬಾಧ್ಯತೆಯೇನೂ ಇರುವುದಿಲ್ಲ ಎಂಬ ಸಂಗತಿಯತ್ತ ಅದು ಗಮನ ಸೆಳೆದಿದೆ.

ಚುನಾವಣಾ ಆಯೋಗ ಗೂಗಲ್‌ನೊಂದಿಗೆ ಕೈಜೋಡಿಸುವ ಯೋಚನೆಯಲ್ಲಿದೆ ಮತ್ತು ತನ್ನ ಸಂದೇಶಗಳಿಗೆ ಫೇಸ್‌ಬುಕ್‌ನ್ನು ಬಳಸುತ್ತಿದೆ ಎಂಬುದು ಆತಂಕಕಾರಿ. ಇದು ಬೇರೆ ಉದ್ದೇಶಗಳಿಗೆ, ಈ ಮಾಹಿತಿಗಳನ್ನು ಬಳಸಿಕೊಳ್ಳಲು, ಹಣಬಲ ಇರುವ ಪಕ್ಷಗಳು ಮತ್ತು ವ್ಯಕ್ತಿಗಳು ಚುನಾವಣೆಗಳಲ್ಲಿ ಪ್ರಭಾವ ಬೀರಲಿಕ್ಕಾಗಿ ಹೊರಗುತ್ತಿಗೆ ನೀಡಲು ಕೂಡ ನೆರವಾಗುತ್ತದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಸಂಬಂಧಪಟ್ಟ ಕಂಪನಿಗಳು ಭಾರತದಲ್ಲಿ ಇಂತಹ ಕಾರ್ಯಾಚರಣೆಗಳನ್ನು ಹೇಗೆ ನಡೆಸಿವೆ, ಅವು ತಮ್ಮ ಗಿರಾಕಿಗಳಿಗೆ ಯಾವ ಸೇವೆಗಳನ್ನು ಸಲ್ಲಿಸಿವೆ ಎಂಬುದರ ಒಂದು ತನಿಖೆ ನಡೆಯಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ನಾಗರಿಕರ ಖಾಸಗಿತನ ಮತ್ತು ಮಾಹಿತಿಗಳ ರಕ್ಷಿಸಲು ಅಗತ್ಯ ಕಾನೂನು ಕ್ರಮಗಳನ್ನು ಸರಕಾರ ತಕ್ಷಣವೇ ರೂಪಿಸಬೇಕು ಎಂದು ಆಗ್ರಹಿಸಿದೆ.

ಎಪ್ರಿಲ್ 2: ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುತ್ತಿರುವುದರ ವಿರುದ್ಧ ಪ್ರತಿಭಟನೆ: ಡಿಎಸ್‌ಎಂಎಂ ಕರೆ

ದಲಿತ್ ಶೋಷಣ್ ಮುಕ್ತಿ ಮಂಚ್ (ಡಿಎಸ್‌ಎಂಎಂ) ಎಪ್ರಿಲ್ 2ರಂದು, ಸುಪ್ರಿಂ ಕೋರ್ಟಿನ ಇಬ್ಬರು ನ್ಯಾಯಮೂರ್ತಿಗಳ ಪೀಠದ ಇತ್ತೀಚಿನ ತೀರ್ಪಿನಿಂದಾಗಿ ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸಿರುವುದರ ವಿರುದ್ಧ ದೇಶಾದ್ಯಂತ ಪ್ರತಿಭಟನಾ ದಿನವಾಗಿ ಆಚರಿಸಬೇಕು ಎಂದು ತನ್ನೆಲ್ಲ ಘಟಕಗಳಿಗೆ ಕರೆ ನೀಡಿದೆ. ಧರಣಿ, ರಾಸ್ತಾರೋಕೋ, ಮೆರವಣಿಗೆಗಳು, ಹರತಾಳ ಇತ್ಯಾಧಿಗಳ ಮೂಲಕ ಈ ಪ್ರತಿಭಟನೆಯನ್ನು ಎಂದು ಅದು ಹೇಳಿದೆ. ಎಲ್ಲ ದಲಿತ ಮತ್ತು ಪ್ರಜಾಪ್ರಭುತ್ವವಾದಿ ಸಂಗಟನೆಗಳು ಇದನ್ನು ಬೆಂಬಲಿಸಬೇಕು ಎಂದೂ ಡಿಎಸ್‌ಎಂಎಂ ಮನವಿ ಮಾಡಿದೆ. ಈ ಕಾಯ್ದೆಯನ್ನು ಸಂವಿಧಾನದ 9ನೇ ಸೆಡ್ಯೂಲಿನಲ್ಲಿ ಸೇರಿಸಬೇಕು, ಆಮೂಲಕ ಇದನ್ನು ದುರ್ಬಲ ಗೊಳಿಸಲಾಗದಂತೆ ಮಾಡಬೇಕು ಎಂಬ ಬೇಡಿಕೆಯನ್ನು ಬೆಂಬಲಿಸುತ್ತ ಡಿಎಸ್‌ಎಂಎಂ ಇಬ್ಬರು ನ್ಯಾಯಾಧೀಶರ ಪೀಠದ ತೀರ್ಪಿನ ವಿರುದ್ಧ ಮರುವಿಮರ್ಶೆ ಅರ್ಜಿ ಸಲ್ಲಿಸಲು ನಿರ್ಧರಿಸಿದೆ. ಮುಂಬರುವ ದಿನಗಳಲ್ಲಿ ದಲಿತರ ಮೇಲಿನ ಎಲ್ಲ ದಾಳಿಗಳನ್ನು ಎದುರಿಸಲು ಮತ್ತು ಅವರು ಕಷ್ಟಪಟ್ಟು ಗಳಿಸಿದ ಹಕ್ಕುಗಳನ್ನು ಉಳಿಸಿಕೊಳ್ಳಲು ಒಂದು ಬಲಿಷ್ಟ ಐಕ್ಯ ಆಂದೋಲನವನ್ನು ಕಟ್ಟಲು ಕೆಲಸ ಮಾಡುವುದಾಗಿ ಡಿಎಸ್‌ಎಂಎಂ ಹೇಳಿದೆ.

ಮೋದಿ ಸರಕಾರದ ‘ನಿಗದಿತ ಅವಧಿಯ ಉದ್ಯೋಗ’ದ ಆದೇಶ– ಎಪ್ರಿಲ್ 2ರಂದು ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗೆ ಸಿಐಟಿಯು ಜನರಲ್ ಕೌನ್ಸಿಲ್ ಕರೆ

ಎಲ್ಲ ಕ್ಷೇತ್ರಗಳಲ್ಲೂ ಕಾಯಂ ಉದ್ಯೋಗದ ಬದಲು ‘ನಿಗದಿತ ಅವಧಿಯ ಉದ್ಯೋಗ’ ವ್ಯವಸ್ಥೆಯನ್ನು ತರಬೇಕು ಎಂಬ ಭಾರತ ಸರಕಾರದ ಆದೇಶದ ವಿರುದ್ಧ **ಎಪ್ರಿಲ್ 2** ರಂದು ಕೇರಳ ರಾಜ್ಯಾದ್ಯಂತ ಮುಷ್ಕರ ನಡೆಸಲು ಅಲ್ಲಿಯ ಹದಿನಾರು ಕಾರ್ಮಿಕ ಸಂಘಟನೆಗಳು ನಿರ್ಧರಿಸಿವೆ. ಕೋಹಿಕ್ಕೋಡ್‌ನಲ್ಲಿ ಮಾರ್ಚ್ 23ರಂದು ಆರಂಭವಾದ ಸಿಐಟಿಯು ಜನರಲ್ ಕೌನ್ಸಿಲ್ ಸಭೆ ಇದನ್ನು ಬೆಂಬಲಿಸುವ ಒಂದು ನಿರ್ಣಯವನ್ನು ಅಂಗೀಕರಿಸಿದೆ. ಕೇರಳದ ಕಾರ್ಮಿಕ ಸಂಘಟನೆಗಳ ಕಾರ್ಯಾಚರಣೆಗೆ ಸೌಹಾರ್ದ ವ್ಯಕ್ತಪಡಿಸಲು ಅಂದು ದೇಶಾದ್ಯಂತ ಪ್ರತಿಭಟನಾ ಮತಪ್ರದರ್ಶನಗಳನ್ನು ನಡೆಸಬೇಕು ಎಂದು ಎಲ್ಲ ಸೋದರ ಕಾರ್ಮಿಕ ಸಂಘಟನೆಗಳಿಗೆ ಮತ್ತು ಸಿಐಟಿಯು ರಾಜ್ಯ ಸಮಿತಿಗಳಿಗೆ ಸಿಐಟಿಯು ಜನರಲ್ ಕೌನ್ಸಿಲಿನ ಈ ನಿರ್ಣಯ ಕರೆ ನೀಡಿದೆ.

ಸಿಐಟಿಯು ಜನರಲ್ ಕೌನ್ಸಿಲ್ ಸಭೆ ಮಾರ್ಚ್ 26 ರಂದು ಮುಕ್ತಾಯಗೊಂಡಿದ್ದು ನಾಲ್ಕು ದಿನಗಳ ಚರ್ಚೆಗಳ ನಂತರ ಅದು ಕಾರ್ಮಿಕ ವರ್ಗದ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಸ್ವತಂತ್ರವಾಗಿಯೂ ಮತ್ತು ಇತರ ಕಾರ್ಮಿಕ ಸಂಘಟನೆಗಳೊಂದಿಗೆ ಜಂಟಿಯಾಗಿಯೂ ದೇಶವ್ಯಾಪಿ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಕರೆ ನೀಡಿದೆ.

- * **ಮೇ 23 ರಂದು,** ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯಾಗಿರುವ ‘ಜನ ಏಕತಾ ಜನ ಅಧಿಕಾರ್ ಆಂದೋಲನ್’ ಈಗಾಗಲೇ ಬಿಜೆಪಿ ನೇತೃತ್ವದ ಸರಕಾರ ತನ್ನ ನಾಲ್ಕು ವರ್ಷಗಳನ್ನು ಮುಗಿಸುತ್ತಿರುವ ಸಂದರ್ಭದಲ್ಲಿ ಅದನ್ನು ‘ಬಯಲುಗೊಳಿಸಿ ಮತ್ತು ಪ್ರತಿಭಟಿಸಿ’ ಎಂದು ನೀಡಿರುವ ಕರೆಗೆ ಅನುಗುಣವಾಗಿ ಒಂದು ಕಾರ್ಯಾಚರಣೆಯ ಕಾರ್ಯಕ್ರಮವನ್ನು ನಿರ್ಧರಿಸಿತು.
- * **ಆಗಸ್ಟ್ 9** ರ ಈ ವರ್ಷದ ‘ಕ್ವಿಟ್‌ಇಂಡಿಯಾ’ ದಿನದಂದು ಒಂದು ‘ಜೈಲ್ ಭರೋ’ ಚಳುವಳಿಯನ್ನು ನಡೆಸಲಾಗುವುದು. ಇದಕ್ಕೆ ರೈತ ಮತ್ತು ಕೃಷಿಕೂಲಿಕಾರರ ಬೇಡಿಕೆಗಳ ಮೇಲೆ ಅವರ ಎಲ್ಲ ಸಂಘಟನೆಗಳ ಬೆಂಬಲವನ್ನು ಅಣಿನೆರೆಸಲಾಗುವುದು.
- * **ಸಪ್ಟಂಬರ್ 5** ರಂದು ನವದೆಹಲಿಯಲ್ಲಿ ಒಂದು ಬೃಹತ್ “ಮಜ್ದೂರ್–ಕಿಸಾನ್ ರ್‍ಯಾಲಿ’ ನಡೆಸಲು 5 ಲಕ್ಷ ಕಾರ್ಮಿಕರು, ರೈತರು ಮತ್ತು ಕೃಷಿಕೂಲಿಕಾರರನ್ನು ಅಣಿನೆರೆಸಲು ಕೂಡ ಜನರಲ್ ಕೌನ್ಸಿಲ್ ನಿರ್ಧರಿಸಿತು.

“ಮುಂಬರುವ ದಿನಗಳು ತೀವ್ರ ಹೋರಾಟಗಳ ದಿನಗಳು”

–ಅಖಿಲ ಭಾರತ ಕಿಸಾನ್ ಸಭಾದ ಕೇಂದ್ರ ಮಂಡಳಿ

ರೈತರ ಅಭೂತಪೂರ್ವ ಲಾಂಗ್ ಮಾರ್ಚ್‌ನ ಯಶಸ್ಸು ಮತ್ತು ಅದರ ಮೊದಲು ಅಲ್ಲಿ, ರಾಜಸ್ತಾನದಲ್ಲಿ, ಕರ್ನಾಟಕ, ಹಿಮಾಚಲ ಪ್ರದೇಶ ಮುಂತಾದೆಡೆಗಳಲ್ಲಿ ರೈತರ ಹೋರಾಟಗಳ ಹಿನ್ನೆಲೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಕೇಂದ್ರೀಯ ಕಿಸಾನ್ ಮಂಡಳಿ(ಸಿಕೆಸಿ) ಮಾರ್ಚ್ 18 ಮತ್ತು 19ರಂದು ಸಭೆ ಸೇರಿತು. 34ನೇ ಎಐಕೆಎಸ್ ಸಮ್ಮೇಳನದ ನಂತರದ ಮೊದಲ ಸಿಕೆಸಿ ಸಭೆ ಇದಾಗಿದ್ದು, ದೇಶದಲ್ಲಿನ ರಾಜಕೀಯ, ಸಾಮಾಜಿಕ–ಆರ್ಥಿಕ ಮತ್ತು ಕೃಷಿ ಸನ್ನಿವೇಶವನ್ನು ಚರ್ಚಿಸಿತು. ಹಾಗೂ ಈ ರೈತ ಹೋರಾಟಗಳ ಅನುಭವಗಳನ್ನು ವಿಶ್ಲೇಷಿಸುವ ಒಂದು ಕಿರುಹೊತ್ತಿಗೆಯನ್ನು ತಂದು ಮಹಾರಾಷ್ಟ್ರ, ರಾಜಸ್ತಾನ ಮತ್ತು ಕರ್ನಾಟಕದಲ್ಲಿ ಈ ಕುರಿತು ತೀವ್ರ ಪ್ರಚಾರಾಂದೋಲನ ನಡೆಸಲು ನಿರ್ಧರಿಸಲಾಯಿತು.

ಮುಂಬರುವ ದಿನಗಳು ತೀವ್ರ ಹೋರಾಟಗಳ ದಿನಗಳು, ಜನ–ವಿರೋಧಿ ಬಿಜೆಪಿ ಆಳ್ವಿಕೆಯನ್ನು ಕಿತ್ತೊಗೆಯುವ ವಾತಾವರಣವನ್ನು ಇವು ಸೃಷ್ಟಿಸುತ್ತವೆ ಎಂದಿರುವ ಸಿಕೆಸಿ ಇದುವರೆಗಿನ ಹೋರಾಟವನ್ನು ತೀವ್ರಗೊಳಿಸಲು ಮುಂದಿನ ಆರು ತಿಂಗಳ ಹೋರಾಟಗಳ ಬಗ್ಗೆ ವಿವರವಾಗಿ ಚರ್ಚಿಸಿ ನಿರ್ಧರಿಸಿತು.

- * **ಎಪ್ರಿಲ್2 ರಿಂದ 8: ತ್ರಿಪುರಾ ಸೌಹಾರ್ದ ವಾರ**–ತ್ರಿಪುರಾದಲ್ಲಿ ಬಿಜೆಪಿ–ಐಪಿಎಫ್‌ಟಿ ತಮ್ಮ ಚುನಾವಣಾ ವಿಜಯದ ನಂತರ ರೈತ ಸಂಘಟನೆಯೂ ಸೇರಿದಂತೆ ಎಲ್ಲ ವರ್ಗ ಮತ್ತು ಸಾಮೂಹಿಕ ಸಂಘಟನೆಗಳು ಮತ್ತು ಎಡಪಕ್ಷಗಳ ಮೇಲೆ ನಡೆಸುತ್ತಿರುವ ಹಿಂಸಾಚಾರದ ವಿರುದ್ಧ; ಸಂಘಟನೆಯ ಅಖಿಲ ಭಾರತ ಪದಾಧಿಕಾರಿಗಳು, ಸಂಸತ್ ಸದಸ್ಯರು, ಇತರ ಚುನಾಯಿತ ಪ್ರತಿನಿಧಿಗಳು, ಕಲಾವಿದರು, ಲೇಖಕರು ಮುಂತಾದವರು ಇರುವ ನಿಯೋಗವೊಂದು ತ್ರಿಪುರಾಕ್ಕೆ ಭೇಟಿ ನೀಡುತ್ತದೆ.
- * **ಎಪ್ರಿಲ್3: ಹಾಲು ಉತ್ಪಾದಕ ರೈತ ಪೆಹ್ಲೂ ಖಾನ್ ಹತ್ಯೆಯ ಮೊದಲ ವಾರ್ಷಿಕ**ದ ಸಂದರ್ಭದಲ್ಲಿ ಭೂಮಿ ಅಧಿಕಾರ್ ಆಂದೋಲನದ ನೇತೃತ್ವದಲ್ಲಿ ಸಂಸದ್ ಮಾರ್ಗದಲ್ಲಿ ಪ್ರತಿಭಟನೆ
- * **ಮೇ 23 : ‘ಪೋಲ್ ಖೋಲ್–ಹಲ್ಲಾಬೋಲ್’.** ಮೋದಿ ಸರಕಾರದ 4 ವರ್ಷಗಳು ಮುಗಿಯುವ ಸಂದರ್ಭದಲ್ಲಿ ಅದರ ಟೊಳ್ಳುತನವನ್ನು ಬಯಲು ಮಾಡಿ–ದಾಳಿ ನಡೆಸಿ ಎಂಬ ಕರೆ ನೀಡುವ ಕಾರ್ಯಕ್ರಮ
- * **ಆಗಸ್ಟ್ 1 ರಿಂದ ಸಂಸತ್ತಿನ ಮುಂದೆ ರೈತರ ಸಾಲ ಹೊರೆ ಮುಕ್ತಿ, ಕನಿಷ್ಟ ಬೆಂಬಲ ಬೆಲೆ ಮತ್ತಿತರ ಬೇಡಿಕೆಗಳ ಮೇಲೆ ಅನಿರ್ದಿಷ್ಟ ಕಾಲದ ಜಂಟಿ ಧರಣಿ ಮುಷ್ಕರ**
- * **ಆಗಸ್ಟ್ 9: 10 ಕೋಟಿ ಸಹಿಗಳ ಅರ್ಪಣೆ ಮತ್ತು ಜೈಲ್ ಭರೋ:** ರೈತರಿಗೆ ಮಾಡಿರುವ ವಿಶ್ವಾಸದ್ರೋಹವನ್ನು ಪ್ರತಿಭಟಿಸಿ..
- * **ಸಪ್ಟಂಬರ್ 5: ಐತಿಹಾಸಿಕ ಕಿಸಾನ್–ಮಜ್ದೂರ್ ಸಂಘರ್ಷ ರ್‍ಯಾಲಿ**–ನವ ಉದಾರಿ ಆರ್ಥಿಕ ದೋರಣೆಗಳು ಮತ್ತು ಕೋಮುವಾದದ ವಿರುದ್ಧ.

ಈ ರಾಷ್ಟ್ರಮಟ್ಟದ ಕಾರ್ಯಕ್ರಮಗಳಲ್ಲದೆ, ಆಯಾ ರಾಜ್ಯಗಳಲ್ಲಿ, ಪ್ರದೇಶಗಳಲ್ಲಿ ಸ್ಥಳೀಯ ಜ್ವಲಂತ ಪ್ರಶ್ನೆಗಳ ಮೇಲೆ ಹೋರಾಟಗಳನ್ನು ಸಂಘಟಿಸಬೇಕು ಎಂದೂ ಸಿಕೆಸಿ ನಿರ್ಧರಿಸಿತು.

ಸಂಘಟನೆಯನ್ನು ಕ್ರೋಡೀಕರಿಸಲು ಮತ್ತು ವಿಸ್ತರಿಸಲು 34ನೇ ಎಐಕೆಎಸ್ ಸಮ್ಮೇಳನ ನೀಡಿರುವ ‘ಪ್ರತಿ ಹಳ್ಳಿಯಲ್ಲಿ ಕಿಸಾನ್ ಸಭಾ ಮತ್ತು ಪ್ರತಿ ರೈತ ಕಿಸಾನ್ ಸಭಾದಲ್ಲಿ ‘ಎಂಬ ಕರೆಯನ್ನು ಜಾರಿಗೆ ತರಲು ಹಾಗೂ ಸಾಧ್ಯವಾದಷ್ಟು ಗರಿಷ್ಟ ಪ್ರಮಾಣದಲ್ಲಿ ರೈತಾಪಿ ಜನಗಳನ್ನು ತಲುಪಬೇಕು ಎಂದು ಸಿಕೆಸಿ ಕರೆ ನೀಡಿತು. ಇದುವರೆಗಿನ ಸಾಧನೆಗಳನ್ನು ಕ್ರೋಡೀಕರಿಸಲು,ಸಂಘಟನೆಯ ಭವಿಷ್ಯದ ವಿಸ್ತರಣೆಗೆ ಹಾಗೂ ಕಾರ್ಯಕರ್ತರ ಪಡೆಯನ್ನು ದೇಶಾದ್ಯಂತ ಬಲಪಡಿಸಲು 5 ಕೋಟಿ ರೂ. ನಿಧಿಸಂಗ್ರಹ ನಡೆಸಲು ಸಿಕೆಸಿ ನಿರ್ಧರಿಸಿತು. ಎಐಕೆಎಸ್‌ನ 83ನೇ ಸ್ಥಾಪನಾ ದಿನವನ್ನು ಎಪ್ರಿಲ್ 11ರಂದು ಧ್ವಜಾರೋಹಣ, ಉಪನ್ಯಾಸಗಳು, ವಿಚಾರ ಸಂಕಿರಣಗಳು ಇತ್ಯಾದಿಗಳ ಮೂಲಕ ಆಚರಿಸಲು ಅದು ಕರೆ ನೀಡಿತು.

ಸಂಪಾದಕೀಯ

ಪ್ರಜಾಪ್ರಭುತ್ವವನ್ನು ಅರ್ಥಪೂರ್ಣಗೊಳಿಸುವುದು ಹೇಗೆ?

ಕರ್ನಾಟಕ ವಿಧಾನಸಭೆ ಚುನಾವಣೆ ಮೇ 12ರಂದು ನಡೆಯಲಿದ್ದು, ಮೇ 15ರಂದು ಫಲಿತಾಂಶ ಪ್ರಕಟವಾಗಲಿದೆ ಎಂದು ಘೋಷಿಸಲಾಗಿದೆ. ಒಂದೇ ಹಂತದಲ್ಲಿ ಚುನಾವಣೆ ನಡೆಯಲಿವೆ. ಈ ಬಾರಿಯ ಕರ್ನಾಟಕ ವಿಧಾನಸಭೆ ಚುನಾವಣೆ ರಾಜ್ಯಕ್ಕೆ ಮಾತ್ರವಲ್ಲ, ರಾಷ್ಟ್ರೀಯ ಮಹತ್ವವನ್ನು ಪಡೆದಿದೆ. ಅದರಲ್ಲೂ ತ್ರಿಪುರಾದಲ್ಲಿ ಬಿಜೆಪಿ ಗೆಲುವು, ಆ ಮೇಲೆ ಉತ್ತರ ಪ್ರದೇಶ ಮತ್ತು ಬಿಹಾರ ಉಪಚುನಾವಣೆಗಳಲ್ಲಿ ತೀವ್ರ ಹಿನ್ನಡೆಯ, ಬಿಜೆಪಿಯ 'ಕಾಂಗ್ರೆಸ್–ಮುಕ್ತ' ಭಾರತದ ಘೋಷಣೆಯ, ಮೋದಿ ಮ್ಯಾಜಿಕ್ ಕರಗುತ್ತಿರುವ, ಮುಂಬರುವ ಉತ್ತರ ಭಾರತದ ರಾಜ್ಯಗಳ ಮತ್ತು ಪಾರ್ಲಿಮೆಂಟ್ ಚುನಾವಣೆ ಹಿನ್ನೆಲೆಯಲ್ಲಿ ಈ ರಾಷ್ಟ್ರೀಯ ಮಹತ್ವ ಬಂದಿದೆ. ಮೋದಿ–ಶಾ ದ್ವಯರಿಗೆ 'ಟಫ್ ಫೈಟ್' ಎದುರಾಗುತ್ತಿರುವುದು, ಬಹುಶಃ ಪಂಜಾಬಿನ ನಂತರ ಕರ್ನಾಟಕದಲ್ಲೇ.

ರಾಷ್ಟ್ರೀಯವಾಗಿ ಅತ್ಯಂತ ಜನ–ವಿರೋಧಿ ನವ–ಉದಾರವಾದಿ ನೀತಿಗಳನ್ನು ಅತ್ಯಂತ ಆಕ್ರಾಮಕವಾಗಿ ಜಾರಿಗೆ ತರುತ್ತಿರುವ, ಪ್ರಜಾಪ್ರಭುತ್ವ ವ್ಯವಸ್ಥೆಯ ಎಲ್ಲಾ ಸಂಸ್ಥೆಗಳ ಮೇಲೆ ದಾಳಿ ಮಾಡುತ್ತಾ, ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ಖಾಸಗಿ ಸೈನ್ಯಗಳ ಹಿಂಸಾಚಾರದಿಂದ ಆಳುತ್ತಾ, ಹಿಂದೂ ರಾಷ್ಟ್ರ ಸ್ಥಾಪನೆಯತ್ತ ಭರದಿಂದ ಸಾಗುತ್ತಿರುವ ಬಿಜೆಪಿಯನ್ನು ರಾಜ್ಯದಲ್ಲಿ ಸೋಲಿಸಿ ಅದರ ಮುನ್ನಡೆಯನ್ನು ತಡೆಯುವುದು ದುರ್ಬಲಗೊಳಿಸುವುದು ಆದ್ಯತೆಯ ಕೆಲಸ ಎಂಬುದರ ಬಗ್ಗೆ ಅನುಮಾನವಿಲ್ಲ. ಆದರೆ ಅದು ನವ–ಉದಾರವಾದ ಬಿಡಲೊಲ್ಲದ, ಕೋಮುವಾದಿ ಅಜೆಂಡಾವನ್ನು ರಾಜಕೀಯವಾಗಿಯೂ ಆಡಳಿತಾತ್ಮಕವಾಗಿಯೂ ಹತ್ತಿಕ್ಕಲು ಸೋತಿರುವ ಮಾತ್ರವಲ್ಲ, ಅದನ್ನು ಮಾಡಲು ರಾಜಕೀಯ ಇಚ್ಚೆಯೂ ಇಲ್ಲದ ಕಾಂಗ್ರೆಸಿನಿಂದ ಸಾಧ್ಯವೇ? ಒಂದು ವಿರೋಧ ಪಕ್ಷವಾಗಿ ಕೆಲಸ ನಿರ್ವಹಿಸಲೂ ಸೋತಿರುವ, ನವ–ಉದಾರವಾದ ಮತ್ತು ಕೋಮುವಾದ ಇವೆರಡರ ಬಗೆಗೂ ಯಾವುದೇ ದೃಢ ಧೋರಣೆ ಇಲ್ಲದ, ಜೆಡಿ(ಎಸ್) ನಿಂದಲೂ ಇದು ಸಾಧ್ಯವಿಲ್ಲ.

ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಈ ಮೂರೂ ಪಕ್ಷಗಳೂ ತಮಗೆ ನಿಚ್ಚಳ ಬಹುಮತ ನಿಶ್ಚಿತ ಎಂದು ಹೇಳುತ್ತಿವೆ. ಕಾಂಗ್ರೆಸ್ ನ ಐದು ವರ್ಷಗಳ ಆಡಳಿತ ಕೆಲವು 'ಭಾಗ್ಯ'ಗಳ ಅಸಮರ್ಪಕ ಜಾರಿ ಬಿಟ್ಟರೆ ಅದರದ್ದೇ ಮತ್ತು ಬಿಜೆಪಿ–ಜೆಡಿ(ಎಸ್)ಗಳ ನವ–ಉದಾರವಾದಿ ಆಡಳಿತದ ಮತ್ತು ಸತತವಾಗಿ ಉಲ್ಬಣವಾಗುತ್ತಿದ್ದ ಕೋಮುವಾದೀಕರಣದ ಮುಂದುವರಿಕೆಯಾಗಿತ್ತು. ದುಡಿಯುವ ಜನರ ದಿಟ್ಟ ಸಮರಶೀಲ ಹೋರಾಟಗಳ ನಂತರ – ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು – ಇವರುಗಳ ಮಟ್ಟಿಗಂತೂ "ನುಡಿದಂತೆ ನಡೆಯಲಿಲ್ಲ". ನೋಟು ನಿಷೇಧ, ಜಿ.ಎಸ್.ಟಿ., ಸಾರ್ವಜನಿಕ ಉದ್ಯಮಗಳ ಖಾಸಗೀಕರಣ ಮುಂತಾದ ಬಿಜೆಪಿ ಕೇಂದ್ರ ಸರಕಾರದ ಉಗ್ರ ಕ್ರಮಗಳ ಜಾರಿಗೂ ಯಾವುದೇ ಪ್ರತಿರೋಧ ತೋರಿಲ್ಲ. ಕೈಗಾರಿಕೀಕರಣಕ್ಕೆ ವಿದೇಶಿ ಬಂಡವಾಳ ಹೂಡಿಕೆಯ ಕೆಲಸ ಮಾಡದ ಸಿದ್ಧ ಫಾರ್ಮುಲಾ ಬಿಟ್ಟರೆ ಮತ್ತು ಕೃಷಿ ಅಭಿವೃದ್ಧಿಯತ್ತವೂ ಯಾವುದೇ ಹೆಜ್ಜೆ ಇಡಲಿಲ್ಲ. ರಾಜ್ಯದ ಹೆಮ್ಮೆಯಾಗಿದ್ದ ಲೋಕಾಯುಕ್ತ ವ್ಯವಸ್ಥೆಯನ್ನು ಹಾಳುಗಡವಿ, ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸಿತು. ಆದ್ದರಿಂದ ಕಾಂಗ್ರೆಸ್ ಚುನಾವಣೆಯನ್ನು ಪ್ರಬಲ ಸ್ಪರ್ಧಿಯಾಗೇನೂ ಎದುರಿಸುತ್ತಿಲ್ಲ. 'ಆಡಳಿತ–ವಿರೋಧಿ ಅಲೆ'ಯನ್ನು ಎದುರಿಸುತ್ತಿಲ್ಲ ಎಂದು ಹೇಳುವ ಹಾಗಿಲ್ಲ.

ಬಿಜೆಪಿಯ ಕೇಂದ್ರ ಸರಕಾರದ ಇನ್ನೂ ಜೋರಾದ 'ಆಡಳಿತ–ವಿರೋಧಿ ಅಲೆ' ಮತ್ತು ವಿರೋಧ ಪಕ್ಷವಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡದ ಜೆಡಿ(ಎಸ್)ನ ವೈಫಲ್ಯದಿಂದಾಗಿ ಕಾಂಗ್ರೆಸ್ ಸ್ವಲ್ಪ ಅತಿಯಾದ ಆತ್ಮವಿಶ್ವಾಸದಿಂದಲೇ ಚುನಾವಣೆ ಕಣಕ್ಕೆ ಸಿದ್ಧವಾಗಿದೆ. ಬಿಜೆಪಿ ಹಲವು ಯಾತ್ರೆಗಳ ನಂತರವೂ, ಒಳಜಗಳಗಳನ್ನು ಪರಿಹರಿಸಿಕೊಳ್ಳಲಾಗದೆ ಹಿಂದಿನ ಬಿಜೆಪಿ ರಾಜ್ಯ ಸರಕಾರ ಮತ್ತು ಇಂದಿನ ಕೇಂದ್ರ ಸರಕಾರದ ವೈಫಲ್ಯಗಳಿಂದಾಗಿ, ಪ್ರಮುಖ ವಿರೋಧ ಪಕ್ಷವಾಗಿ ಅದಕ್ಕೆ ಇರಬೇಕಾಗಿದ್ದ ಸ್ವಾಭಾವಿಕ ಅನುಕೂಲ ಇಲ್ಲವಾಗಿದೆ. ಮಹದಾಯಿ, ಕಾವೇರಿ ವಿವಾದಗಳಲ್ಲಿ ಅದರ ಎಡಬಿಂಡಗಿ ನೀತಿ ಅದನ್ನು ಇನ್ನಷ್ಟು ದುರ್ಬಲಗೊಳಿಸಿದೆ. ಹಿಂದಿ ಹೇರಿಕೆ, ರಾಜ್ಯ ಧ್ವಜ, ಲಿಂಗಾಯತ ಸ್ವತಂತ್ರ ಧರ್ಮ ವಿಷಯಗಳಲ್ಲಿ ಅದನ್ನು ಕಾಂಗ್ರೆಸ್ ಇಕ್ಕಟ್ಟಿಗೆ ಸಿಲುಕಿಸಿದೆ. ಆಧ್ದರಿಂದ ಅದು ತನ್ನ ಹಣಬಲ, ತೋಳ್ಬಲ, ಕಾಂಗ್ರೆಸ್ ನಾಯಕರ ದೌರ್ಬಲ್ಯಗಳನ್ನು ಬಳಸಿ ಬೆದರಿಸಬಲ್ಲ ಕೇಂದ್ರ ಸರಕಾರದ ಅಧಿಕಾರ ಬಲ ಮತ್ತು ಅದಕ್ಕೆ ಚೆನ್ನಾಗಿ ಗೊತ್ತಿರುವ ಫಾರ್ಮುಲಾವಾದ ಕೋಮು ಹಿಂಸಾಚಾರಗಳನ್ನು ಬಳಸುತ್ತಿದೆ. ಈ ಎರಡೂ ಪಕ್ಷಗಳ ವೈಫಲ್ಯಗಳನ್ನು ಬಯಲು ಮಾಡಿ ಜನರ ನಿಜವಾದ ವಿಷಯಗಳನ್ನು ಎತ್ತಿಕೊಳ್ಳುವುದರಲ್ಲಿ ಆಸಕ್ತಿಯಿಲ್ಲದೆ, ಜೆಡಿ(ಎಸ್) ಅತಂತ್ರ ವಿಧಾನ ಸಭೆ ನಿರೀಕ್ಷಿಸುತ್ತಾ, 'ಕಿಂಗ್' ಅಲ್ಲದಿದ್ದರೂ 'ಕಿಂಗ್ ಮೇಕರ್' ಆಗುವ ಕನಸು ಕಾಣುತ್ತಿದೆ.

ಈ ಹಿನ್ನೆಲೆಯಲ್ಲಿ ಬಿಜೆಪಿಯನ್ನು ಸೋಲಿಸಲು ಎಲ್ಲಾ ಸೆಕ್ಯುಲರ್ ಪಕ್ಷಗಳು ಒಂದಾಗಿ ಹೋರಾಡಬೇಕೆಂದು ಕೆಲವರ ಪ್ರಯತ್ನ ಸಕಾರಾತ್ಮಕವಾದರೂ ಕಾರ್ಯಸಾಧ್ಯವಲ್ಲ. ಇದಕ್ಕೆ ಕಾಂಗ್ರೆಸ್ ಮತ್ತು ಅದರಲ್ಲೂ ಸಿದ್ದರಾಮಯ್ಯ ತಯಾರಿಲ್ಲ ಎಂಬುದು ಸ್ಪಷ್ಟ. ಕಾಂಗ್ರೆಸ್ ಪಕ್ಷ ಸಹ ಚುನಾವಣಾ–ಪೂರ್ವ ಮೈತ್ರಿ ಮಾಡಲು ಸಿದ್ಧವಿಲ್ಲ. ದೇವೇಗೌಡ–ಸಿದ್ಧರಾಮಯ್ಯ ಅವರುಗಳ ಚಾರಿತ್ರಿಕ ವೈರ ಮಾತ್ರವಲ್ಲ, ಕಾಂಗ್ರೆಸಿನ ಅತಿ ಆತ್ಮವಿಶ್ವಾಸ, ಜೆಡಿ(ಎಸ್) ನ ಅತಿ ಅವಕಾಶವಾದಿತನ ಸಹ ಇದಕ್ಕೆ ಅಡ್ಡಿಯಾಗಿದೆ. "ಬಿಜೆಪಿ ಜತೆ ನಿಂತು ಕೆಮ್ಮಿದರೆ" ಕಾಂಗ್ರೆಸ್ ಸೋಲುತ್ತದೆ ಎಂಬ ಕುಮಾರಸ್ವಾಮಿ ಹೇಳಿಕೆ ಇದು ಕಾರ್ಯಸಾಧ್ಯವಲ್ಲ ಎಂದು ಸ್ಪಷ್ಟಪಡಿಸುತ್ತದೆ.

ಚುನಾವಣೆ ಘೋಷಣೆ ಆಗುತ್ತಿದ್ದಂತೆ ಮೂರೂ ಪಕ್ಷಗಳ ಟಿಕೇಟುಗಳಿಗೆ ಹಣಾಹಣಿ ಆರಂಭವಾಗಿದೆ. ಟಿಕೆಟು ಸಿಗಲಿಕ್ಕಿಲ್ಲ ಎಂಬ ನಿರೀಕ್ಷೆಯಿಂದಲೋ, ಗೆಲ್ಲುವ ಪಕ್ಷದಲ್ಲಿ ಅಧಿಕಾರ ಪಡೆಯುವುದು ಹೇಗೆ ಎಂಬ ಲೆಕ್ಕಾಚಾರದಿಂದ, ದುಡ್ಡು–ಪದವಿಗಳ ಆಮಿಷದಿಂದಲೋ "ಪಕ್ಷಾಂತರ ಪರ್ವ" ಆರಂಭವಾಗಿದೆ. ಈ ಪರ್ವ ಅನಾವರಣಗೊಳ್ಳುತ್ತಿರುವ ವೇಗ ನೋಡಿದರೆ ಈ ಮೂರು ಪಕ್ಷಗಳ ನಡುವೆ ಏನಾದರೂ ವ್ಯತ್ಯಾಸ ಇದೆಯೆ ಎಂಬ ಅನುಮಾನ ಬರುವಂತಿದೆ. ಹಿಂದಿನ ಮತ್ತು ಈಗಿನ "ಪಕ್ಷಾಂತರ ಪರ್ವ"ಗಳ ಪರಿಣಾಮವಾಗಿ ಮೂರೂ ಪಕ್ಷಗಳಲ್ಲಿ "ವಲಸಿಗರು" ಮತ್ತು "ಮೂಲನಿವಾಸಿ"ಗಳ ನಡುವೆ ಘರ್ಷಣೆಯೂ ಆರಂಭವಾಗಿದೆ.

ಆದರೆ ಈ ಮೂರು ಬೂರ್ಜ್ವಾ–ಭೂಮಾಲಕ ಪಕ್ಷಗಳ ಅಧಿಕಾರಕ್ಕಾಗಿ ಘರ್ಷಣೆಯ ಭರಾಟೆಯಲ್ಲಿ ಚುನಾವಣಾ ವ್ಯವಸ್ಥೆ ಇನ್ನಷ್ಟು ಭ್ರಷ್ಟವಾಗಲಿದೆ ಎಂಬುದಕ್ಕೆ ಸಂಶಯವೇ ಇಲ್ಲ. ಹಣಬಲ, ತೋಳ್ಬಲದ ಪ್ರದರ್ಶನ ತಾರಕಕ್ಕೇರಲಿದೆ. ಈ ಸಂಧರ್ಭದಲ್ಲಿ ಚರ್ಚೆಯಾಗಬೇಕಾಗಿದ್ದ ಜನರ ನಿಜವಾದ ಸಮಸ್ಯೆಗಳು, ದುಡಿಯುವ ಜನರ ಹಕ್ಕೊತ್ತಾಯಗಳು, ರಾಜ್ಯದ ಅಭಿವೃದ್ಧಿ ಮಾದರಿಗಳು ಮೂಲೆಗುಂಪಾಗುವುದೂ ಖಚಿತ, ಹೀಗಾಗದಂತೆ ನೋಡುವುದು ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಕೆಲಸವಾಗಬೇಕು. ದೇಶ ಎದುರಿಸುತ್ತಿರುವ ಫ್ಯಾಸಿಸ್ಟ್ ಮಾದರಿಯ ಅಪಾಯದ ಬಗ್ಗೆ ಜನತೆಯನ್ನು ಎಚ್ಚರಿಸುವುದು, ಚುನಾವಣಾ ಭ್ರಷ್ಟಾಚಾರವನ್ನು ಬಯಲಿಗೆಳೆಯುವುದು, ಈ ಮೂರು ಪಕ್ಷಗಳ ನವ–ಉದಾರವಾದಿ ಮತ್ತು (ಮೃದು ಅಥವಾ ಕಡು) ಕೋಮುವಾದಿ ಧೋರಣೆಗಳಿಗೆ ಬದಲಿ ರೂಪಿಸಿ ಪ್ರಸ್ತುತ ಪಡಿಸುವುದು, ಎಡ–ಪ್ರಜಾಸತ್ತಾತ್ಮಕ ಪಕ್ಷಗಳ ಶಕ್ತಿಗಳ ದನಿಯನ್ನು ವಿಧಾನಸಭೆಯಲ್ಲಿ ಮೂಡಿಸುವುದು – ಚುನಾವಣೆಗಳಲ್ಲಿ ಸ್ಪರ್ಧಿಸುವ ಅಥವಾ ಸ್ಪರ್ಧಿಸದ ಎಲಾ ಕ್ಷೇತ್ರಗಳಲ್ಲಿ ಎಲ್ಲಾ ಎಡ–ಪ್ರಜಾಸತ್ತಾತ್ಮಕ ಪಕ್ಷಗಳ ಶಕ್ತಿಗಳ ಕರ್ತವ್ಯವಾಗಬೇಕು. ಆ ಮೂಲಕ ಮಾತ್ರ ಪ್ರಜಾಪ್ರಭುತ್ವವನ್ನು ಅರ್ಥಪೂರ್ಣಗೊಳಿಸುವತ್ತ ಒಂದು ಸಣ್ಣ ಹೆಜ್ಜೆಯನ್ನಾದರೂ ಇಡಬಹುದು.

ಕುಖ್ಯಾತ 'postcard.news' ಸ್ಥಾಪಕ ಬಂಧನ

ಎಚ್ಚರಿಕೆ ! ಸುಳ್ಳು ಸುದ್ದಿ ಫ್ಯಾಕ್ಟರಿಗಳು ಓವರ್ ಟೈಮ್ ಮಾಡಲಿವೆ





ಸುಳ್ಳು ಸುದ್ದಿ ಪ್ರಕಟಿಸಿದ್ದ ಆರೋಪದಡಿ 'ಪೋಸ್ಟ್‌ಕಾರ್ಡ್ ಡಾಟ್ ನ್ಯೂಸ್' ವೆಬ್ ಸೈಟಿನ ಮಾಲೀಕ ಮಹೇಶ್ ವಿಕ್ರಮ್ ಹೆಗ್ಡೆಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. 'ಪೋಸ್ಟ್‌ಕಾರ್ಡ್ ಡಾಟ್ ನ್ಯೂಸ್' ಇಂಗ್ಲೀಷ್, ಹಿಂದಿ ಹಾಗೂ ಕನ್ನಡದಲ್ಲೂ ಪ್ರತ್ಯೇಕ ವೆಬ್ ಸೈಟು ಗಳನ್ನು ನಿರ್ವಹಿಸುತ್ತಿದೆ.

'ಜೈನ ಮುನಿ ಉಪಾಧ್ಯಾಯ ಮಾಯಾಂಕ್ ಸಾಗರ್ ಜೀ ಅವರ ಮೇಲೆ ಮುಸ್ಲಿಮ್ ಯುವಕನೊಬ್ಬ ಹಲ್ಲೆ ಮಾಡಿದ್ದಾನೆ' ಎಂದು ಸುಳ್ಳು ಸುದ್ದಿ ಪ್ರಕಟಿಸಿದ್ದ ಆರೋಪದಡಿ 'ಪೋಸ್ಟ್‌ಕಾರ್ಡ್ ಡಾಟ್ ನ್ಯೂಸ್' ಮಾಲೀಕ ಮಹೇಶ್ ವಿಕ್ರಮ್ ಹೆಗ್ಡೆಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಸುಳ್ಳು ಸುದ್ದಿ ಸಂಬಂಧ ಗಫರ್ ಬೇಗ್ ಎಂಬುವವರು ದೂರು ನೀಡಿದ್ದರು. ಆ ಬಗ್ಗೆ ತನಿಖೆ ನಡೆಸಿದಾಗ ಪುರಾವೆಗಳು ಸಿಕ್ಕಿದ್ದವು. ಹೀಗಾಗಿ, ಮಹೇಶನನ್ನು ಬಂಧಿಸಿದ್ದೇವೆ. ಆತನ ಜಾಲತಾಣದ ನಿರ್ವಹಣೆ ಮಾಡುತ್ತಿದ್ದಾರೆ ಎನ್ನಲಾದ ಗೌರವ್ ಪ್ರಧಾನ್ ಹಾಗೂ ದೀಪಕ್ ಶೆಟ್ಟಿ ಎಂಬುವರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರಿಬ್ಬರು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153ಎ (ಧರ್ಮ, ಜನಾಂಗ, ಜನ್ಮಸ್ಥಳ, ಭಾಷೆಗಳ ಆಧಾರದಲ್ಲಿ ಗುಂಪುಗಳ ಮಧ್ಯೆ ದ್ವೇಷ ಬಿತ್ತುವುದು ಮತ್ತು ಸಾಮರಸ್ಯಕ್ಕೆ ಧಕ್ಕೆ ತರುವಂಥ ಕೃತ್ಯಗಳನ್ನೆಸಗುವುದು), 295ಎ (ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಕೃತ್ಯ) ಮತ್ತು 120ಬಿ (ಅಪರಾಧ ಸಂಚು) ಅನ್ವಯ ಪ್ರಕರಣ ದಾಖಲಿಸಲಾಗಿದೆ.

ಶ್ರವಣಬೆಳಗೋಳದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಮಹಾಮಸ್ತಕಾಭಿಷೇಕದಲ್ಲಿ ಪಾಲ್ಗೊಂಡಿದ್ದ ಮುನಿ, ಅದನ್ನು ಮುಗಿಸಿಕೊಂಡು ಭಕ್ತರ ಸಮೇತ ಮಹಾರಾಷ್ಟ್ರಕ್ಕೆ ಹೊರಟಿದ್ದರು. ನಂಜನಗೂಡಿನಿಂದ ಕನಕಗಿರಿ ಮಾರ್ಗ ಮಧ್ಯೆ ಇರುವ ಕವಲಂದೆ ಗ್ರಾಮದ ಬಳಿ ಮಾರ್ಚ್ 11 ರಂದು ಬೈಕೊಂದು ಮುನಿಗಳು ಹಾಗೂ ಅವರ ಭಕ್ತರಿಗೆ ಗುದ್ದಿತ್ತು.

ಅದರಿಂದ ಮುನಿಯವರ ಬಲತೋಳು, ಬಲ ಮೊಣಕೈ, ಹಣೆ ಹಾಗೂ ಮುಖಕ್ಕೆ ಗಾಯವಾಗಿತ್ತು. ಸ್ಥಳೀಯರೇ ಅವರನ್ನು ಗ್ರಾಮಕ್ಕೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದರು ಎಂದರು.

ಅಪಘಾತದ ಸುದ್ದಿ ತಿಳಿದ ಮಹೇಶ್, ಎರಡು ಧರ್ಮಗಳ ನಡುವೆ ದ್ವೇಷ ಭಾವನೆ ಹುಟ್ಟುಹಾಕುವ ಹಾಗೂ ರಾಜ್ಯ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ, 'ಕರ್ನಾಟಕದಲ್ಲಿ ಜೈನ ಮುನಿ ಮೇಲೆ ಮುಸ್ಲಿಮ್ ಯುವಕನೊಬ್ಬ ಹಲ್ಲೆ ಮಾಡಿದ್ದಾನೆ. ಇದು ಶೋಚನೀಯ' ಎಂದು 'postcard.news' ಹೆಸರಿನ ಜಾಲತಾಣದಲ್ಲಿ ಸುದ್ದಿ ಪ್ರಕಟಿಸಿದ್ದ. ಜತೆಗೆ, ತನ್ನ ಟ್ವಿಟರ್ ಹಾಗೂ ಫೇಸ್ಬುಕ್ ಖಾತೆಯಲ್ಲೂ ಅದನ್ನೇ ಬರೆದುಕೊಂಡಿದ್ದ.

ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದ ಈ ಸುದ್ದಿಯನ್ನು ಸಾವಿರಾರು ಮಂದಿ ವೀಕ್ಷಿಸಿದ್ದರು. ಅದಕ್ಕೆ ಪ್ರತಿಯಾಗಿ ಧರ್ಮ ನಿಂದಿಸುವ ಪ್ರತಿಕ್ರಿಯೆಗಳನ್ನು ಹಲವರು ವ್ಯಕ್ತಪಡಿಸಿದ್ದರು. ಇದನ್ನು ಗಮನಿಸಿದ್ದ ಗಫರ್, ಠಾಣೆಗೆ ಬಂದು ದೂರು ಕೊಟ್ಟಿದ್ದರು ಎಂದು ಪೊಲೀಸರು ತಿಳಿಸಿದರು. ಈ ಮೂರು

ಪುಟ 4 ಕ್ಕೆ

ಗುರುಪುರ ಕೈಕಂಭದಲ್ಲಿ ರಾಜಕೀಯ ಸಮಾವೇಶ:

ಮಂಗಳೂರು ನಗರ ಉತ್ತರ ಅಸೆಂಬ್ಲಿ ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷವು ಅಭ್ಯರ್ಥಿಯನ್ನು ಚುನಾವಣೆಗೆ ನಿಲ್ಲಿಸುವ ಹಿನ್ನೆಲೆಯಲ್ಲಿ ಮಾರ್ಚ್ 25 ರಂದು ಗುರುಪುರ ಕೈಕಂಭದಲ್ಲಿ ಪಕ್ಷದ ಹಿತೈಷಿಗಳ ಬೃಹತ್ ಸಮಾವೇಶ ನಡೆಯಿತು.

ಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಕಾರ್ಯಕರ್ತರು ಹಿತೈಷಿಗಳು ಯಾವ ರೀತಿ ಕೆಲಸ ಮಾಡಬೇಕಿದೆ ಎಂಬ ಬಗ್ಗೆ ಮುಖಂಡರು ಮಾತನಾಡಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು.ಬಿ.ಲೋಕಯ್ಯ, ಯಾದವ ಶೆಟ್ಟಿ ಮಾತನಾಡಿದರು. ಸಿಪಿಐ(ಎಂ) ಗುರುಪುರ ವಲಯ ಸಮಿತಿ ಕಾರ್ಯದರ್ಶಿ ಸದಾಶಿವ ದಾಸ್ ಸ್ವಾಗತಿಸಿ, ಮಂಗಳೂರು ನಗರ ಉತ್ತರ ಕಾರ್ಯದರ್ಶಿ ದಯಾನಂದ ಶೆಟ್ಟಿ ವಂದಿಸಿದರು. ಅಸೆಂಬ್ಲಿ ಕ್ಷೇತ್ರದ ವಿವಿಧ ಗ್ರಾಮಗಳಿಂದ ಕಾರ್ಯಕರ್ತರು ಆಗಮಿಸಿದ್ದರು.

ಎಂ.ಆರ್.ಪಿ.ಎಲ್. ವಿರುದ್ಧ ಧರಣಿ

– ವಾಸುದೇವ ಉಚ್ಚಿಲ

ಮೂವತ್ತು ವರ್ಷಗಳ ಹಿಂದೆ ದ.ಕ. ಜಿಲ್ಲೆಯಲ್ಲಿ ಎಂಆರ್‌ಪಿಎಲ್ ಸ್ಥಾಪನೆ ಆದಾಗ, ಆ ಕಂಪೆನಿಯಿಂದ ಲಕ್ಷ ಉದ್ಯೋಗ ಸೃಷ್ಟಿಯಾಗುವವು ಎಂಬ ಭರವಸೆಯನ್ನು ಅಂದು ಆಳುವ ಪಕ್ಷ ಕಾಂಗ್ರೆಸ್ಸು ನೀಡಿತ್ತು. ಆದರೆ ಕಂಪೆನಿಗಾಗಿ ಹಂತ ಹಂತಗಳಲ್ಲಿ ಸುತ್ತಲಿನ ಭೂಮಿಗಳನ್ನು ಸರಕಾರ ಸ್ವಾಧೀನ ಪಡಿಸಿ ನೀಡುತ್ತಿದೆ. ಈ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಕೃಷಿ ಜಮೀನಿಗೂ ವಿನಾಯಿತಿ ಇಲ್ಲ ಎಂಬಂತಾಗಿದೆ. ಇದೀಗ 4ನೇ ಹಂತ ವಿಸ್ತರಣೆಯಲ್ಲಿ ಕಂಪೆನಿ ಪೆರ್ಮುದೆ ಗ್ರಾಮಕ್ಕೆ ಕಾಲಿಟ್ಟಿದ್ದು, ಕಂಪೆನಿಯ ದಬ್ಬಾಳಿಕೆಯ ಕಾರ್ಯವೈಖರಿಯನ್ನು ಪ್ರತಿಭಟಿಸಿದ ಪೆರ್ಮುದೆ ರೈತರ ಮೇಲೆ ಜಮೀನು ರಹಿತ ಮೊಕದ್ದಮೆ ಹೂಡಲಾಗಿದೆ. ನಿರ್ವಸಿತರಿಗೆ ಉದ್ಯೋಗದ ಭರವಸೆಯೂ ಇಲ್ಲ. ಕಂಪೆನಿಯ ಆವರಣದ ಹೊರ ಅಂಚಿನಲ್ಲಿರುವ ತೋಕೂರು, ಜೋಕಟ್ಟೆ ಗ್ರಾಮಸ್ಥರು ಜಲಮಾಲಿನ್ಯ, ವಾಯು ಮಾಲಿನ್ಯ, ಪರಿಸರ ಮಾಲಿನ್ಯವೇ ಮೊದಲಾದ ಪೀಡೆಗಳನ್ನು ಅನುಭವಿಸುತ್ತಿದ್ದಾರೆ. ವಿವಿಧ ಮಾಲಿನ್ಯಗಳ ವಿರುದ್ಧ ಕಳೆದ 4 ವರ್ಷಗಳಿಂದ ಜೋಕಟ್ಟೆ ಗ್ರಾಮಸ್ಥರು ಹೋರಾಡುತ್ತಿದ್ದಾರೆ. ಮಾಲಿನ್ಯ ನಿಯಂತ್ರಕ ಸ್ಥಾವರಗಳನ್ನು ಸ್ಥಾಪಿಸುವುದೇ ಆಗಲೀ, ಪರಿಹಾರ ನೀಡುವುದೇ ಆಗಲಿ ಯಾವುದೇ ಕ್ರಮಗಳನ್ನು ಎಂಆರ್‌ಪಿಎಲ್ ಕೈಗೊಳ್ಳುತ್ತಿಲ್ಲ.

ಉದ್ಯೋಗ ನೀಡುತ್ತೇವೆಂದು ಜನರನ್ನು ವಂಚಿಸಿರುವ, ಶುದ್ಧ ಪರಿಸರದ ಬದಲು ವಿಷಯುಕ್ತ ಪರಿಸರವನ್ನೇ ನೀಡುತ್ತಿರುವ, ಭೂಮಿ ಒದಗಿಸುವ ರೈತರಿಗೆ ಹಿಂಸೆ ನೀಡುತ್ತಿರುವ ಎಂಆರ್‌ಪಿಎಲ್ ತನ್ನ ಕಾರ್ಯವೈಖರಿಯನ್ನು ಬದಲಾಯಿಸಬೇಕೆಂದು ಆಗ್ರಹಿಸಿ ಡಿವೈಎಫ್‌ಐ ಜೋಕಟ್ಟೆ ನಾಗರಿಕ ಹೋರಾಟ ಸಮಿತಿ ಮತ್ತು ಸುರತ್ಕಲ್ ಎಂಆರ್‌ಪಿಎಲ್ ವಿರೋಧ ಸಮಿತಿ ನೇತೃತ್ವದಲ್ಲಿ ಮಾರ್ಚ್ 22 ರಂದು ಎಂಆರ್‌ಪಿಎಲ್ ಮುಖದ್ವಾರದ ಎದುರು ಹಗಲು–ರಾತ್ರಿ ಧರಣಿಯನ್ನು ನಡೆಸಲಾಯಿತು. ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದರು.

ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಶ್ರೀನಾತ್ ಕಾಟಿಪಳ್ಳ, ನಾಗರಿಕ ಹೋರಾಟ ಸಮಿತಿಯ ಅಬೂಬಕರ್ ಬಾವಾ, ಶ್ರೀನಿವಾಸ ಜೋಕಟ್ಟೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ದಲಿತ ಕಾಲನಿಗೆ ಶುದ್ಧ ನೀರು ಪೂರೈಕೆಗಾಗಿ ಉಳ್ಳಾಲ ನಗರಸಭೆಗೆ ಮುತ್ತಿಗೆ:



ಉಳ್ಳಾಲ ನಗರ ಸಭೆ ವ್ಯಾಪ್ತಿಯ ಅಬ್ಬಂಜರ ಎಂಬಲ್ಲಿ ನಗರಸಭೆಯ ಬೋರ್‌ವೆಲ್‌ನಿಂದ ಪೂರೈಕೆಯಾಗುತ್ತಿರುವ ನೀರು ಮಣ್ಣು ಮಿಶ್ರಿತವಾಗಿದ್ದು, ಇದಕ್ಕೆ ಜನರ ವಿರೋಧದ ನಡುವೆ ಅವೈಜ್ಞಾನಿಕವಾಗಿ ಬೋರ್ ಹೊಡೆಸಿದ್ದು ಕಾರಣವಾಗಿದೆ. ಈ ಬೋರಿನ ನೀರು ಅಬ್ಬಂಜರದ ದಲಿತ ಕಾಲನಿಗೆ ಪೂರೈಕೆಯಾಗುತ್ತಿತ್ತು. ಅಲ್ಲಿನ ನಿವಾಸಿಗಳು ಇದನ್ನು ನಗರ ಸಭೆಯ ಗಮನಕ್ಕೂ, ಜಿಲ್ಲಾಧಿಕಾರಿಯ ಗಮನಕ್ಕೂ ತಂದಿದ್ದರು. ಇದನ್ನು ನಗರ ಸಭೆಯ ಗಮನಕ್ಕೆ ತರುವ ಸಲುವಾಗಿ ಕಾಲನಿ ನಿವಾಸಿಗಳು ಸಿದ್ಧರಾಗಿ ಕಾರ್ಯಕ್ರಮ ಯೋಜಿಸಿರುತ್ತಾರೆ.

ಮಾರ್ಚ್ 26 ರಂದು ದಲಿತ ಹಕ್ಕುಗಳ ಸಮಿತಿ ಉಳ್ಳಾಲ ವಲಯ ಮತ್ತು ಡಿವೈಎಫ್‌ಐ ನೇತೃತ್ವದಲ್ಲಿ ಉಳ್ಳಾಲ ನಗರ ಸಭಾ ಅಧ್ಯಕ್ಷರ ಕಚೇರಿಗೆ ಮುತ್ತಿಗೆ ಹಾಕಲಾಯಿತು. ಅಬ್ಬಂಜರ ದಲಿತ ಕಾಲನಿಗೆ ಶುದ್ಧ ನೀರಿನ ಸರಬರಾಜು ಮಾಡಬೇಕು ಹಾಗೂ ಅಲ್ಲಿ ರಸ್ತೆ ಮಧ್ಯೆ ಇರುವ ವಿದ್ಯುತ್ ಕಂಬವನ್ನು ಸ್ಥಳಾಂತರಿಸಬೇಕು ಎಂದು ಆಗ್ರಹಿಸಲಾಯಿತು.

ಡಿವೈಎಫ್‌ಐ ಉಳ್ಳಾಲ ವಲಯ ಮುಖಂಡರಾದ ನಿತಿನ್ ಕುತ್ತಾರ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಡಿವೈಎಫ್‌ಐ ಸ್ಥಳೀಯ ಘಟಕದ ಪುರಂದರ, ಅಭಿಷೇಕ್, ದಲಿತ ಹಕ್ಕುಗಳ ಸಮಿತಿಯ ರೋಹಿದಾಸ್, ನಾರಾಯಣ ತಲಪಾಡಿ, ಕಾರ್ಮಿಕ ಮುಖಂಡರಾದ ಪದ್ಮಾವತಿ ಶೆಟ್ಟಿ, ವಿಲಾಸಿನಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ತೊಕ್ಕೊಟ್ಟಿನಲ್ಲಿ ಭಗತ್‌ಸಿಂಗ್ ಹುತಾತ್ಮ ದಿನಾಚರಣೆ:

ಭಗತ್‌ಸಿಂಗ್ ಹುತಾತ್ಮ ದಿನವನ್ನು ಉಳ್ಳಾಲ ಡಿವೈಎಫ್‌ಐ ನೇತೃತ್ವದಲ್ಲಿ ಆಚರಿಸಲಾಯಿತು. ತೊಕ್ಕೊಟ್ಟು ಬಸ್ ನಿಲ್ದಾಣದ ಬಳಿ ನಡೆದ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು.

ಅದಕ್ಕೂ ಮೊದಲು ಕಲ್ಲಾಪು ಯುನಿಟಿ ಹಾಲ್‌ನಿಂದ ತೊಕ್ಕೊಟ್ಟು ಬಸ್ ನಿಲ್ದಾಣದ ವರೆಗೆ ಯೂತ್ ಮಾರ್ಚ್ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಉಳ್ಳಾಲ ವಲಯ ಅಧ್ಯಕ್ಷ ಜೀವನ್‌ರಾಜ್ ಕುತ್ತಾರ್, ಕಾರ್ಯದರ್ಶಿ ರಜಾಕ್ ಮೊಂಟೆಪದವು, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸಹ ಕಾರ್ಯದರ್ಶಿ ನಿತಿನ್ ಕುತ್ತಾರ್, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಮಾಧುರಿ ಬೋಳಾರ್ ಸಭೆಯಲ್ಲಿ ಭಾಗವಹಿಸಿದ್ದರು.

ಸಂಗಾತಿ ಶ್ರೀಧರ್ ಕುಂಟಲಗುಡ್ಡೆ ನಿಧನ:



ಬಜಾಲು–ಪಕ್ಕಲಡ್ಕ ನಿವಾಸಿ ಅಳಪೆ ಪ್ರದೇಶ ಬೀಡಿ ಕಾರ್ಮಿಕ ಸಂಘಟನೆಯ ಗೌರವಾಧ್ಯಕ್ಷರಾಗಿದ್ದ ಶ್ರೀಧರ ಕುಂಟಲಗುಡ್ಡೆ ಇವರು ಅಲ್ಪಕಾಲದ ಅಸೌಖ್ಯದಿಂದ ಮಾರ್ಚ್ 24ರ ರಾತ್ರಿ ನಿಧನರಾದರು. ಅವರು ಬೀಡಿ ಕಾರ್ಮಿಕರೇ ನಡೆಸುತ್ತಿದ್ದ ಪಕ್ಕಲಡ್ಕ ಬೀಡಿ ಬ್ರಾಂಚಿನ ವ್ಯವಸ್ಥಾಪಕರಾಗಿ ಕೊನೆಯವರೆಗೂ ಕಾರ್ಯನಿರ್ವಹಿಸುತ್ತಿದ್ದರು. ಅವರಿಗೆ 70 ವರ್ಷ ವಯಸ್ಸಾಗಿತ್ತು.

ಸ್ಥಳೀಯವಾಗಿ ಸಿಪಿಐ(ಎಂ) ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದ ಶ್ರೀಧರ ಅವರ ಅಂತ್ಯದರ್ಶನದಲ್ಲಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಮುಖಂಡರಾದ ಕೆ.ಆರ್.ಶ್ರೀಯಾನ್, ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ, ಯಾದವ ಶೆಟ್ಟಿ, ಯು.ಬಿ.ಲೋಕಯ್ಯ, ಕೃಷ್ಣಪ್ಪ ಸಾಲ್ಯಾನ್ ಭಾಗವಹಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಮೃತ ಶ್ರೀಧರ ಕುಂಟಲಗುಡ್ಡೆಯವರು ಸುನಿಲ್ ಕುಮಾರ್ ಬಜಾಲ್ ಒಳಗೊಂಡಂತೆ 3 ಮಂದಿ ಪುತ್ರರು, ಇಬ್ಬರು ಪುತ್ರಿಯರು ಹಾಗೂ ಪತ್ನಿ, ಕುಟುಂಬವನ್ನು ಅಗಲಿದ್ದಾರೆ.

ಎಚ್ಚರಿಕೆ ! ಸುಳ್ಳು ಸುದ್ದಿ ಫ್ಯಾಕ್ಟರಿಗಳು ಓವರ್ ಟೈಮ್.........

ಪುಟ 3 ರಿಂದ

ವೆಬ್ ಸೈಟುಗಳ ವಿರುದ್ಧ ಸೈಬರ್ ಠಾಣೆಯಲ್ಲಿ 7 ದೂರುಗಳು ದಾಖಲಾಗಿವೆ. ಈ ಬಗ್ಗೆಯೂ ಆರೋಪಿಗಳಿಂದ ಹೇಳಿಕೆ ಪಡೆಯಲಿದ್ದೇವೆ’ ಎಂದು ಪೊಲೀಸರು ತಿಳಿಸಿದರು.

ನಿರೀಕ್ಷಿತವೋ ಎಂಬಂತೆ ಬಿಜೆಪಿ ಸಂಘಪರಿವಾರದ ನಾಯಕರು ಆರೋಪಿಯನ್ನು ಸಮರ್ಥಿಸಲು ಮುಂದೆ ಬಂದಿದ್ದಾರೆ. “ಮಹೇಶ್ ವಿಕ್ರಮ್ ಹೆಗ್ಡೆಯನ್ನು ಇವತ್ತು ಬೆಳಿಗ್ಗೆ ಹೇಡಿ ಕಾಂಗ್ರೆಸ್ ಸರ್ಕಾರ ಐಟಿ ಕಾಯ್ದೆ 66 ಅನ್ವಯ ಬಂಧಿಸಿದೆ, ಅದೂ ಸಿಸಿಬಿಯನ್ನು ಬಳಸಿಕೊಂಡು! ನಾಚಿಕೆಗೇಡು @INCKarnataka.” ಎಂದು ಸಂಸದ ಪ್ರತಾಪ್ ಸಿಂಹ ಟ್ವೀಟ್ ಮಾಡಿದ್ದಾರೆ. ಇದು ಇನ್ನೊಂದು ಸುಳ್ಳು ಸುದ್ದಿ. ಈಗಾಗಲೇ ವರದಿಯಾದ ಹಾಗೆ ಸೆಕ್ಷನ್ 153ಎ, 295ಎ, 120ಬಿ ಅಡಿ ಅವರನ್ನು ಬಂಧಿಸಲಾಗಿದೆ. ಇದು ಆಶ್ಚರ್ಯಕರವೇನಲ್ಲ.

‘ಪೋಸ್ಟ್‌ಕಾರ್ಡ್ ಡಾಟ್ ನ್ಯೂಸ್’ ಬಿಜೆಪಿ–ಸಂಘಪರಿವಾರ ಕೃಪಾಪೋಷಿತ ಸುಳ್ಳುಸುದ್ದಿ ಹರಡುವ ಅಸಂಖ್ಯಾತ ನೆಟ್ ಫ್ಯಾಕ್ಟರಿಗಳಲ್ಲಿ ಒಂದು. ಆರೋಪಿ ಮಹೇಶ್ ಹೆಗಡೆಯ ಟ್ವಿಟರ್ ಖಾತೆ ಪ್ರಧಾನಿ ಮೋದಿ ಫಾಲೋ ಮಾಡುವ ಖಾತೆಗಳಲ್ಲಿ ಒಂದು. ಇಂತಹ ಸುಳ್ಳು ಸುದ್ದಿ ಫ್ಯಾಕ್ಟರಿಗಳ ಸಂಪಾದಕ ನಿರ್ವಾಹಕರು, ಹಾಗೂ ನೆಟ್ ಆಧಾರಿತ ಬುದ್ಧಿಜೀವಿ–ಪತ್ರಕರ್ತರ ಮೇಲೆ ದಾಳಿ–ಕೊಲೆ ಬೆದರಿಕೆ ಹಾಕುವವರ, ಕೋಮು–ಹಿಂಸಾಚಾರ ಪ್ರಚೋದಕರ, ದಲಿತ–ಮುಸ್ಲಿಂ–ಮಹಿಳೆಯರ ದ್ವೇಷಿಗಳಲ್ಲಿ ಅನೇಕರನ್ನು ಮೋದಿ ಫಾಲೋ ಮಾಡುತ್ತಿದ್ದು, ಇಂತಹವರ ಪಟ್ಟಿಯನ್ನೇ ಆಲ್ಟ್‌ನ್ಯೂಸ್ ಎಂಬ ವೆಬ್ ಸೈಟು ಪ್ರಕಟಿಸಿದೆ. ಆದರೂ ಇದು ಯಾವುದೇ ಪರಿಣಾಮವಾಗಿಲ್ಲ.

ಕರ್ನಾಟಕದಲ್ಲಿ ಚುನಾವಣೆಗಳು ಘೋಷಣೆಯಾಗಿದ್ದು ಇಂತಹ ಸುಳ್ಳು ಸುದ್ದಿ ಫ್ಯಾಕ್ಟರಿಗಳು ಓವರ್ ಟೈಮ್ ಕೆಲಸ ಮಾಡಲಿವೆ. ಈಗಾಗಲೇ “ಬಿಗ್ ಡಾಟಾ” ಮತ್ತು ‘ಡಾಟಾ ಅನಲಿಟಿಕ್ಸ್’ ಐಟಿ ತಂತ್ರಜ್ಞಾನ ಬಳಸಿ ಅಮೆರಿಕದಲ್ಲಿ ಟ್ರಂಪ್ ಆಯ್ಕೆಗೆ ಕಾರಣವಾಗಿದ್ದ ಕ್ಯಾಂಬ್ರಿಜ್ ಅನಾಲಿಟಿಕಾ ಹಗರಣ ಮತ್ತು ಭಾರತದಲ್ಲೂ ಅಂತಹುದೇ ಪ್ರಯತ್ನಗಳ ಬಗ್ಗೆ ಪುಟ 12ರಲ್ಲಿ “ಬಿಗ್ ಡಾಟಾ+ಫೇಕ್ ಸುದ್ದಿ+ಬಿಗ್ ಮನಿ” ಎಂಬ ಒಂದು ಟಿಪ್ಪಣಿಯಲ್ಲಿ ತಿಳಿಸಿದ ಹಾಗೆ ಪ್ರಜಾಪ್ರಭುತ್ವವನ್ನು ಹೈ ಜಾಕ್ ಮಾಡುವ ಪ್ರಯತ್ನ ನಡೆಯುತ್ತಾ ಇದೆ. ಬಿಜೆಪಿ ಇದನ್ನು ಕರ್ನಾಟಕದಲ್ಲಿ ಖಂಡಿತ ಪ್ರಯೋಗಿಸಲಿದೆ. ಕಾಂಗ್ರೆಸ್ ಸಹ ಪೈಪೋಟಿಯಲ್ಲಿ ಇದಕ್ಕೆ ಇಳಿದಂತಿದೆ. ಈ ಬಗ್ಗೆ ಮತದಾರರಲ್ಲಿ ಎಚ್ಚರ ಮೂಡಿಸುವ ಮತ್ತು ಅದಕ್ಕೆ ಸಾಮಾಜಿಕ ಮತ್ತು ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಪ್ರತಿರೋಧ ಒಡ್ಡುವ ಕೆಲಸ ಆಗಬೇಕಾಗಿದೆ.

ಗಜೇಂದ್ರಗಡದಲ್ಲಿ ದುಡಿಯುವ ಜನರ ಸಮಾವೇಶ

ಕಾಂಗ್ರೆಸ್–ಬಿಜೆಪಿಗೆ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಿ

ದುಡಿಯುವ ಜನರ ಹಕ್ಕುಗಳ ಸಂರಕ್ಷಣೆಗಾಗಿ ಮತ್ತು ಸಮಗ್ರ ಅಭಿವೃದ್ಧಿ, ಸೌಹಾರ್ದತೆಗಾಗಿ "ದುಡಿಯುವ ಜನರ ಸಮಾವೇಶ"ವು ರೋಣ ವಿಧಾನಸಭಾ ಕ್ಷೇತ್ರದ ಗಜೇಂದ್ರಗಡ ಪಟ್ಟಣದ ಕಾಲಕಾಲೇಶ್ವರ ವೃತ್ತದಲ್ಲಿ ಯಶಸ್ವಿಯಾಗಿ ನಡೆಯಿತು. ಸಿಪಿಐ(ಎಂ) ಅಖಂಡ ಧಾರವಾಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ ಈ ಬಹಿರಂಗ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ "ಬಲಿಷ್ಠ ಮತ್ತು ಸಮೃದ್ಧ ಕರ್ನಾಟಕ ಎನ್ನುವ ಮೂಲಕ ಸುಳ್ಳು ಭರವಸೆಗಳನ್ನು ನೀಡುತ್ತಾ ದುಡಿಯುವ ವರ್ಗವನ್ನು ಕಡೆಗಣಿಸುತ್ತಿರುವ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ತಕ್ಕಪಾಠ ಕಲಿಸಿ ಎಂದರಲ್ಲದೇ ಸಿಪಿಐ(ಎಂ) ಪಕ್ಷವನ್ನು ಕೇವಲ ಹೋರಾಟಕ್ಕೆ ಸೀಮಿತಗೊಳಸದೆ ದುಡಿಯುವ ಜನರ ಪ್ರಶ್ನೆಗಳು ಶಾಸನ ಸಭೆಯಲ್ಲಿ ಚರ್ಚೆಯಾಗಲು ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು ಮನವಿ ಮಾಡಿಕೊಂಡರು.

ಗೋವಿನ ಹೆಸರಿನಲ್ಲಿ ಅಲ್ಪಸಂಖ್ಯಾತರ ಮೇಲೆ, ಆಹಾರದ ಹೆಸರಿನಲ್ಲಿ ದಲಿತರ ಮೇಲೆ, ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯರ ಮೇಲೆ ದಾಳಿ ನಡೆಸಲು ಕುಮ್ಮಕ್ಕು ನೀಡುವ ಮೂಲಕ ದೇಶದ ಐಕ್ಯತೆಗೆ ಧಕ್ಕೆ ತರುತ್ತಿರುವ ಪಕ್ಷಗಳನ್ನು ತಿರಸ್ಕರಿಸಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಲು, ಪ್ರಜಾಪ್ರಭುತ್ವ ಮೌಲ್ಯಗಳನ್ನು ಉಳಿಸಲು ಸಿಪಿಐ(ಎಂ) ಪಕ್ಷವನ್ನು ಬೆಂಬಲಿಸಿ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು.

ಬಂಡವಾಳಿಗರ ಮತ್ತು ಕಾರ್ಪೊರೇಟ ಪರವಾಗಿರುವ ಕೇಂದ್ರ ಸರಕಾರ ಫಿಕ್ಸ್‌ಡ್ ಟರ್ಮ ಕಾರ್ಮಿಕರ ನೇಮಕಕ್ಕೆ ಅನುಮತಿ ನೀಡುವ ಮೂಲಕ ನವ ಗುಲಾಮಗಿರಿಗೆ ದುಡಿಯುವ ಜನರನ್ನು ದೂಡುತ್ತಿದೆ. ಇಂತಹ ಕಾರ್ಮಿಕ ರೈತ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ದುಡಿಯುವ ವರ್ಗ ರಾಜಕೀಯವಾಗಿ ಬಲಿಷ್ಠವಾಗುವುದು ತುರ್ತು ಅಗತ್ಯವಾಗಿದೆ ಎಂದು ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿ ಹೇಳಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಹೇಶ ಪತ್ತಾರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯ ಮುಖಂಡರಾದ ಬಿ.ಎಸ್.ಸೊಪ್ಪಿನ ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯತ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಬಿ.ನಾಡಗೌಡ, ಪುರಸಭೆ ಸದಸ್ಯ ಎಂ.ಎಸ್.ಹಡಪದ ಮಾತನಾಡಿದರು. ಮಾರುತಿ ಚಿಟಗಿ ವಂದಿಸಿದರು. ಮುಖಂಡರಾದ ಬಿ.ಐ.ಈಳಿಗೇರ, ಬಾಲು ರಾಠೋಡ, ಪೀರು ರಾಠೋಡ, ಮಹೇಶ ಹಿರೇಮಠ, ಬಸವರಾಜ ಮಂತೂರ, ಫಯಾಜ್ ತೋಟದ, ಶಿವು ಚವ್ಹಾಣ, ಎಂ.ಬಿ.ಸೋಂಪುರ, ಕರಿಯಮ್ಮ ಗುರಿಕಾರ, ಸಂಕಪ್ಪ ಕುರಹಟ್ಟಿ, ಮೈಬು ಹವಾಲ್ದಾರ, ಜೈನತಬೀ ಮುಲ್ಲಾ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬೆಳವಣಿಕೆ ಸಮುದಾಯ ತಂಡದವರು ಕ್ರಾಂತಿ ಗೀತೆ ಹಾಡಿದರು. ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯತ, ಹಮಾಲಿ, ಕಟ್ಟಡ, ಕೃಷಿಕೂಲಿಕಾರರು ಹಾಗೂ ಗಜೇಂದ್ರಗಡದ ನಾಗರಿಕರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

– ಮಹೇಶ ಪತ್ತಾರ





ಸಿಪಿಐ(ಎಂ) ಪಕ್ಷ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅಂತಿಮಗೊಳಿಸಿರುವ ಕ್ಷೇತ್ರಗಳ ವಿವರ

ಕ್ರ.ಸಂ.	ಜಿಲ್ಲೆ	ಕ್ರ.ಸಂ.	ಕ್ಷೇತ್ರಗಳು	ಅಭ್ಯರ್ಥಿಗಳ ಹೆಸರುಗಳು
1	ಚಿಕ್ಕಬಳ್ಳಾಪುರ	1	ಬಾಗೇಪಲ್ಲಿ	ಜಿ.ವಿ. ಶ್ರೀರಾಮರೆಡ್ಡಿ
		2	ಗೌರಿಬಿದನೂರು	ರವಿಚಂದ್ರರೆಡ್ಡಿ
2	ಬೆಂಗಳೂರು ಉತ್ತರ	3	ಕೆ.ಆರ್. ಪುರಂ	ಹೆಚ್.ಎನ್. ಗೋಪಾಲಗೌಡ
		4	ದಾಸರಹಳ್ಳಿ	ಎನ್. ಪ್ರತಾಪ್ ಸಿಂಹ
3	ಬೆಂಗಳೂರು ದಕ್ಷಿಣ	5	ಅನೇಕಲ್ (*)	ಡಿ. ಮಹದೇಶ್
4	ಕೋಲಾರ	6	ಶ್ರೀನಿವಾಸಪುರ	ಪಿ.ಆರ್. ಸೂರ್ಯನಾರಾಯಣ
		7	ಕೆ.ಜಿ.ಎಫ್.	ತಂಗರಾಜು
5	ಕಲಬುರಗಿ	8	ಕಲಬುರಗಿ ಗ್ರಾಮೀಣ (*)	ಮಾರುತಿ ಮಾನ್ಪಡೆ
6	ಕೊಪ್ಪಳ	9	ಗಂಗಾವತಿ	ಜೆ. ನಾಗರಾಜ
7	ದಕ್ಷಿಣ ಕನ್ನಡ	10	ಮಂಗಳೂರು	ನಿತಿನ್ ಕುಮಾರ್
		11	ಮಂಗಳೂರು ದಕ್ಷಿಣ	ಸುನಿಲ್ ಕುಮಾರ್
		12	ಮಂಗಳೂರು ಉತ್ತರ	ಮುನೀರ್ ಕಾಟಿಪಳ್ಳ
		13	ಮೂಡಬಿದ್ರಿ	ಯಾದವಶೆಟ್ಟಿ
8	ಉಡುಪಿ	14	ಬೈಂದೂರು	ಸುರೇಶ್ ಕಲ್ಲಾಗಾರ
9	ಉತ್ತರ ಕನ್ನಡ	15	ಹಳಿಯಾಳ	ಯಮುನ ಗಾಂವ್ಕರ್
10	ಬೆಳಗಾವಿ	16	ರಾಮದುರ್ಗ	ಗೈಬು ಜೈನೆಖಾನ್
11	ಗದಗ	17	ರೋಣ	ಎಂ.ಎಸ್. ಹಡಪದ
12	ಬಳ್ಳಾರಿ	18	ಕಂಪ್ಲಿ (ಮೀಸಲು)	ವಿ.ಎಸ್. ಶಿವಶಂಕರ್
		19	ಹಗರಿಬೊಮ್ಮನಹಳ್ಳಿ (*)	ಬಿ. ಮಾಳಮ್ಮ

(* : ಮೀಸಲು)

"ಸಂವಿಧಾನ ರಕ್ಷಣೆಗಾಗಿ, ಐಕ್ಯ ಭಾರತಕ್ಕಾಗಿ" ಸಮಾವೇಶ



ಕಲ್ಬುರ್ಗಿಯಲ್ಲಿ ಮಾರ್ಚ್ 28 ರಂದು "ಸಂವಿಧಾನ ರಕ್ಷಣೆಗಾಗಿ, ಐಕ್ಯ ಭಾರತಕ್ಕಾಗಿ" ನಡೆದ ಸಮಾವೇಶದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಅವರು ಭಾಗವಹಿಸಿ ಮಾತನಾಡಿದರು. ಸಮಾವೇಶದಲ್ಲಿ ಆರ್.ಪಿ.ಐ., ಹಲವು ದಲಿತ ಸಂಘರ್ಷ ಸಮಿತಿ ಸಂಘಟನೆಗಳು, ದಲಿತ ಹಕ್ಕುಗಳ ಸಮಿತಿ ಮತ್ತು ಸಿಪಿಐ(ಎಂ) ಜಂಟಿಯಾಗಿ ಸಂಘಟಿಸಿತ್ತು.



ಮಾಲೂರು ಬಳಿಯ ಕಾರ್ಖಾನೆಯಲ್ಲಿ ಸಿಲಿಂಡರ್ ಸ್ಫೋಟ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಸಿಐಟಿಯು ಆಗ್ರಹ

ಕೋಲಾರ ಜಿಲ್ಲೆಯ ಮಾಲೂರು ಕೈಗಾರಿಕಾ ಪ್ರದೇಶದ ಬನಶಂಕರಿ ಕೆಮಿಕಲ್ ಕಾರ್ಖಾನೆಯಲ್ಲಿ ಸಂಭವಿಸಿರುವ ಭಾರೀ ಪ್ರಮಾಣದ ಸಿಲೆಂಡರ್ ಸ್ಫೋಟಕ್ಕೆ ಕಾರಣವಾಗಿರುವ ಆಡಳಿತ ಮಂಡಳಿಯ ನಿರ್ಲಕ್ಷ್ಯದ ವಿರುದ್ಧ ಸರಕಾರ ಕಠಿಣ ಕ್ರಮ ಜರುಗಿಸಬೇಕೆಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ರಾಜ್ಯ ಸಮಿತಿ ಆಗ್ರಹಿಸಿದೆ.

ಮಾರ್ಚ್ 29ರಂದು ಬನಶಂಕರಿ ಕೆಮಿಕಲ್ ಕಾರ್ಖಾನೆಯಲ್ಲಿ ಸಿಲೆಂಡರ್ ಸ್ಫೋಟದಿಂದ ಭಾರೀ ಪ್ರಮಾಣದ ಬೆಂಕಿ ಹೊತ್ತಿಕೊಂಡು ಆತಂಕ ಸೃಷ್ಟಿಯಾಯಿತು. ಸ್ಥಳದಲ್ಲಿದ್ದ ಕಾರ್ಮಿಕರು ಸ್ವಯಂ ಜಾಗೃತಿವಹಿಸಿ ಹೊರ ಓಡುವ ಮೂಲಕ ಆಗಬಹುದಾಗಿದ್ದ ಜೀವಹಾನಿಯನ್ನು ತಪ್ಪಿಸಿದರು. ಅನಿರೀಕ್ಷಿತ ಈ ಸ್ಫೋಟದ ಘಟನೆಯು ಇಡೀ ಕೈಗಾರಿಕಾ ಪ್ರದೇಶಕ್ಕೆ ವ್ಯಾಪಿಸುವ ಅಪಾಯದಂತೆ ಕಂಡು ಕೆಲ ಕಾಲ ಆತಂಕ ಸೃಷ್ಟಿಸಿತ್ತು. ಪ್ರಾಣಾಪಾಯದಿಂದ ಪಾರಾದ ಎಲ್ಲಾ ಕಾರ್ಮಿಕರಿಗೂ ಸಿಐಟಿಯು ಅಭಿನಂದನೆಗಳನ್ನು ಸಲ್ಲಿಸುತ್ತದೆ. ಕಾರ್ಖಾನೆ ಮಾಲೀಕರು ಇಂತಹ ಅಪಾಯಕಾರಿ ಘಟಕಗಳನ್ನು ಸ್ಥಾಪಿಸುವಾಗ ಅಗತ್ಯ ಪ್ರಮಾಣದ ಸುರಕ್ಷಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಶಾಸನಬದ್ಧ ಜವಾಬ್ದಾರಿಯಾಗಿದೆ ಆದರೆ ಈ ಘಟನೆ ನಡೆಯುವಲ್ಲಿ ಮಾಲೀಕರು ವಹಿಸಿರುವ ನಿರ್ಲಕ್ಷ್ಯ ಪ್ರಮುಖ ಕಾರಣವಾದರೆ ಮತ್ತೊಂದೆಡೆ ಸರಕಾರ ಹಾಗೂ ಕಾರ್ಮಿಕ ಇಲಾಖಾ ಅಧಿಕಾರಿಗಳು ವಹಿಸಿರುವ ಆಡಳಿತ ಲೋಪು ಎದ್ದು ಕಾಣುತ್ತಿದೆ.

ಈ ಹಿನ್ನೆಲೆಯಲ್ಲಿ ಈ ಘಟನೆಗೆ ಸಂಬಂಧಿಸಿದಂತೆ ಸಮಗ್ರ ತನಿಖೆಯನ್ನು ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಹಾಗೂ ಈ ಸ್ಫೋಟಕದಿಂದ ಪಾಠ ಕಲಿತು ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ಸಂಭವಿಸದಂತೆ ಎಚ್ಚರವಹಿಸಬೇಕು. ಆ ಮೂಲಕ ಕೈಗಾರಿಕೆ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡುವ ನೂರಾರು ಕಾರ್ಮಿಕ ಜೀವ ರಕ್ಷಿಸಲು ಬೇಕಾದ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಸಿಐಟಿಯು ರಾಜ್ಯ ಸಮಿತಿ ರಾಜ್ಯ ಸರಕಾರವನ್ನು ಆಗ್ರಹಿಸಿದೆ. ●

ಎಸ್.ಸಿ./ ಎಸ್.ಟಿ. (ದೌರ್ಜನ್ಯ ತಡೆ) ಕಾಯಿದೆ: ಸುಪ್ರೀಂ ತೀರ್ಪು ಪ್ರತಿಗಾಮಿ ಕ್ರಮ

ಅತಿಥಿ ಅಂಕಣ



ಪ್ರೊ. ಟಿ.ಆರ್. ಚಂದ್ರಶೇಖರ್

ಮಾರ್ಚ್ 20, 2018ರಂದು ಸರ್ವೋಚ್ಚ ನ್ಯಾಯಾಲಯವು ಪ.ಜಾ. ಮತ್ತು ಪ.ಪಂ. ದೌರ್ಜನ್ಯ ತಡೆ ಕಾಯಿದೆಯನ್ನು ದುರುಪಯೋಗ/ದುರ್ಬಳಕೆ ಪಡಿಸಿಕೊಳ್ಳಲಾಗುತ್ತಿದೆ ಎಂಬ ಮಹಾರಾಷ್ಟ್ರ ಸರ್ಕಾರ–ಸುಭಾಸ್ ಕಾಶಿನಾಥ್ ಮಹಾಜನ್ ನಡುವಿನ ಮೊಕದ್ದಮೆಯಲ್ಲಿ ತೀರ್ಪೊಂದನ್ನು ನೀಡಿ ಕಾಯಿದೆಯನ್ನು ದುರ್ಬಲಗೊಳಿಸುವ ಕೆಲವು ಕ್ರಮಗಳನ್ನು ಪ್ರಕಟಿಸಿದೆ. ಕೇಂದ್ರ ಸರ್ಕಾರವು 1989ರಲ್ಲಿ ದಲಿತರು ಮತ್ತು ಬುಡಕಟ್ಟು ಜನರ ಮೇಲಿನ ದೌರ್ಜನ್ಯ, ಅವರ ಭೂಮಿಯನ್ನು ಕಬಳಿಸುವ ಆಕ್ರಮಣಗಳು, ದಲಿತ ಮಹಿಳೆಯರ ಮೇಲಿನ ಹಿಂಸಾಚಾರ ಮುಂತಾದವುಗಳನ್ನು ತಡೆಯುವ ಉದ್ದೇಶದಿಂದ ಪ.ಜಾ. ಮತ್ತು ಪ.ಪಂ.(ದೌರ್ಜನ್ಯ ತಡೆ) ಕಾಯಿದೆಯನ್ನು ರೂಪಿಸಿ ಅದನ್ನು 1995ರಲ್ಲಿ ಅನುಷ್ಠಾನಗೊಳಿಸಲಾಗಿತ್ತು. ಈ ಕಾಯಿದೆಯ ರೂವಾರಿ ಶ್ರೀ ಪಿ. ಎಸ್. ಕೃಷ್ಣನ್ (ನಿವೃತ್ತ ಐಎಎಸ್ ಅಧಿಕಾರಿ) ಇದರ ಬಗ್ಗೆ ಮಾತನಾಡುತ್ತಾ ಅದು ಸಂವಿಧಾನದ ಚೌಕಟ್ಟಿನಲ್ಲಿ ರೂಪಿಸಿದ ಕಾಯಿದೆ ಎಂದು ಹೇಳಿದ್ದಾರೆ. ಸಂವಿಧಾನದ ಪರಿಚ್ಛೇದ 17ರ ಜೊತೆಗೆ ಅನುಚ್ಛೇದ 46ರಡಿಯಲ್ಲಿನ ದುರ್ಬಲ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮಸ್ಯೆಯನ್ನು ಎದುರಿಸುವ ವ್ಯಾಪ್ತಿಯಲ್ಲಿಯೂ ಸದರಿ ಕಾಯಿದೆ ಕೆಲಸ ಮಾಡುತ್ತದೆ ಎಂಬುದು ಅವರ ಅಭಿಪ್ರಾಯ. ಇದೀಗ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದ ಇದಕ್ಕೆ ಕೊಡಲಿ ಪೆಟ್ಟು ಬಿದ್ದಿದೆ.

ಸರ್ವೋಚ್ಚ ನ್ಯಾಯಾಲಯದ ಆದರ್ಶಕುಮಾರ್ ಗೋಯಲ್ ಮತ್ತು ಉದಯ್ ಉಮೇಶ್ ಲಲಿತ್ ಅವರಿಂದ ಕೂಡಿದ್ದ ನ್ಯಾಯಪೀಠವು ಪ.ಜಾ. ಮತ್ತು ಪ.ಪಂ.(ದೌರ್ಜನ್ಯ ತಡೆ)ಕಾಯಿದೆ 1989 ಮಿತಿಮೀರಿ ದುರುಪಯೋಗವಾಗುತ್ತಿದೆ/ದುರ್ಬಳಕೆಯಾಗುತ್ತಿದೆ ಎಂದು ಭಾವಿಸಿ ತನ್ನ ತೀರ್ಪಿನಲ್ಲಿ ಸದರಿ ಕಾಯಿದೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಆದೇಶಿಸಿದೆ. ಈ ಮಾರ್ಗಸೂಚಿಗಳ ಪ್ರಕಾರ ಸದರಿ ಕಾಯಿದೆಯಡಿಯಲ್ಲಿ ಆರೂಪಿಯ ಮೇಲೆ ಎಫ್ಐಆರ್ ದಾಖಲಿಸುವ ಪೂರ್ವದಲ್ಲಿ ಸರ್ಕಾರಿ ನೌಕರರಾದರೆ ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರಿಂದ ಪೂರ್ವಾನುಮತಿ ಪಡೆಯಬೇಕು ಮತ್ತು ಸಾರ್ವಜನಿಕರಾದರೆ ಸಂಬಂಧಿಸಿದ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯಿಂದ ಪೂರ್ವಬಾವಿ ತನಿಖೆ ನಡೆಸಿ ಆರೋಪ ಮೇಲು ನೋಟಕ್ಕೆ ಸಾಬೀತಾದರೆ ಮಾತ್ರ ಎಫ್ ಐ ಆರ್ ದಾಖಲಿಸಬೇಕು. ಇದಕ್ಕೆಲ್ಲ ಲಿಖಿತ ದಾಖಲೆಗಳು ಬೇಕು. ಇದರ ಪ್ರಕಾರ ಆರೋಪಿಯನ್ನು ಪ್ರಕರಣ ದಾಖಲಾದ ತಕ್ಷಣ ಪೋಲೀಸರು ವಶಕ್ಕೆ ಪಡೆಯುವಂತಿಲ್ಲ. ಮಾರ್ಗಸೂಚಿ ಸೂತ್ರಗಳನ್ನು ನೀಡುವುದಕ್ಕೆ ನ್ಯಾಯಾಲಯ ನೀಡಿದ ಕಾರಣವೆಂದರೆ ಕಾಯಿದೆಯ 'ಮಿತಿಮೀರಿದ ದುರ್ಬಳಕೆ' ಅನ್ನುವುದಾಗಿದೆ. ಕಾನೂನುಗಳಿರುವುದು ನಿರಪರಾಧಿಗಳನ್ನು ರಕ್ಷಿಸುವುದಕ್ಕೆ ವಿನಾ ಸುಳ್ಳು ಆರೋಪದಡಿಯಲ್ಲಿ ಅವರಿಗೆ ಕಿರುಕುಳ ನೀಡುವುದಕ್ಕಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಇದೇ ನ್ಯಾಯಪೀಠವು 2017ರಲ್ಲಿ ವರದಕ್ಷಿಣೆ(ತಡೆ) ಕಾನೂನಿಗೆ ಸಂಬಂಧಿಸಿದ ಭಾರತೀಯ ದಂಡ ಸಂಹಿತೆ 498 ಎ ಪ್ರಕರಣದಲ್ಲಿಯೂ ವಿಚಾರಣೆಯಿಲ್ಲದೆ ಆರೋಪಿಗಳನ್ನು ವಶಕ್ಕೆ ಪಡೆಯಬಾರದು ಎಂಬ ತೀರ್ಪು ನೀಡಿತ್ತು. ಈ ಕಾಯಿದೆಯಡಿಯಲ್ಲಿನ ಆರೋಪಿಗಳನ್ನು ವಶಕ್ಕೆ ಪಡೆಯುವ ಮೊದಲು ಆರೋಪದ ಬಗ್ಗೆ ಪೂರ್ವಭಾವಿ ತನಿಖೆ ನಡೆಸಲು ಜಿಲ್ಲಾ ಮಟ್ಟದಲ್ಲಿ ಕುಟುಂಬ ಕಲ್ಯಾಣ ಸಮಿತಿಯನ್ನು ರಚಿಸಬೇಕೆಂದು ನ್ಯಾಯಪೀಠವು ಸಲಹೆ ನೀಡಿತ್ತು. ಕೆಲವು ತಿಂಗಳುಗಳಾದ ಮೇಲೆ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ನ್ಯಾಯಪೀಠವು ಅದನ್ನು ಅಸಿಂಧುಗೊಳಿಸಿತ್ತು ಅನ್ನುವುದು ಬೇರೆ ಸಂಗತಿ. ಆದರೆ ಪ.ಜಾ. ಮತ್ತು ಪ.ಪಂ, ದೌರ್ಜನ್ಯ ತಡೆ ಕಾಯಿದೆಯನ್ನು ಕೇವಲ ಸುಳ್ಳು ಆರೋಪಗಳನ್ನು ಹೊರಿಸಲಾಗುತ್ತಿದೆ ಎಂಬ ಆಧಾರದಲ್ಲಿ ದುರ್ಬಲ/ಸಡಿಲಗೊಳಿಸಿರುವುದು ಸರಿಯಲ್ಲ. ತೀರ್ಪಿನಲ್ಲಿ ಬಳಸಿರುವ ನುಡಿಗಟ್ಟಿನ ಬಗ್ಗೆಯೂ ತೀವ್ರ ಆಕ್ಷೇಪಗಳು ವ್ಯಕ್ತವಾಗಿದೆ. 'ಮಿತಿಮಿರಿದ ದುರ್ಬಳಕೆ', 'ದುರುದ್ದೇಶಪೂರಿತ ಆರೋಪಗಳು', 'ಕಾಯಿದೆಯು ಬ್ಲಾಕ್‌ಮೇಲ್ ಸಾಧನವಾಗಿರುವಂತೆ ಕಾಣುತ್ತದೆ', 'ತಾರತಮ್ಯ ತಿರುವು ಮುರುವಾಗಿದೆ' ಅನ್ನುವು ಸಂಗತಿಗಳು ಆಧಾರರಹಿತವಾಗಿವೆ.

ಈ ನ್ಯಾಯಾಲಯದ ತೀರ್ಪಿನ ಸಮಸ್ಯೆಯೇನೆಂದರೆ ಇದರಲ್ಲಿ ನ್ಯಾಯಪೀಠವು ದೂರುದಾರರ ಅಥವಾ ದೌರ್ಜನ್ಯಕ್ಕೆ ಒಳಗಾದವರ ಹಿತಾಸಕ್ತಿಗಿಂತ ಆರೋಪಿಗಳ ಹಿತಾಸಕ್ತಿ ಮತ್ತು ಹಕ್ಕುಗಳ ಬಗ್ಗೆ ಹೆಚ್ಚು ಕಾಳಜಿ ತೋರಿಸುತ್ತಿರುವಂತೆ ಕಾಣುತ್ತದೆ. ಆದರೆ ಭಾರತೀಯ ದಂಡ ಸಂಹಿತೆ ಮತ್ತು ಪ.ಜಾ. ಮತ್ತು ಪ.ಪಂ.(ದೌರ್ಜನ್ಯ ತಡೆ) ಕಾಯಿದೆಗಳ ನಡುವಿನ ಭಿನ್ನತೆಯನ್ನು ಇಲ್ಲಿ ಪರಿಗಣಿಸುವ ಅಗತ್ಯವಿದೆ. ಸಾಮಾಜಿಕ–ಆರ್ಥಿಕ ಭಿನ್ನತೆಗಳನ್ನು ಪರಿಗಣಿಸದೆ ನ್ಯಾಯಾಲಯವು ಆಧಾರ–ಪುರಾವೆಗಳಿಲ್ಲದೆ ಸುಳ್ಳು ಮೊಕದ್ದಮೆಗಳನ್ನು ದಾಖಲಾಗಿದೆ ಎಂಬ ಕುಂಟು ನೆಪದ ಆಧಾರದಲ್ಲಿ ಅದಕ್ಕೆ ಮಾರ್ಗಸೂಚಿಯನ್ನು ನೀಡಿದೆ. ಈ ದೌರ್ಜನ್ಯ ತಡೆ ಕಾಯಿದೆಯನ್ನು ಕೇವಲ ನ್ಯಾಯಪ್ರಣಾಳಿಕೆಯ ನೆಲೆಯಿಂದ ನೋಡಿದರೆ ಸಾಲದು. ಅದನ್ನು ಸಾಮಾಜಿಕ–ಆರ್ಥಿಕ ನೆಲೆಯಿಂದ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಕೇಂದ್ರ ಸರ್ಕಾರವು ವಿಳಂಬ ಮಾಡದೆ ತಕ್ಷಣ ಮಧ್ಯ ಪ್ರವೇಶಿಸಿ ನ್ಯಾಯಾಲಯದ ತೀಪಿನ ಪುರ್ನವಿಮರ್ಶೆಗೆ–ಪುನರ್ ಪರಿಶೀಲನೆಗೆ ಕ್ರಮ ತೆಗೆದುಕೊಳ್ಳಬೇಕು.

ಕೋಷ್ಟಕ 1 ರಲ್ಲಿ 2016ರ ಪ.ಜಾ. ಮತ್ತು ಪ.ಪಂ.ಗಳಿಗೆ ಸಂಬಂಧಿಸಿದ ದೌರ್ಜನ್ಯಗಳ ಸಂಖ್ಯೆಯ ವಿವರಗಳನ್ನು ನೀಡಲಾಗಿದೆ. ಒಟ್ಟು ಪ್ರಕರಣಗಳಲ್ಲಿ(ಪ್ರಸ್ತುತ ವರ್ಷ ಮತ್ತು ಹಿಂದಿನಿಂದ ಬಂದ ಬಾಕಿ ಪ್ರಕರಣಗಳು) ಸುಳ್ಳು ಪ್ರಕರಣಗಳ ಪ್ರಮಾಣ ಪ.ಜಾ. ಗೆ ಸಂಬಂಧಿಸಿದಂತೆ ಶೇ. 9.5 ರಷ್ಟಿದರೆ ಪ.ಪಂ. ಗಳಿಗೆ ಸಂಬಂಧಿಸಿದಂತೆ ಸುಳ್ಳು ಪ್ರಕರಣಗಳ ಪ್ರಮಾಣ ಶೇ. 6.62. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಒಟ್ಟು ಪ.ಜಾ. ದೌರ್ಜನ್ಯ ಪ್ರಕರಣಗಳಲ್ಲಿ(56299) ವಿಚಾರಣೆಗೆ ಒಳಗಾದ ಪ್ರಕರಣಗಳು ಕೇವಲ 14615(ಶೇ.25.95) ಮತ್ತು ಇದರ ಪ್ರಮಾಣ ಪ.ಪಂ.ದಲ್ಲಿ ಶೇ. 31.83(2528). ನ್ಯಾಯಪೀಠಕ್ಕೆ ಶೇ10ಕ್ಕಿಂತ ಕಡಿಮೆಯಿರುವ ಸುಳ್ಳು ಪ್ರಕರಣಗಳು ಮುಖ್ಯವಾಗಿದ್ದಾವೆ ವಿನಾ ವಿಚಾರಣೆಗೆ ಒಳಗಾಗದ ಪ.ಜಾ.ಯ 41684(ಶೇ.74.04) ಮತ್ತು ಪ.ಪಂ.ದ 6201(ಶೇ.68.17) ಪ್ರಕರಣಗಳು ಮುಖ್ಯವಾಗಿಲ್ಲ. ಇಲ್ಲಿರುವ ತಾರತಮ್ಯವನ್ನು ಗಮನಿಸಬೇಕು.

ಈ ನ್ಯಾಯಾಲಯದ ತೀರ್ಪಿನ ಸಮಸ್ಯೆಯೇನೆಂದರೆ ಇದರಲ್ಲಿ ನ್ಯಾಯಪೀಠವು ದೂರುದಾರರ ಅಥವಾ ದೌರ್ಜನ್ಯಕ್ಕೆ ಒಳಗಾದವರ ಹಿತಾಸಕ್ತಿಗಿಂತ ಆರೋಪಿಗಳ ಹಿತಾಸಕ್ತಿ ಮತ್ತು ಹಕ್ಕುಗಳ ಬಗ್ಗೆ ಹೆಚ್ಚು ಕಾಳಜಿ ತೋರಿಸುತ್ತಿರುವಂತೆ ಕಾಣುತ್ತದೆ. ಆದರೆ ಭಾರತೀಯ ದಂಡ ಸಂಹಿತೆ ಮತ್ತು ಪ.ಜಾ. ಮತ್ತು ಪ.ಪಂ.(ದೌರ್ಜನ್ಯ ತಡೆ) ಕಾಯಿದೆಗಳ ನಡುವಿನ ಭಿನ್ನತೆಯನ್ನು ಇಲ್ಲಿ ಪರಿಗಣಿಸುವ ಅಗತ್ಯವಿದೆ. ಅದರಲ್ಲಿನ ನಿರೀಕ್ಷಣಾ ಜಾಮೀನುಗಳಿಗೂ ಇಲ್ಲಿನ ನಿರೀಕ್ಷಣಾ ಜಾಮೀನುಗಳಿಗೂ ಪರಸ್ಪರ ಭಿನ್ನತೆಯಿದೆ. ಅಧಿಕಾರ, ಆಸ್ತಿ, ಜಾತಿ ಮುಂತಾದ ಸವಲತ್ತುಗಳಿಲ್ಲದ ಪ.ಜಾ. ಮತ್ತು ಪ.ಪಂ.ಗಳು ಮತ್ತು ಆ ಸವಲತ್ತುಗಳಿರುವವರ ಉನ್ನತ ಜಾತಿ–ವರ್ಗಗಳ ನಡುವಿನ ಸಂಘರ್ಷದಲ್ಲಿ ನ್ಯಾಯ ಅನ್ನುವುದು ಉಳ್ಳವರ ಪಾಲಾಗುವ ಸಾಧ್ಯತೆ ಹೆಚ್ಚು. ಇದನ್ನು ತಡೆಯುವ ಉದ್ದೇಶದಿಂದ ದೌರ್ಜನ್ಯ ತಡೆ ಕಾಯಿದೆ ತರಲಾಗಿದೆ. ಇದನ್ನು ಈಗ ಆರೋಪಿಗಳ ಪರವಾಗಿ ಸಬಲೀಕರಣಗೊಳಿಸಿ ಹಿಂಸೆ–ದೌಜ್ಯನ್ಯಕ್ಕೆ ಒಳಗಾಗಿ ದೂರು ನೀಡಿದವರಿಗೆ ಸಂಬಂಧಿಸಿದಂತೆ ದುರ್ಬಲಗೊಳಿಸಲಾಗಿದೆ.

ಸಾಮಾಜಿಕ ಕಟು ವಾಸ್ತವ

ದಲಿತರ ಮತ್ತು ಬುಡಕಟ್ಟುಗಳ ಬಗೆಗಿನ ಸದರಿ ಕಾಯಿದೆಯೇನಿದೆ ಅದನ್ನು ಸಾಮಾನ್ಯ ಕಾಯಿದೆಗಳ ಚೌಕಟ್ಟಿನಲ್ಲಿ ನೋಡುವುದು ಸಾಧ್ಯವಿಲ್ಲ. ಏಕೆಂದರೆ ದಲಿತರು ಮತ್ತು ಬುಡಕಟ್ಟು ಜನರು ಹತ್ತಾರು ಶತಮಾನಗಳಿಂದ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಹಾಗೂ ಸಾಂಸ್ಕೃತಿಕ ಅನ್ಯಾಯವನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಅವರು ಸಮಾಜದಲ್ಲಿ ಅಂಚಿನಲ್ಲಿ ಬದುಕು ದೂಡುತ್ತಿದ್ದಾರೆ.



ಉದಾಹರಣೆಗೆ ನಮ್ಮ ದೇಶದ ಒಟ್ಟು ಜನಸಂಖ್ಯೆಯ ಸಾಕ್ಷರತಾ ಪ್ರಮಾಣ 2011ರಲ್ಲಿ ಶೇ.73ರಷ್ಟಿದ್ದರೆ ಪ.ಜಾ. ಮತ್ತು ಪ.ಪಂ. ಸಮುದಾಯಗಳ ಸಾಕ್ಷರತಾ ಪ್ರಮಾಣ ಕ್ರಮವಾಗಿ ಶೇ.66.1 ಮತ್ತು ಶೇ.59. ಇಲ್ಲಿರುವ ಅಸಮಾನತೆಯನ್ನು ಗಮನಿಸಬೇಕು. ದೇಶದ ಒಟ್ಟು ಜನಸಂಖ್ಯೆಯಲ್ಲಿನ ದುಡಿಮೆಗಾರರಲ್ಲಿ ದಿನಗೂಲಿಗಳ ಪ್ರಮಾಣ ಶೇ.29.96ರಷ್ಟಿದ್ದರೆ ಪ.ಜಾ. ಮತ್ತು ಪ.ಪಂ. ದುಡಿಮೆಗಾರರಲ್ಲಿ ದಿನಗೂಲಿಗಳ ಪ್ರಮಾಣ ಕ್ರಮವಾಗಿ ಶೇ45.93 ಮತ್ತು ಶೇ.44.48(2011). ಈ ಅನ್ಯಾಯವನ್ನು, ಅಸಮಾನತೆಯನ್ನು ಉಳಿದ ಜನತೆಯು ಎದುರಿಸಬಹುದಾದ ಅನ್ಯಾಯಗಳ ಜೊತೆ ತುಲನೆ ಮಾಡುವುದು ಸೂಕ್ತವಲ್ಲ. ದಲಿತರು ಎದುರಿಸುತ್ತಿರುವ ಅಸ್ಪೃಶ್ಯತೆ, ಸಾಮಾಜಿಕ ಪ್ರತ್ಯೇಕತನ ಮತ್ತು ಆರ್ಥಿಕ ತಾರತಮ್ಯಗಳ ಸ್ವರೂಪ ಉಳಿದ ಸಾಮಾನ್ಯರ ಬಡತನ, ಅಸಮಾನತೆಗಳ ಸ್ವರೂಪಕ್ಕೆ ಭಿನ್ನವಾಗಿವೆ. ಈ ಬಗೆಯ ದೌರ್ಬಲ್ಯಗಳನ್ನು ತಡೆಗಟ್ಟು ಉದ್ದೇಶದಿಂದಲೇ ಪ.ಜಾ. ಮತ್ತು ಪ.ಪಂ.ಗಳ (ದೌರ್ಜನ್ಯ ತಡೆ)ಕಾಯಿದೆ 1989 ಜಾರಿಗೆ ತರಲಾಗಿದೆ. ಈ ಸಾಮಾಜಿಕ–ಆರ್ಥಿಕ ಭಿನ್ನತೆಗಳನ್ನು ಪರಿಗಣಿಸದೆ ನ್ಯಾಯಾಲಯವು ಆಧಾರ–ಪುರಾವೆಗಳಿಲ್ಲದೆ ಸುಳ್ಳು ಮೊಕದ್ದಮೆಗಳನ್ನು ದಾಖಲಾಗಿದೆ ಎಂಬ ಕುಂಟು ನೆಪದ ಆಧಾರದಲ್ಲಿ ಅದಕ್ಕೆ ಮಾರ್ಗಸೂಚಿಯನ್ನು ನೀಡಿದೆ. ಈ ದೌರ್ಜನ್ಯ ತಡೆ ಕಾಯಿದೆಯನ್ನು ಕೇವಲ ನ್ಯಾಯಪ್ರಣಾಳಿಕೆಯ ನೆಲೆಯಿಂದ ನೋಡಿದರೆ ಸಾಲದು. ಅದನ್ನು ಸಾಮಾಜಿಕ–ಆರ್ಥಿಕ ನೆಲೆಯಿಂದ ಪರಿಭಾವಿಸಿಕೊಳ್ಳುವ ಅಗತ್ಯವಿದೆ.

ಸುಳ್ಳು ಆರೋಪಗಳನ್ನು ಹೊರಿಸುವುದು ಪ.ಜಾ. ಮತ್ತು ಪ.ಪಂ. ದೌರ್ಜನ್ಯ ತಡೆ ಕಾಯಿದೆಗೆ ಮಾತ್ರ ವಿಶಿಷ್ಟವಾದ ಸಂಗತಿಯೇನಲ್ಲ. ವರದಕ್ಷಿಣೆ ತಡೆ ಕಾಯಿದೆ, ಲೈಂಗಿಕ ಹಿಂಸೆ ನಿಷೇಧ ಕಾಯಿದೆಗಳ ಸಂದರ್ಭದಲ್ಲಿಯೂ ಶೇ.10 ರಿಂದ ಶೇ.15ರಷ್ಟು ಸುಳ್ಳು ಮೊಕ್ಕದ್ದಮೆಗಳನ್ನು ದಾಖಲಿಸಿರುವ ನಿದರ್ಶನಗಳಿವೆ. ಈ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿ ಕಾಯಿದೆಗಳನ್ನು ದುರ್ಬಳಕೆಯನ್ನು ತಡೆಯುವುದರ ಬಗ್ಗೆ ಚಿಂತಿಸಬೇಕೇ ವಿನಾ ಕಾಯಿದೆಯನ್ನು ದುರ್ಬಲಗೊಳಿಸುವುದಲ್ಲ. ಶೀತವಾಗಿದೆ ಎಂದು ಯಾರೂ ಮೂಗನ್ನು ಕತ್ತರಿಸಿಕೊಳ್ಳುವುದಿಲ್ಲ. ಇಲ್ಲಿ ನ್ಯಾಯಪೀಠವು ಸಮಸ್ಯೆಯ ಒಂದು ಮುಖವನ್ನು ಮಾತ್ರ ಪರಿಗಣಿಸಿದೆ. ಅದಕ್ಕೆ ಮತ್ತೊಂದು ಮುಖವಿದೆ ಅನ್ನುವುದನ್ನು ಗಮನಿಸಬೇಕು.

ತೀರ್ಪಿನ ಪುನರ್ ಪರಿಶೀಲನೆಗೆ ಒತ್ತಾಯ

ಈ ಕಾಯಿದೆಯ ರೂವಾರಿ ಪಿ. ಎಸ್. ಕೃಷನ್ ಅವರು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರವೊಂದನ್ನು ಬರೆದು ಸದರಿ ನ್ಯಾಯಪೀಠದ ತೀರ್ಪಿನ ಪುನರ್ ಪರಿಶೀಲನೆಗೆ ಪ್ರಯತ್ನಿಸಬೇಕು ಎಂದು ಆಗ್ರಹಿಸಿದ್ದಾರೆ. ಸದರಿ ಪ್ರಕರಣ ನ್ಯಾಯಪೀಠದ ಮುಂದಿದ್ದಾಗ ಕೇಂದ್ರದ ಅಡಿಶನಲ್ ಸಾಲಿಟರ್ ಜನರಲ್ ಮನೀನಂದರ್ ಸಿಂಗ್ ಅವರು ಸರಿಯಾಗಿ ವಿಷಯ ಮಂಡನೆ ಮಾಡಿಲ್ಲವೆಂದು ಕೃಷ್ಣನ್ ತಮ್ಮ ಅತೃಪ್ತಿ ಹೊರಹಾಕಿದ್ದಾರೆ. ಅನೇಕ ಸಂಸದರು ತೀರ್ಪಿನ ಪುನರ್ ಪರಿಶೀಲನೆಗೆ ಸರ್ಕಾರ ಪ್ರಯತ್ನಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಮೊಕದ್ದಮೆಗೂ ಮತ್ತು ಕೇಂದ್ರ ಸರ್ಕಾರಕ್ಕೂ ನೇರ ಸಂಬಂಧವಿಲ್ಲದಿದ್ದರೂ ಸರ್ಕಾರ ಕಾಯಿದೆಯನ್ನು ದುರ್ಬಲಗೊಳಿಸಿರುವ ಬಗ್ಗೆ ಪ್ರಜ್ಞಾಪೂರ್ವಕವಾಗಿ ಚಿಂತನೆ ನಡೆಸಿಲ್ಲವೆಂದು ಪ. ಜಾ. ಮತ್ತು ಪ. ಪಂ. ಜನರು ಭಾವಿಸುತ್ತಿದ್ದಾರೆ. ಈ ಪ್ರಕರಣದ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಮಹಾನ್ಯಾಯವಾದಿಗಳು (ಸಾಲಿಟರ್ ಜನರಲ್)ಕ್ರಿಯಾಶಿಲವಾಗಿ ಕಾರ್ಯ ನಿರ್ವಹಿಸಿಲ್ಲ ಎಂಬುದು ಪ್ರಕರಣವನ್ನು ಅವರು ನಿರ್ವಹಿಸಿದ ರೀತಿಯಿಂದ ತಿಳಿದುಕೊಳ್ಳಬಹುದು. ಸರ್ವೋಚ್ಚ ನ್ಯಾಯಾಲಯದ ಒಂದು ಪೀಠ ವರದಕ್ಷಿಣೆ ತಡೆ ಕಾಯಿದೆಗೆ ಸಂಬಂಧಿಸಿದಂತೆ ಮತ್ತು ಈಗ ದೌರ್ಜನ್ಯ ತಡೆ ಕಾಯಿದೆಗೆ ಸಂಬಂಧಿಸಿದಂತೆ ಪ್ರತಿಗಾಮಿ ವಿಚಾರಗಳನ್ನು ಮಂಡಿಸುತ್ತಿರುವುದು ವಿಷಾದನೀಯ.

ಕೇಂದ್ರ ಸರ್ಕಾರವು ವಿಳಂಬ ಮಾಡದೆ ತಕ್ಷಣ ಮಧ್ಯ ಪ್ರವೇಶಿಸಿ ನ್ಯಾಯಾಲಯದ ತೀಪಿನ ಪುರ್ನವಿಮರ್ಶೆಗೆ–ಪುನರ್ ಪರಿಶೀಲನೆಗೆ ಕ್ರಮ ತೆಗೆದುಕೊಳ್ಳಬೇಕು. ಇದು ಭಾರತದ 30.65 ಕೋಟಿ(2011) ಪ.ಜಾ. ಮತ್ತು ಪ.ಪಂ. ಜನರ ಘನತೆ–ಗೌರವದ ಬದುಕಿಗೆ ಸಂಬಂಧಿಸಿದ ಸಂಗತಿ. ಒಟ್ಟು ಜನಸಂಖ್ಯೆಯಲ್ಲಿ ಇವರ ಪ್ರಮಾಣ ಶೇ. 25.32 ರಷ್ಟಿದೆ. ಇವರ ಹಿತಾಸಕ್ತಿಯನ್ನು ರಕ್ಷಿಸದೆ ನಾಡಿನ ಹಿತಾಸಕ್ತಿಯನ್ನು ರಕ್ಷಿಸುವುದು ಸಾಧ್ಯವಿಲ್ಲ. ಇದನ್ನು ಸರ್ಕಾರ ಸರಿಪಡಿಸುವುದಕ್ಕೆ ಶೀಘ್ರ ಕ್ರಮ ತೆಗೆದುಕೊಳ್ಳದಿದ್ದರೆ ಈಗಾಗಲೆ ದಲಿತ–ವಿರೋಧಿ ಅನ್ನುವ ಹಣೆಪಟ್ಟು ಹಚ್ಚಿಕೊಂಡಿರುವ ಕೇಂದ್ರ ಸರ್ಕಾರಕ್ಕೆ ಮತ್ತಷ್ಟು ಕೆಟ್ಟ ಹೆಸರು ಬರುವುದು ಖಚಿತ. ಇದಕ್ಕೆ ಅನೇಕ ನಿದರ್ಶನಗಳು ನಮ್ಮ ಮುಂದಿವೆ. ಇತ್ತೀಚೆಗೆ ಭೀಮ ಕೋರೆಗಾಂವ್ ಪ್ರಕರಣಕ್ಕೆ ಸಂಬಂಧಿಸಿದಂತೆ ದಲಿತರ ಮೇಲೆ ಆಕ್ರಮಣಕ್ಕೆ ಪ್ರಚೋದನೆ ನೀಡಿದ್ದ ಆರೋಪ ಎದುರಿಸುತ್ತಿರುವ ಬಿಡೆ ಗುರೂಜಿ ಅವರಿಗೆ ಮಹಾರಾಷ್ಟ್ರ ಕ್ಲೀನ್ ಚಿಟ್ ನೀಡಿದೆ. ●

ಕೋಷ್ಟಕ 1. ಪ.ಜಾ. ಮತ್ತು ಪ.ಪಂ. ಮೇಲಿನ ದೌರ್ಜನ್ಯ ಪ್ರಕರಣಗಳು: 2016

ಕ್ರ.ಸಂ.	ವಿವರಗಳು	ಪ.ಜಾ.	ಪ.ಪಂ.	ಒಟ್ಟು
1	ಒಟ್ಟು 2016ರಲ್ಲಿ ದಾಖಲಾದ ದೌರ್ಜನ್ಯದ ಪ್ರಕರಣಗಳು	40801	6568	47369
2	ಹಿಂದಿನಿಂದ ಬಂದ ಬಾಕಿ ಪ್ರಕರಣಗಳು	15498	2528	18026
3	ಒಟ್ಟು ಪ್ರಕರಣಗಳು	56299	9096	65395
4	ಸುಳ್ಳು ಪ್ರಕರಣಗಳು	5347	912	6259
5	ವಿಚಾರಣೆಗೆ ಒಳಗಾದ ಪ್ರಕರಣಗಳು	14615	2895	17510
6	ಶಿಕ್ಷೆಗೆ ಒಳಗಾದ ಪ್ರಕರಣಗಳು	3753	602	4355
4	ಒಟ್ಟು ಪ್ರಕರಣಗಳಲ್ಲಿ ಸುಳ್ಳು ಪ್ರಕರಣಗಳ ಪ್ರಮಾಣ	ಶೇ.9.5	ಶೇ.6.62	ಶೇ.6.66
8	ಒಟ್ಟು ಪ್ರಕರಣಗಳಲ್ಲಿ ವಿಚಾರಣೆಗೆ ಒಳಗಾದ ಪ್ರಕರಣಗಳು	ಶೇ.25.96	ಶೇ.31.83	ಶೇ.26.78
9	ವಿಚಾರಣೆಗೆ ಒಳಗಾದ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಗಾದ ಪ್ರಕರಣಗಳ ಪ್ರಮಾಣ	ಶೇ.25.67	ಶೇ.20.79	ಶೇ.21.96

ಮೂಲ: ಭಾರತ ಸರ್ಕಾರ, 2016. ಕ್ರೈಮ್ ಇನ್ ಇಂಡಿಯಾ2016. ನ್ಯಾಷಿನಲ್ ಕ್ರೈಮ್ ರೆಕಾರ್ಡ್ ಬ್ಯೂರೋ, ಗೃಹ ವ್ಯವಹಾರಗಳ ಸಚಿವಾಲಯ, ನವದೆಹಲಿ.

ಸಂಸತ್ತನ್ನು ಹಾಳುಗೆಡಿಸುತ್ತಿರುವ ಬಿಜೆಪಿ ಕುತಂತ್ರಗಳು

ಸದನದ ಕಲಾಪಗಳಲ್ಲಿ ಆದ ವ್ಯತ್ಯಯಗಳನ್ನೇ ಹಣಕಾಸು ಮಸೂದೆ ಮತ್ತು ವಿನಿಯೋಗ ಮಸೂದೆ ಯಾವುದೇ ಚರ್ಚೆಯಿಲ್ಲದೆ ಅಂಗೀಕಾರಗೊಳ್ಳುವಂತೆ ಮಾಡಲು ಬಳಸಿಕೊಂಡ ಮೋದಿ ಸರಕಾರ ಈಗ ತನ್ನ ಹಿಂಬಾಲಕನಾಗಿ ಬಿಟ್ಟಿರುವ ಎಐಎಡಿಎಂಕೆ ಯನ್ನು ಅವಿಶ್ವಾಸ ಠರಾವನ್ನು ತಪ್ಪಿಸಲು ಒಂದು ನೆವವಾಗಿ ಬಳಸುತ್ತಿದೆ. ಇದಕ್ಕೆ ಕಾರಣ ಸ್ವಯಂವೇದ್ಯ. ಬಿಜೆಪಿಯ ಇಂತಹ ಕುತಂತ್ರ ಮತ್ತು ಸಿನಿಕ ಕಸರತ್ತುಗಳಿಂದ ಕುತ್ತು ಬಂದಿರುವುದು ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಮತ್ತು ಸ್ವತಃ ಸಂಸತ್ತಿನ ವಿಶ್ವಾಸಾರ್ಹತೆಗೇ.





ಪ್ರಕಾಶ ಕಾರಟ್

ಸಂಸತ್ತಿನ ಈ ಬಾರಿಯ ಬಜೆಟ್ ಅಧಿವೇಶನದ ಉತ್ತರಾರ್ಧ ಮೋದಿ ಸರಕಾರ ಸಂಸದೀಯ ವಿಧಿ-ವಿಧಾನಗಳನ್ನು ಬುಡಮೇಲು ಮಾಡಿದ ರೀತಿಯಿಂದಾಗಿ ಗಮನಾರ್ಹವಾಗಿ ಬಿಟ್ಟಿದೆ. ಮಾರ್ಚ್ 5ರಂದು ಅಧಿವೇಶನ ಆರಂಭವಾದಾಗಿನಿಂದ ಎರಡೂ ಸದನಗಳಲ್ಲಿ ಪ್ರತಿದಿನ ಎಂಬಂತೆ ಅಡೆ-ತಡೆಗಳು ಕಂಡು ಬಂದವು. ಇದಕ್ಕೆ ಮುಖ್ಯ ಕಾರಣ ಅದುವರೆಗೆ ಆಳುವ ಎನ್‌ಡಿಎ ಭಾಗವಾಗಿದ್ದ ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನದ ಪ್ರಶ್ನೆಯ ಮೇಲೆ ಆರಂಭವಾದ ಪ್ರತಿಭಟನೆ. ಪಂಜಾಬ್ ನ್ಯಾಶನಲ್ ಬ್ಯಾಂಕ್ ಹಗರಣ ಮುಂತಾದ ಇತರ ಪ್ರಶ್ನೆಗಳೂ ಸಂಸತ್ ಸದಸ್ಯರಲ್ಲಿ ಕಸಿವಿಸಿ ಉಂಟು ಮಾಡಿದ್ದವು.

ಸರಕಾರ ಈ ಅಡೆ-ತಡೆಗಳನ್ನು ನಿವಾರಿಸಿ ಸಂಸತ್ತು ಸುಸೂತ್ರವಾಗಿ ಕಾರ್ಯನಿರ್ವಹಿಸುವಂತೆ ಮಾಡುವ ಬದಲು, ಸದನದ ಕಲಾಪಗಳಲ್ಲಿ ಆದ ವ್ಯತ್ಯಯಗಳನ್ನೇ ಹಣಕಾಸು ಮಸೂದೆ ಮತ್ತು ವಿನಿಯೋಗ ಮಸೂದೆ ಯಾವುದೇ ಚರ್ಚೆಯಿಲ್ಲದೆ ಅಂಗೀಕಾರಗೊಳ್ಳುವಂತೆ ಮಾಡಲು ಬಳಸಿಕೊಂಡಿತು. ಹೀಗೆ ಈ ಬಾರಿಯ 89.25ಲಕ್ಷ ಕೋಟಿ ರೂ.ಗಳ ಸರಕಾರದ ಹಣಕಾಸು ವಿನಿಯೋಗವನ್ನು ಪರೀಕ್ಷಿಸುವ, ಚರ್ಚಿಸುವ ಮತ್ತು ಮಂಜೂರು ಮಾಡುವ ಲೋಕಸಭೆಯ ಒಂದು ಅತ್ಯವಶ್ಯಕ ಕೆಲಸವನ್ನು ಸಂಪೂರ್ಣವಾಗಿ ಬದಿಗೊತ್ತಲಾಯಿತು. ಅನುದಾನಗಳ ಬೇಡಿಕೆಗಳ ಮೇಲೆ ಎಲ್ಲ ಚರ್ಚೆಗಳಿಗೆ ಕೆಲವೇ ನಿಮಿಷಗಳಲ್ಲಿ ದಂಡಪ್ರಯೋಗ ಮಾಡಲಾಯಿತು. ಗಲಾಟೆಗಳ ನಡುವೆಯೇ ಹಣಕಾಸು ಮಸೂದೆ, ವಿನಿಯೋಗ ಮಸೂದೆಯನ್ನು 21 ತಿದ್ದುಪಡಿಗಳೊಂದಿಗೆ ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

2004ರ ನಂತರ ಹಣಕಾಸು ಮಸೂದೆಯ ಚರ್ಚೆಗೆ ಅತ್ಯಂತ ಕಡಿಮೆ ಸಮಯವನ್ನು ತೆಗೆದುಕೊಂಡ ಬಜೆಟ್ ಅಧಿವೇಶನ ಇದಾಯಿತು. ಇದಕ್ಕೆ ನೇರವಾಗಿ ಮೋದಿ ಸರಕಾರವೇ ಹೊಣೆ.

ಹಣಕಾಸು ಮಸೂದೆಯಲ್ಲಿ ವಿದೇಶಿ ವಂತಿಗೆ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ)ಗೆ ಒಂದು ತಿದ್ದುಪಡಿಯನ್ನು ಸರಕಾರ ತಂದು ಅದನ್ನು ಅಂಗೀಕರಿಸಿದ ರೀತಿಯೂ ಅಷ್ಟೇ ಆಕ್ಷೇಪಾರ್ಹ. ಎಫ್‌ಸಿಆರ್‌ಎ ನಿಯಮಾವಳಿಗಳಿಗೆ ತಿದ್ದುಪಡಿ ತಂದಿರುವುದು ಇದು ಎರಡನೇ ಬಾರಿ. 2016ರ ಹಣಕಾಸು ಮಸೂದೆಯಲ್ಲಿ 2010ರ ಎಫ್‌ಸಿಆರ್‌ಎ ಕಾಯ್ದೆಯನ್ನು ವಿದೇಶಿ ಕಂಪನಿ ಎಂದರೆ ಯಾವುದು ಎಂಬುದನ್ನು ಕುರಿತ ನಿರೂಪಣೆಯನ್ನು ಬದಲಿಸಲು ತಿದ್ದುಪಡಿ ಮಾಡಲಾಯಿತು. ಬಿಜೆಪಿ ಮತ್ತು ಕಾಂಗ್ರೆಸ್ ಬ್ರಿಟನ್ನಿನಲ್ಲಿರುವ ವೇದಾಂತ ಗುಂಪಿನ ವಿದೇಶಿ ವಂತಿಗೆಗಳನ್ನು ಸ್ವೀಕರಿಸಿದ ತಪ್ಪಿತಸ್ಥರು ಎಂದು ದಿಲ್ಲಿ ಹೈಕೋರ್ಟ್ ನೀಡಿದ ತೀರ್ಪಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವಂತೆ ಈ ತಿದ್ದುಪಡಿ ಮಾಡಲಾಯಿತು.

ಆದರೆ ಈ ತಿದ್ದುಪಡಿಯಿಂದ ಅವರ ಉದ್ದೇಶ ಈಡೇರಲಿಲ್ಲ. ಏಕೆಂದರೆ ಅವರು ಆ ವಂತಿಗೆಗಳನ್ನು ಪಡೆದದ್ದು 2010ರ ಮೊದಲು. ಆದ್ದರಿಂದ ಈ ತಿದ್ದುಪಡಿಯನ್ನು 1976ರಿಂದಲೇ ಪೂರ್ವಾನ್ವಯ ಗೊಳಿಸಲಿಕ್ಕಾಗಿ 2018ರ ಹಣಕಾಸು ಮಸುದೆಯಲ್ಲಿ ಎರಡನೇ ತಿದ್ದುಪಡಿ ತರಲಾಗಿದೆ.

ಮತ್ತೊಮ್ಮೆ ಈ ತಿದ್ದುಪಡಿಗೆ ಒಂದು ಹಣ ಮಸೂದೆ ಎಂಬ ಪಟ್ಟ ಹಚ್ಚಿ ಸರಕಾರ ರಾಜ್ಯಸಭೆಯ ಪರೀಕ್ಷಣೆ ಮತ್ತು ಮಂಜೂರಾತಿಯ ಅಗತ್ಯದಿಂದ ತಪ್ಪಿಸಿಕೊಂಡಿದೆ. ಈ ರೀತಿ ಸಂಸದೀಯ ವಿಧಿ-ವಿಧಾನಗಳನ್ನು ಅತ್ಯಂತ ಸಿನಿಕತನದಿಂದ ಮುರಿಯುವುದು ಬಿಜೆಪಿ ಆಳ್ವಿಕೆಯ ಮುಖ್ಯ ಲಕ್ಷಣವಾಗಿ ಬಿಟ್ಟಿದೆ.

ಪ್ರಸಕ್ತ ಅಧಿವೇಶನದಲ್ಲಿ, ಇನ್ನೊಂದು ನಾಟಕೀಯ ಬದಲಾವಣೆ ನಡೆಯಿತು. ತೆಲುಗು ದೇಶಂ ಪಕ್ಷ(ಟಿಡಿಪಿ) ಕೇಂದ್ರ ಸಂಪುಟದಿಂದ ತನ್ನ ಎರಡು ಮಂತ್ರಿಗಳನ್ನು ಹಿಂತೆಗೆದುಕೊಂಡಿತು, ಅಂತಿಮವಾಗಿ ಎನ್‌ಡಿಎ ಯಿಂದಲೂ ಹೊರಬಂದು ಸರಕಾರದ ವಿರುದ್ಧ ಒಂದು ಅವಿಶ್ವಾಸ ಠರಾವು ಮಂಡಿಸಲು ನಿರ್ಧರಿಸಿತು. ಈ ಮೂಲಕ ಒಂದು ಅವಿಶ್ವಾಸ ಠರಾವನ್ನು ಮಂಡಿಸಿದ್ದ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಜೊತೆಗೂಡಿತು. ಆದರೆ ಅವಿಶ್ವಾಸ ಠರಾವಿಗೆ ಬೆಂಬಲವಾಗಿ 50ಕ್ಕೂ ಹೆಚ್ಚು ಸಂಸತ್ ಸದಸ್ಯರು ಎದ್ದು ನಿಂತರೂ ಲೋಕಸಭಾಧ್ಯಕ್ಷರು ಸದನ ವ್ಯವಸ್ಥಿತವಾಗಿಲ್ಲ ಎನ್ನುತ್ತ ಇದನ್ನು ಗಮನಕ್ಕೆ ತಗೊಳ್ಳಲು ನಿರಾಕರಿಸಿದರು.

ಆ ಸಮಯದಿಂದ ಸತತ ಆರು ದಿನಗಳ ಕಾಲ ಲೋಕಸಭೆಯಲ್ಲಿ ಅವಿಶ್ವಾಸ ಠರಾವನ್ನು ಎತ್ತಿಕೊಳ್ಳದಂತೆ ಅಡ್ಡಿಪಡಿಸಲಾಗಿದೆ. ಎಐಎಡಿಎಂಕೆ ಮತ್ತು ಟಿಆರ್‌ಎಸ್ ಸಂಸತ್ ಸದಸ್ಯರು ಸದನದ ಬಾವಿಗೆ ಹೋಗಿ ಪ್ರತಿಭಟಿಸುತ್ತಾರೆ ಮತ್ತು ಇದನ್ನೇ ನೆವವಾಗಿ ಮಾಡಿಕೊಂಡು ಸದನವನ್ನು ಯಾವುದೇ ಕಲಾಪವನ್ನು ಎತ್ತಿಕೊಳ್ಳದೆ ಮುಂದೂಡಲಾಗುತ್ತಿದೆ.

ಮಂಗಳವಾರ, ಮಾರ್ಚ್ 27ರಂದು ಟಿಆರ್‌ಎಸ್ ತನ್ನ ಕಾರ್ಯಾಚರಣೆಯನ್ನು ಹಿಂತೆಗೆದುಕೊಂಡಿತು, ಆದರೆ ಎಐಎಡಿಎಂಕೆ ತನ್ನ ಪ್ರತಿಭಟನೆಯನ್ನು ಮುಂದುವರೆಸಿತು. ಈ ನಡುವೆ ಕಾಂಗ್ರೆಸ್, ಸಿಪಿಐ(ಎಂ) ಮತ್ತು ಇತರ ಪಕ್ಷಗಳೂ ಅವಿಶ್ವಾಸ ಠರಾವನ್ನು ಮಂಡಿಸಿವೆ. ಆದರೂ, ಲೋಕಸಭಾಧ್ಯಕ್ಷರು ಇವನ್ನು ಗಮನಿಸಲು ನಿರಾಕರಿಸಿದ್ದಾರೆ. ಇದನ್ನು ಬರೆಯುವ ವೇಳೆಗೆ (ಮಾರ್ಚ್ 28) ಇನ್ನೂ ಸನ್ನಿವೇಶದಲ್ಲಿ ಬದಲಾವಣೆ ಆಗಿಲ್ಲ. ಭಾರೀ ಗದ್ದಲದ ನಡುವೆ ಹಣಕಾಸು ಮಸೂದೆಯನ್ನು ಪಾಸು ಮಾಡಿಸಿಕೊಳ್ಳಲು ಸಾಧ್ಯವಾಯಿತು, ಆದರೆ ಅದಕ್ಕಿಂತ ಬಹಳ ಕಡಿಮೆ ಗದ್ದಲವಿದ್ದರೂ ಅವಿಶ್ವಾಸ ಠರಾವಿಗೆ ಅನುಮತಿ ಕೊಡಲಾಗಿಲ್ಲ.

ಬಿಜೆಪಿ ಈಗ ತನ್ನ ಹಿಂಬಾಲಕನಾಗಿ ಬಿಟ್ಟಿರುವ ಎಐಎಡಿಎಂಕೆ ಯನ್ನು ಅವಿಶ್ವಾಸ ಠರಾವನ್ನು ತಪ್ಪಿಸಲು ಒಂದು ನೆವವಾಗಿ ಬಳಸುತ್ತಿದೆ. ಇದಕ್ಕೆ ಕಾರಣ ಸ್ವಯಂವೇದ್ಯ. ಯಾವುದೇ ಅವಿಶ್ವಾಸ ಠರಾವನ್ನು ಸೋಲಿಸಲು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳಿಗೆ ಸಾಕಷ್ಟು ಸದಸ್ಯಬಲ ನಿಸ್ಸಂದೇಹವಾಗಿಯೂ ಇದೆಯಾದರೂ ಠರಾವಿನ ಮೇಲಿನ ಮತಗಳು ಎನ್‌ಡಿಎ ಬಲದಲ್ಲಿ ಇಳಿಕೆಯಾಗಿರುವುದನ್ನು ತೋರಿಸುತ್ತವೆ. ಏಕೆಂದರೆ ಟಿಡಿಪಿ ಹೊರನಡೆದಿದೆ, ಶಿವಸೇನೆ ದೂರ ಸರಿದಿದೆ ಮತ್ತು ಈ ಹಿಂದೆ ಹೆಚ್ಚು ತಟಸ್ಥ ನಿಲುವನ್ನು ತಳೆಯುತ್ತಿದ್ದ ಬಿಜೆಡಿ ಮತ್ತು ಟಿಆರ್‌ಎಸ್ ಈ ಕಡೆ ಬಂದಿವೆ.

ಬಿಜೆಪಿಯ ಕುತಂತ್ರ ಮತ್ತು ಸಿನಿಕ ಕಸರತ್ತುಗಳಿಂದ ಕುತ್ತು ಬಂದಿರುವುದು ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಮತ್ತು ಸ್ವತಃ ಸಂಸತ್ತಿನ ವಿಶ್ವಾಸಾರ್ಹತೆಗೇ.

ಅನು: ಕೆ.ವಿ.

ದೊಂಬಿಕೋರರಿಗೆ ದೋಷವಿಮುಕ್ತಿ: ಕಾನೂನಿನ ಆಳ್ವಿಕೆಯ ಅಪಹಾಸ್ಯ

2013ರ ಗಲಭೆಗಳಂದ ಗಳಿಸಿದ ರಾಜಕೀಯ ಲಾಭಗಳನ್ನು ಪುನರಾವರ್ತಿಸುವ ಉದ್ದೇಶದಿಂದ, ಈಗಷ್ಟೇ ಮಾಯಲು ಆರಂಭವಾಗಿರುವ ಗಾಯಗಳನ್ನು ಮತ್ತೆ ಕೆದಕಲು ಬಿಜೆಪಿ ತನ್ನ ರಾಜ್ಯ ಸರಕಾರವನ್ನು ಬಳಸಿಕೊಳ್ಳುತ್ತಿದೆ. ಕಾನೂನಿನ ಆಳ್ವಿಕೆಯನ್ನು ರಕ್ಷಿಸಬೇಕಾದರೆ ನ್ಯಾಯಾಲಯಗಳು ಹೇಯ ಅಪರಾಧಗಳಲ್ಲಿ ಭಾಗಿಯಾದವರ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆಯುವ ಕ್ರಮವನ್ನು ಪ್ರತಿರೋಧಿಸಬೇಕು ಹಾಗೂ ಸಂತ್ರಸ್ತರಿಗೆ ನ್ಯಾಯವನ್ನು ಖಾತರಿಗೊಳಿಸಬೇಕು. ಉತ್ತರ ಪ್ರದೇಶದ ಜನತೆ ಕಾನೂನಿನ ಆಳ್ವಿಕೆಯ ವಿಡಂಬನೆ ಮಾಡುವ ಪ್ರಯತ್ನಕ್ಕೆ ಇಳಿದಿರುವ ಬಿಜೆಪಿಗೆ ಪಾಠ ಕಲಿಸಲಿದ್ದಾರೆ.



ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ ಸರಕಾರ ಕಾನೂನುಬದ್ಧ ಆಡಳಿತವನ್ನು ನಡೆಸುತ್ತದೆ ಎಂಬ ನಿರೀಕ್ಷೆ ಹುಸಿಯಾಗಿದೆ. ಈ ಬಗ್ಗೆ ಇದ್ದ ಅನುಮಾನಗಳೆಲ್ಲವೂ ಮುಜಫ್ಫರ್‌ನಗರ ಮತ್ತು ನೆರೆಯ ಜಿಲ್ಲೆಗಳಲ್ಲಿ 2013ರಲ್ಲಿ ನಡೆದ ಹೇಯ ಮತ್ತು ರಕ್ತಸಿಕ್ತ ಕೋಮುವಾದಿ ಹತ್ಯಾಕಾಂಡದ ವೇಳೆ ದಾಖಲಿಸಲಾಗಿದ್ದ 131 ಪ್ರಕರಣಗಳನ್ನು ವಾಪಸ್ ಪಡೆಯಲು ತಾನು ಕ್ರಮ ಕೈಗೊಂಡಿರುವುದಾಗಿ ಮುಖ್ಯಮಂತ್ರಿ ಘೋಷಿಸಿರುವುದರಿಂದ ನಿವಾರಣೆಯಾಗಿವೆ. ಈ ಪ್ರಕರಣಗಳ ಪೈಕಿ 12 ಕೊಲೆ ಪ್ರಕರಣಗಳು, ಹಲವು ಕೊಲೆ ಯತ್ನ, ಡಕಾಯಿತಿ ಮತ್ತಿತರ ಹೇಯ ಅಪರಾಧಗಳಿಗೆ ಸಂಬಂಧಿಸಿದ್ದಾಗಿವೆ. ಎಲ್ಲಾ ಆರೋಪಿಗಳು ಹಿಂದೂ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಹಾಗೂ ಇವರಲ್ಲಿ ಸಚಿವರು, ಶಾಸಕರು ಮತ್ತು ಇತರ ಪ್ರಮುಖ ಬಿಜೆಪಿ ಪದಾಧಿಕಾರಿಗಳಿದ್ದಾರೆ.

ದೊಂಬಿಗಳ ಸಂಬಂಧ ಒಟ್ಟು 503 ಪ್ರಕರಣಗಳು ದಾಖಲಾಗಿದ್ದವು. ಅವುಗಳಲ್ಲಿ ಕಾಲು ಭಾಗದಷ್ಟು ಕೇಸ್‌ಗಳನ್ನು ವಾಪಸ್ ಪಡೆಯುವ ಉದ್ದೇಶ ಸರಕಾರದ್ದಾಗಿದೆ. ಮುಜಫ್ಫರ್‌ನಗರದ ಇತಿಹಾಸದಲ್ಲೇ ಕಂಡರಿಯದ ಅತ್ಯಂತ ಭಯಾನಕವಾದ ಈ ದೊಂಬಿಗಳಲ್ಲಿ 60ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದರು. ನೂರಾರು ಜನರು ಗಂಭೀರವಾಗಿ ಗಾಯಗೊಂಡಿದ್ದರು, ಒಂದು ಡಜನ್‌ಗೂ ಹೆಚ್ಚು ಮಹಿಳೆಯರ ಮೇಲೆ ಅತ್ಯಾಚಾರ ನಡೆದಿತ್ತು. ಸಾವಿರಾರು ಮನೆಗಳನ್ನು ಸುಟ್ಟು ಹಾಕಲಾಗಿತ್ತು. 40 ಸಾವಿರಕ್ಕೂ ಹೆಚ್ಚು ಜನರು ತಮ್ಮ ಮನೆಗಳು ಹಾಗೂ ಹಳ್ಳಿಗಳನ್ನು ತೊರೆದು ಹೋಗಿ ಎಲ್ಲೆಲ್ಲೋ ಆಶ್ರಯ ಪಡೆದಿದ್ದರು. ಸಂತ್ರಸ್ತರಿಗೆ ನ್ಯಾಯ ಸಿಗಬಾರದು ಎಂಬುದು ಯೋಗಿ ಸರಕಾರದ ಉದ್ದೇಶವಾಗಿದೆ ಎಂಬುದು ತುಂಬಾ ಸ್ಪಷ್ಟ. ಅದರ ಬದಲು ಗಲಭೆಗಳಲ್ಲಿ ಒಳಗೊಂಡು ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗವಹಿಸಿದ ಸಂಘ ಪರಿವಾರದ ಕಾರ್ಯಕರ್ತರನ್ನು ರಕ್ಷಿಸುವ ಬಗ್ಗೆ ಮಾತ್ರ ಅದು ಆಸಕ್ತಿ ಹೊಂದಿದೆ. ಪ್ರಮುಖ ಆರ್‌ಎಸ್‌ಎಸ್-ಬಿಜೆಪಿ ನಾಯಕರು ಕಳೆದೊಂದು ವರ್ಷದಲ್ಲಿ ಈ ಸಂಬಂಧ ಮುಂದಿಟ್ಟ ಬೇಡಿಕೆಗೆ ಅನುಗುಣವಾಗಿ ಈಗ ಈ ಕ್ರಮಕ್ಕೆ ಸರಕಾರ ಮುಂದಾಗಿದೆ.

ತಮ್ಮ ಕಾರ್ಯಕರ್ತರನ್ನು ಕಾನೂನಿನ ಹಿಡಿತದಿಂದ ರಕ್ಷಿಸಲು ಎಲ್ಲಾ ಬಿಜೆಪಿ ಸರಕಾರಗಳು ಮುಂದಾಗುತ್ತವೆ. ಆದರೆ ಈ ವಿಚಾರದಲ್ಲಿ ಯೋಗಿ ಸರಕಾರದ ನಡೆ ಅತ್ಯಂತ ನಾಚಿಕೆಗೇಡಿನದ್ದಾಗಿದೆ. ಕಳೆದ ವರ್ಷ ಅದು 'ರಾಜಕೀಯ ಪ್ರೇರಿತವಾದ' 20 ಸಾವಿರ ಪ್ರಕರಣಗಳನ್ನು ವಾಪಸ್ ಪಡೆಯಲು ಅನುಕೂಲವಾಗುವ ಒಂದು ಕಾನೂನನ್ನು ಅಂಗೀಕರಿಸಿತು. 22 ವರ್ಷಗಳ ಹಿಂದೆ ಅಪರಾಧ ದಂಡ ಸಂಹಿತೆಯ (ಸಿಆರ್‌ಪಿಸಿ) 188ನೇ ಸೆಕ್ಷನ್ ಅನ್ವಯ ತನ್ನ ಹಾಗೂ ಇತರ 13 ಮಂದಿ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಮೊಕದ್ದಮೆಗಳನ್ನು ಮುಖ್ಯಮಂತ್ರಿ ವಾಪಸ್ ಪಡೆದಿರುವುದರ ಮುಂದೆ ಈಗಿನ ನಡೆ ಆಶ್ಚರ್ಯಕರವೇನೂ ಅಲ್ಲ.

ಮುಜಫ್ಫರ್‌ನಗರ ಗಲಭೆಗಳ ಕೇಸ್‌ಗಳನ್ನು ವಾಪಸ್ ಪಡೆಯಲು ಪ್ರಯತ್ನಿಸುತ್ತಿರುವುದಕ್ಕೆ ತಕ್ಷಣದ ಕಾರಣಗಳಿವೆ. ಬಿಜೆಪಿ ಸಂಸದ ಹುಕುಮ್ ಸಿಂಗ್ ನಿಧನದಿಂದ ತೆರವಾದ ನೆರೆಯ ಕೈರಾನಾ ಕ್ಷೇತ್ರದಲ್ಲಿ ಉಪ-ಚುನಾವಣೆ ನಡೆಯಲಿದೆ. ಹುಕುಮ್ ಸಿಂಗ್ ಕೂಡ 2013ರ ಗಲಭೆಗಳ ಆರೋಪಿಗಳಲ್ಲಿ ಒಬ್ಬರಾಗಿದ್ದರು. ಗೋರಖ್‌ಪುರ ಮತ್ತು ಫೂಲ್‌ಪುರ ಲೋಕಸಭಾ ಕ್ಷೇತ್ರಗಳಿಗೆ ಇತ್ತೀಚೆಗೆ ನಡೆದ ಉಪ-ಚುನಾವಣೆಗಳಲ್ಲಿ ಭಾರೀ ಸೋಲು ಅನುಭವಿಸಿದ ಬಿಜೆಪಿ, ಇದೀಗ ಕೈರಾನಾ ಕ್ಷೇತ್ರವನ್ನೂ ಕಳೆದುಕೊಳ್ಳಲು ಇಷ್ಟ ಪಡುವುದಿಲ್ಲ. ಸಮಾಜವಾದಿ ಪಕ್ಷ (ಎಸ್‌ಪಿ) ಮತ್ತು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ)ಗಳ ಮೈತ್ರಿ ಹೆಚ್ಚೆಚ್ಚು ಅಪಾಯಕಾರಿಯಾಗುತ್ತಿದೆ ಎಂಬುದನ್ನು ಮನಗಂಡಿರುವ ಬಿಜೆಪಿ, ಹಿಂದೆ ತನಗೆ ಭಾರೀ ಲಾಭ ತಂದುಕೊಟ್ಟ ಕೋಮು ಧ್ರುವೀಕರಣದ ತನ್ನ ಹಳೆಯ ತಂತ್ರಕ್ಕೆ ಮತ್ತೊಮ್ಮೆ ಮೊರೆ ಹೋಗುತ್ತಿದೆ. ಎಸ್‌ಪಿ-ಬಿಎಸ್‌ಪಿ ಒಟ್ಟಿಗೆ ಬರುತ್ತಿರುವುದು ಮಾತ್ರವಲ್ಲದೆ ಎರಡೂ ಸಮುದಾಯಗಳ ರೈತರು ಮತ್ತು ಗ್ರಾಮೀಣ ಕಾರ್ಮಿಕರ ನಡುವೆ ಗಲಭೆಗಳ ವೇಳೆ ಉಂಟಾಗಿದ್ದ ವೈರತ್ವವನ್ನು ಮರೆತು ಹೊಸ ಬಾಂಧವ್ಯ ಬೆಸೆಯಲು ಪ್ರಯತ್ನಗಳು ನಡೆಯುತ್ತಿರುವುದು ಕೂಡ ಮಹತ್ವದ್ದು ಎನ್ನುವುದನ್ನು ಮರೆಯಬಾರದು.

2013ರ ಗಲಭೆಗಳು ಪಶ್ಚಿಮ ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ದೊಡ್ಡ ರಾಜಕೀಯ ಲಾಭಗಳನ್ನು ಗಳಿಸಿಕೊಟ್ಟಿದ್ದವು. ಇದನ್ನು ಪುನರಾವರ್ತಿಸುವ ಉದ್ದೇಶದಿಂದ, ಈಗಷ್ಟೇ ಮಾಯಲು ಆರಂಭವಾಗಿರುವ ಗಾಯಗಳನ್ನು ಮತ್ತೆ ಕೆದಕಲು ಬಿಜೆಪಿ ತನ್ನ ರಾಜ್ಯ ಸರಕಾರವನ್ನು ಬಳಸಿಕೊಳ್ಳುತ್ತಿದೆ. ಬಿಜೆಪಿ-ಆರ್‌ಎಸ್‌ಎಸ್ ಪ್ರಚೋದನೆ-ಪ್ರಚಾರಕ್ಕೆ ಬಲಿಬಿದ್ದು ದೊಂಬಿಗಳಲ್ಲಿ ಭಾಗವಹಿಸಬೇಕಾಯಿತು ಎಂಬುದರಿಂದ ಸಿಟ್ಟಾಗಿರುವ ಹಿಂದೂಗಳನ್ನು ಸಮಾಧಾನ ಪಡಿಸಲೂ ಅದು ಪ್ರಯತ್ನಿಸುತ್ತಿದೆ. ಅವರಲ್ಲಿ ಅನೇಕರು ಬಂಧನಕ್ಕೆ ಒಳಗಾಗಿದ್ದರು ಮತ್ತು ಮೊಕದ್ದಮೆಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದರು. ಹೀಗಾಗಿ, ಉಪ-ಚುನಾವಣೆ ಹತ್ತಿರವಿರುವುದರಿಂದ ಈ ಅಸಮಾಧಾನ ಹೆಚ್ಚು ಬೆಳೆಯಲು ಬಿಟ್ಟರೆ ತನಗೆ ತೊಂದರೆ ಎಂದು ಎಂದು ಬಿಜೆಪಿ ಭಾವಿಸಿದೆ.

ಉತ್ತರ ಪ್ರದೇಶದ ಕಾನೂನು ವ್ಯವಸ್ಥೆಯ ಈಗಿನ ಸ್ವರೂಪ ಮತ್ತು ಈ ಸರಕಾರಿ ಯಂತ್ರದಲ್ಲಿ ಕೋಮುವಾದ ಹೊಕ್ಕಿರುವುದನ್ನು ನೋಡಿದಾಗ ಗಲಭೆ ಸಂತ್ರಸ್ತರಿಗೆ ನ್ಯಾಯ ಸಿಗುವ ಆಶಾಭಾವನೆ ತುಂಬಾನೇ ಕಡಿಮೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಒಂದು ಅನ್ಯಾಯದ ವ್ಯವಸ್ಥೆ ಸ್ಥಾಪಿಸಲು ತಾನು ಬದ್ಧ ಎನ್ನುವುದನ್ನು ತನ್ನ ಇತ್ತೀಚಿನ ಕ್ರಮಗಳಿಂದ ಬಿಜೆಪಿ ಸರಕಾರ ತೋರಿಸಿಕೊಟ್ಟಿದೆ. ಸಂವಿಧಾನಕ್ಕೆ ತನ್ನ ನಿಷ್ಠೆಯನ್ನು ಘೋಷಿಸುವಲ್ಲಿ ಗಂಟಲು ಹರಿದುಕೊಳ್ಳುತ್ತಿರುವ ಪ್ರಧಾನಿ ನರೇಂದ್ರ ಮೋದಿ ಈ ವಿಚಾರದಲ್ಲಿ ಮೌನ ವ್ರತಧಾರಿಯಾಗಿದ್ದಾರೆ. ಬಿಜೆಪಿ ಆಳ್ವಿಕೆಯಲ್ಲಿ ಕಾನೂನು ಪ್ರಕಾರ ಆಡಳಿತ ಅಪಾಯಕ್ಕೊಳಗಾಗಿದೆ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ.

ಕಾನೂನಿನ ಆಳ್ವಿಕೆಯನ್ನು ರಕ್ಷಿಸಬೇಕಾದರೆ ನ್ಯಾಯಾಲಯಗಳು ಈಗ ತಮ್ಮ ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗಿದೆ. ಹೇಯ ಅಪರಾಧಗಳಲ್ಲಿ ಭಾಗಿಯಾದವರ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆಯುವ ಕ್ರಮವನ್ನು ಅವುಗಳು ಪ್ರತಿರೋಧಿಸಬೇಕು ಹಾಗೂ ಸಂತ್ರಸ್ತರಿಗೆ ನ್ಯಾಯವನ್ನು ಖಾತರಿಗೊಳಿಸಬೇಕು. ಉತ್ತರ ಪ್ರದೇಶದ ಜನತೆ ಕಾನೂನಿನ ಆಳ್ವಿಕೆಯ ವಿಡಂಬನೆ ಮಾಡುವ ಪ್ರಯತ್ನಕ್ಕೆ ಇಳಿದಿರುವ ಬಿಜೆಪಿಗೆ ಪಾಠ ಕಲಿಸಲಿದ್ದಾರೆ.

ಅನು:ವಿಶ್ವ



ಉತ್ತರ ಕನ್ನಡ ಜಿಲ್ಲೆಯ – ಹಳಿಯಾಳ ವಿಧಾನ ಸಭಾ ಕ್ಷೇತ್ರ– ನಂ. 76

ರೈತ–ಕಾರ್ಮಿಕ–ಆದಿವಾಸಿ ಕೇಂದ್ರಿತ ತಾಲೂಕುಗಳ ಬಹುತ್ವದ ಕ್ಷೇತ್ರ

ಯಮುನಾ ಗಾಂವ್ಕರ್



ವೈವಿಧ್ಯಮಯ ಪರಿಸರ ಹೊಂದಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಳಿಯಾಳ, ಕಾರವಾರ, ಕುಮಟಾ, ಭಟ್ಕಳ, ಶಿರಸಿ, ಯಲ್ಲಾಪುರ ಹೀಗೆ 6 ವಿಧಾನ ಸಭಾ ಕ್ಷೇತ್ರಗಳಿವೆ. ಒಟ್ಟು ಜನಸಂಖ್ಯೆ 14.37 ಲಕ್ಷ ಇದೆ. 82.61% ಹಿಂದುಗಳು, 13.08% ಮುಸ್ಲಿಂರು, 3.10 ಕ್ರಿಶ್ಚಿಯನ್ ರು ಹಾಗೂ ಉಳಿದಂತೆ ಸಿಕ್ಕರು, ಬೌದ್ಧರು, ಜೈನರು ಅತ್ಯಲ್ಪ ಪ್ರಮಾಣದಲ್ಲಿ ಇದ್ದಾರೆ. 4 ವಿಧಾನ ಸಭಾ ಕ್ಷೇತ್ರಗಳು ತಲಾ ಎರಡೆರಡು ತಾಲೂಕಿನ ಭಾಗವನ್ನು 2 ವಿಧಾನ ಸಭಾ ಕ್ಷೇತ್ರಗಳು ಮೂರು ತಾಲೂಕಿನ ಭಾಗಗಳನ್ನು ಹೊಂದಿವೆ. 2011 ರ ಜನಸಂಖ್ಯೆ ಪ್ರಕಾರ ಜಿಲ್ಲೆಯ ಜನಸಂಖ್ಯೆ ಒಟ್ಟು 5.60 ಲಕ್ಷ ಮಹಿಳೆಯರು, 5.74 ಲಕ್ಷ ಪುರುಷರು ಒಳಗೊಂಡು ಒಟ್ಟು 11.34 ಲಕ್ಷ ಮತದಾರರು ಇದ್ದಾರೆ.

ಹಳಿಯಾಳ ವಿಧಾನ ಸಭಾ ಕ್ಷೇತ್ರ ಪರಿಚಯ:

ಭೌಗೋಳಿಕವಾಗಿ ಅತಿ ವಿಶಾಲವಾದ ಕ್ಷೇತ್ರವಾಗಿದೆ. ಚುನಾವಣಾ ಆಯೋಗದ ಇತ್ತೀಚಿನ ಅಂಕಿಸಂಖ್ಯೆ ಪ್ರಕಾರ ಒಟ್ಟು 1.70 ಲಕ್ಷ ಮತದಾರರು ಇದ್ದಾರೆ. ಇದರಲ್ಲಿ ಮಹಿಳೆಯರು 83.6 ಸಾವಿರ ಪುರುಷರು 86.4 ಇದ್ದಾರೆ. ಮೂರು ತಾಲೂಕು ಸೇರಿ 215 ಬೂತ್ ಗಳಿವೆ. ಈ ಕ್ಷೇತ್ರಕ್ಕೆ 3 ತಾಲೂಕುಗಳು ಬರುತ್ತಿವೆ. ಅತಿ ಹೆಚ್ಚು ಅರಣ್ಯ ಮತ್ತು ಅರಣ್ಯವಾಸಿಗಳು ಮತ್ತು ಅಘೋಷಿತ ಆದಿವಾಸಿಗಳಾದ ಕುಣಬಿ–ಗೌಳಿ ಜನಾಂಗ ಇರುವ ರಾಜ್ಯದ ಅತಿದೊಡ್ಡ ತಾಲೂಕು ಜೋಯಿಡಾ, ಜಿಲ್ಲೆಯ ಮೊದಲ ಕಾರ್ಮಿಕ ನಗರವಾಗಿ ಬೆಳೆದುಬಂದ ದಾಂಡೇಲಿ, ಮಲೆನಾಡಿನ ಅಂಚಿನ ಬಯಲು ಸೀಮೆಯಾದ ರೈತ ಕೇಂದ್ರಿತ ಹಳಿಯಾಳ ಹೀಗೆ ಬಹುಭಾಷಿಕ, ಬಹು ಸಂಸ್ಕೃತಿಯ ಮಿನಿ ಇಂಡಿಯಾ ಇದಾಗಿದೆ. ಮರಾಠಿ, ಕೊಂಕಣಿ ಬಾಹುಳ್ಯವಿರುವುದರಿಂದ ಅನಭಿವೃದ್ಧಿಯ ಕಾರಣಕ್ಕಾಗಿ ಈಗಲೂ ಆಗಾಗ ಗೋವಾ ಅಥವಾ ಮಹಾರಾಷ್ಟ್ರಕ್ಕೆ ಸೇರಿಸಿ ಎಂಬ ಪ್ರತ್ಯೇಕತೆಯ ಕೂಗು ಇದೆ. ಹಳಿಯಾಳ ತಾಲೂಕಿನಲ್ಲಿ 74%, ಜೋಯಿಡಾದಲ್ಲಿ 76%, ದಾಂಡೇಲಿಯಲ್ಲಿ 83% ಸಾಕ್ಷರತೆ ಇದೆ ಎಂದು ಅಂಕಿಸಂಖ್ಯೆ ಹೇಳುತ್ತದೆ. ಜೋಯಿಡಾದ ಜನಸಂಖ್ಯೆಯ ಬೆಳವಣಿಗೆ 4% ಮಾತ್ರ.

ರಾಜಕೀಯವಾಗಿ ನೋಡಿದಾಗ, 2008 ರ ಪೂರ್ವದಲ್ಲಿ ಹಳಿಯಾಳ ಮತಕ್ಷೇತ್ರವು ಮುಂಡಗೋಡು ಹಾಗೂ ಯಲ್ಲಾಪುರದ ಕೆಲವು ಪ್ರದೇಶವನ್ನು ಹೊಂದಿತ್ತು. ತದನಂತರ ಕ್ಷೇತ್ರ ಮರುವಿಂಗಡಣೆಯಾಗಿ ಮುಂಡಗೋಡವನ್ನು ಬಿಟ್ಟುಕೊಟ್ಟು ಜೋಯಿಡಾವನ್ನು ಸೇರಿಸಿದರು. ಇದೀಗ ಹಳಿಯಾಳದ್ದೇ ಒಂದು ನಗರವಾದ ದಾಂಡೇಲಿ ಹೊಸ ತಾಲೂಕಾಗಿ ಘೋಷಿಸಲ್ಪಟ್ಟಿದೆ.

ಕಳೆದ 30 ವರ್ಷಗಳಿಂದ ಜನಪ್ರತಿನಿಧಿಯಾಗಿ 20 ವರ್ಷಗಳ ಕಾಲ ಭಾರೀ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಇನ್ನಿತರ ವಿವಿಧ ಖಾತೆಗಳ ಜೊತೆಗೆ ಉಸ್ತುವಾರಿ ಸಚಿವರಾಗಿ ಕೆಲಸ ನಿರ್ವಹಿಸಿದ ರಾಜ್ಯದ ಪ್ರಭಾವೀ ರಾಜಕಾರಣಿ ಆರ್. ವಿ. ದೇಶಪಾಂಡೆಯವರು ನಿರಂತರ ಸ್ಪರ್ಧಿಸುತ್ತಾ ಬಂದಿರುವ ಕ್ಷೇತ್ರವೂ ಇದಾಗಿದೆ. 1983 ರಲ್ಲಿ ಮೊದಲ ಬಾರಿಗೆ, ಅಂದಿನ ರಾಜಕೀಯ ನಿರ್ಣಯದ ಭಾಗವಾಗಿ ಜನತಾ ಪಕ್ಷಕ್ಕೆ (ಜನತಾದಳ) ಸಿಪಿಐ(ಎಂ) ಬೆಂಬಲ ಕೊಟ್ಟಾಗ ಆರ್. ವಿ. ದೇಶಪಾಂಡೆಯವರ ಮೊದಲ ಗೆಲುವು ಪ್ರಾರಂಭವಾಗಿತ್ತು.

> **ಅತಿ ಹೆಚ್ಚು ಅರಣ್ಯ ಮತ್ತು ಅರಣ್ಯವಾಸಿಗಳು ಮತ್ತು ಅಘೋಷಿತ ಆದಿವಾಸಿಗಳಾದ ಕುಣಬಿ–ಗೌಳಿ ಜನಾಂಗ ಇರುವ ರಾಜ್ಯದ ಅತಿದೊಡ್ಡ ತಾಲೂಕು ಜೋಯಿಡಾ, ಜಿಲ್ಲೆಯ ಮೊದಲ ಕಾರ್ಮಿಕ ನಗರವಾಗಿ ಬೆಳೆದುಬಂದ ದಾಂಡೇಲಿ, ಮಲೆನಾಡಿನ ಅಂಚಿನ ಬಯಲು ಸೀಮೆಯಾದ ರೈತ ಕೇಂದ್ರಿತ ಹಳಿಯಾಳ ಹೀಗೆ ಬಹುಭಾಷಿಕ, ಬಹು ಸಂಸ್ಕೃತಿಯ ಮಿನಿ ಇಂಡಿಯಾ ಇದಾಗಿದೆ.**

ಈ ಪ್ರದೇಶದಲ್ಲಿ ಅವಿಭಜಿತ ಕಮ್ಯುನಿಷ್ಟ ಪಕ್ಷದ ನೇತೃತ್ವದಲ್ಲಿ ರೈತ ಕಾರ್ಮಿಕರ ಬೃಹತ್ ಹೋರಾಟ ನಡೆದಿತ್ತು. 1967 ರಿಂದ 3 ಬಾರಿ ವಿಧಾನ ಸಭಾ ಕ್ಷೇತ್ರಕ್ಕೆ ಸಿಪಿಐ(ಎಂ) ಅಭ್ಯರ್ಥಿಗಳನ್ನು ಕಣ್ಣಕಿಳಿಸಿತ್ತು. ನಿರ್ಣಾಯಕವಾದಂಥ ಸ್ಪರ್ಧೆಯನ್ನೂ ನೀಡಲು ಸಾಧ್ಯವಾಗಿತ್ತು. ಅಲ್ಲದೇ ಭೂಮಿ ಹಕ್ಕು, ಉದ್ಯೋಗಾವಕಾಶಕ್ಕಾಗಿ ಮತ್ತು ಮೂಲ ಸೌಕರ್ಯಕ್ಕಾಗಿ ಸುಧೀರ್ಘ ಹೋರಾಟ ನಡೆದು, 1979 ರಲ್ಲಿ ಅತಿಕ್ರಮಣ ಭೂಮಿ ಸಕ್ರಮಾತಿ ಹೋರಾಟದಲ್ಲಿ ಕಾಮ್ರೇಡ್ ಮಾರುತಿ ಗಣೇಶಪ್ಪ ಪವಾರ್ ರವರು ಪೋಲಿಸ್ ಗುಂಡಿಗೆ ಆಹುತಿಯಾದ, ಅನೇಕ ಮುಖಂಡರ, ಕಾರ್ಯಕರ್ತರ ಬಂಧನವಾದ ಕ್ರಾಂತಿಕಾರಿ ಚಳುವಳಿ ನಡೆದಿದ್ದು ಇಲ್ಲಿಯೇ. 1980–81 ರಲ್ಲಿ ನಡೆದ ದಾಂಡೇಲಿಯ ಕಾರ್ಮಿಕ ವರ್ಗದ ಸುದೀರ್ಘ ನಿರ್ಣಾಯಕ ಹೋರಾಟದಿಂದ ದಾಂಡೇಲಿ ನಗರ ಸಭೆಯಲ್ಲಿ 1979 ರಿಂದ ಎರಡು ಬಾರಿ ಸಿಪಿಐ(ಎಂ) ಸದಸ್ಯರು ಮತ್ತು ಬೆಂಬಲಿಗರು ಗೆದ್ದು ಬಂದು ಪ್ರಾಮಾಣಿಕ ಸೇವೆ ಸಲ್ಲಿಸಲು ಸಾಧ್ಯವಾಗಿತ್ತು. ದಾಂಡೇಲಿಯನ್ನು ಮಾದರಿ ಕಾರ್ಮಿಕ ನಗರವಾಗಿಸಲು ಶಕ್ತಿಮೀರಿ ಶ್ರಮಿಸಲಾಗಿತ್ತು. ಹಲವಾರು ಗ್ರಾಮಮಟ್ಟಕ್ಕೆ ಹೋರಾಟ ವಿಸ್ತರಿಸಲು ಸಾಧ್ಯವಾಗಿತ್ತು, ಸಾವಿರಾರು ಕಾರ್ಮಿಕರನ್ನು ಕೆಲಸದಲ್ಲಿ ಕಾಯಂಗೊಳಿಸಲು ಹೋರಾಟದ ಹಕ್ಕು ಉಳಿಸಿಕೊಳ್ಳಲು ಸಾಧ್ಯವಾಗಿತ್ತು. ಮಾತ್ರವಲ್ಲ ಭೂಮಿ ಹಕ್ಕು ದೊರಕಿಸಲು ಅಂದಿನ ಕಾನೂನಿನಂತೆ ಸಾವಿರಾರು ಬಡ ರೈತರಿಂದ ಜೋಯಿಡಾ–ಹಳಿಯಾಳದ ಹಳ್ಳಿಗಳಲ್ಲಿ ಫಾರ್ಮ ನಂಬರ್ 7 ತುಂಬಿಸಲು ಸಾಧ್ಯವಾಗಿತ್ತು.

ಈ ದಾಂಡೇಲಿಯ ಸುತ್ತಮುತ್ತಲಿನ ಪ್ರದೇಶದಲ್ಲಿ, ಮೌಳಂಗಿ, ಪ್ರಧಾನಿ, ಹಳಿಯಾಳದ ಭಾಗದಲ್ಲಿ ಭೂಮಿಗ್ರಹಣ ಮಾಡಿಸಲು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ನೇತೃತ್ವ ನೀಡಿದ್ದವು ಎಂಬುದನ್ನು ಜನ ಈಗಲೂ ಹೆಮ್ಮೆಯಿಂದ ನೆನೆಯುತ್ತಾರೆ. ಬದಲಾದ ರಾಜಕೀಯ ವಿದ್ಯಮಾನಗಳಲ್ಲಿ, ಹಣಬಲ ತೋಳ್ಬಲದ ಮುಂದೆ ಚುನಾವಣೆ ಸೆಣಸಿ ಜಯಿಸುವುದು ಕಷ್ಟಕರವಾದರೂ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಜನತೆಯ ಸಂಕಷ್ಟಗಳ ನಿವಾರಣೆಗಾಗಿ ಈಗಲೂ ಹೋರಾಟ ನಿರತವಾಗಿವೆ. ಪರಿಣಾಮಕಾರಿ ನಾಯಕತ್ವ ನೀಡುತ್ತಿವೆ.

ದಾಂಡೇಲಿ ನೂತನ ತಾಲೂಕು ರಚನೆಯಾಗಬೇಕೆಂದು ಸರ್ವಪಕ್ಷಗಳ ಸಮಿತಿ ರಚಿಸುವಲ್ಲಿ, ಸಂಚಾಲನಾ ಸಮಿತಿಯಲ್ಲಿದ್ದು ಅದರ ದಶಕಗಳ ಹೋರಾಟ ಯಶಸ್ವಿಗೊಳಿಸುವಲ್ಲಿ ಸಿಪಿಐ(ಎಂ) ಪಕ್ಷದ ಪಾತ್ರ ನಿರ್ಣಾಯಕವಾಗಿತ್ತು.

ಈಗ ಈ ಕ್ಷೇತ್ರದ ಸಮಸ್ಯೆಗಳೇನು?

ಕ್ಷೇತ್ರದ 3 ತಾಲೂಕುಗಳೂ ವಿಭಿನ್ನ ಸಮಸ್ಯೆಗಳನ್ನು ಎದುರಿಸುತ್ತಿವೆ. ಆದರೆ ನಿರುದ್ಯೋಗ, ಮೂಲಸೌಕರ್ಯ ಹಾಗೂ ಭೂಮಿ ಕೇಂದ್ರಿತ ಸಮಸ್ಯೆಗಳು ಸರ್ವೇಸಾಮಾನ್ಯ. ಮೂರು ತಾಲೂಕಿನ ಯುವಜನರಿಗೆ ಅರಣ್ಯ ಇಲಾಖೆ ಮತ್ತು ಪ್ರವಾಸೋದ್ಯಮದಲ್ಲಿ ಖಾಯಂ ಉದ್ಯೋಗವಿಲ್ಲ ಎಂಬ ಕೂಗು ಜೋರಾಗಿಯೇ ಇದೆ. ಸಹಸ್ರಾರು ಯುವಜನರಿಗೆ ಉದ್ಯೋಗಾವಕಾಶ ಕಲ್ಪಿಸದೇ ಕೇವಲ ಚರಂಡಿ, ರಸ್ತೆ ಕಾಮಗಾರಿ, ದೊಡ್ಡದೊಡ್ಡ ಇಮಾರತು ನಿರ್ಮಿಸಿದರೆ ಅದು ಅಭಿವೃದ್ಧಿನಾ ಎಂದು ಜನ ಪ್ರಶ್ನಿಸುತ್ತಿದ್ದಾರೆ.

ಹಳಿಯಾಳ ಭಾಗದಲ್ಲಿ:

ಜನಸಾಮಾನ್ಯರು ಮೂಲಭೂತ ಸೌಕರ್ಯಗಳ ಸಮಸ್ಯೆ, ರೈತರು ನೀರಾವರಿ ಮತ್ತು ಬೆಳೆ ವಿಮೆ, ಅತಿಕ್ರಮಣ ಭೂಮಿ ಸಕ್ರಮಾತಿ ಸಮಸ್ಯೆಯನ್ನು ಪ್ರಧಾನವಾಗಿ ಎದುರಿಸುತ್ತಿದ್ದಾರೆ. ಎಪ್ಪತ್ತರ ದಶಕದಲ್ಲಿ ಭೂಮಿ ಸಮಸ್ಯೆಯನ್ನು ಮುಂದಿಟ್ಟು ಹೋರಾಡಿದಾಗ ಮಾರುತಿ ಗಣೇಶಪ್ಪ ಪವಾರ್ ಹುತಾತ್ಮರಾದರು, ಅನೇಕರು ಜೈಲು ಪಾಲಾದರು, ಆದಾಗ್ಯೂ ರೈತರು ಧೈರ್ಯದಿಂದ ತಮ್ಮ ಬದುಕಿಗಾಗಿ ಈಗಾಗಲೇ ಮಾಡಿಕೊಂಡ ಅತಿಕ್ರಮಣ ಭೂಮಿಯಲ್ಲಿ ಗಟ್ಟಿಯಾಗಿ ಉಳಿದರು, ಜೊತೆಗೆ ಅನೇಕ ಭೂ ರಹಿತ ರೈತರು ಸಾಗುವಳಿ ಯೋಗ್ಯ ಅರಣ್ಯ ಭೂಮಿ ಗ್ರಹಣ ಮಾಡಿದರು. ಆದರೆ ಇದೂವರೆಗೂ ಸಕ್ರಮವಾಗಲೇ ಇಲ್ಲ. ಕೆರೆಗಳ ಹೂಳೆತ್ತುವ ಕೆಲಸ ಭರದಿಂದ ಸಾಗುತ್ತಿದೆ ಎಂದರು, ಆದರೆ ರೈತರ ಮತ್ತು ಕುಡಿಯುವ ನೀರಿನ ಸಮಸ್ಯೆ ಹಾಗೆ ಉಳಿಯಿತು.

ಹಲವಾರು ಕಾಮಗಾರಿಗಳು ಪದೇಪದೇ ಉದ್ಘಾಟನೆಯಾಗುತ್ತಿವೆ. ಆದರೆ ಜಾರಿಯಾಗುತ್ತಿಲ್ಲ. ಸಮಸ್ಯೆಗಳನ್ನು ಜೀವಂತವಾಗಿಟ್ಟು ಮುಂದಿನ ಚುನಾವಣೆ ತನಕವೂ ಮುಂದುವರೆಸಲಾಗುತ್ತಿದೆ. ಕೆಲವು ಹೊಸ ಯೋಜನೆಗಳಿಗೆ ಭೂಮಿಯನ್ನು

ಪುಟ 11 ಕ್ಕೆ





ಬೈಂದೂರು ಜನತೆಯ ನಿರೀಕ್ಷೆಗಳು ಈಡೇರುವುದು ಹೇಗೆ?



ಬೈಂದೂರು ಹೊಸತಾಗಿ ರಚನೆಗೊಂಡಿರುವ ತಾಲೂಕು ಆಗಿರುವುದರಿಂದ ನಾಗರಿಕರಲ್ಲಿ ಸಾಕಷ್ಟು ನಿರೀಕ್ಷೆಗಳು ಹೆಚ್ಚಿವೆ. ಆರೋಗ್ಯ, ಶಿಕ್ಷಣ, ಉದ್ಯೋಗ, ಮನೆ ನಿವೇಶನ ಹಂಚಿಕೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಗಮನಾರ್ಹ ಸುಧಾರಣೆಯಾಗಬಹುದು ಎಂಬುದು ನಾಗರಿಕರ ಆಶಯ. ಬೈಂದೂರು ಕ್ಷೇತ್ರವು ಆರ್ಥಿಕವಾಗಿ ಹಿಂದುಳಿದಿದೆ. ಆದರೆ ಇಲ್ಲಿಂದ ಆಯ್ಕೆಯಾದ ಶಾಸಕರು, ಸಂಸತ್ ಸದಸ್ಯರು ಪ್ರಭಾವಿ ವ್ಯಕ್ತಿಗಳು ಆಗಿರುತ್ತಾರೆ. 4 ಬಾರಿ ಶಾಸಕರಾಗಿರುವ ಗೋಪಾಲ ಪೂಜಾರಿಯವರು ಕೆ.ಎಸ್. ಆರ್.ಟಿ.ಸಿ. ನಿಗಮದ ಅಧ್ಯಕ್ಷರು. ಇಲ್ಲಿನ ಸಂಸತ್ ಸದಸ್ಯರು ಯಡಿಯೂರಪ್ಪನವರು. ಆದರೂ ಕ್ಷೇತ್ರ ಅಭಿವೃದ್ಧಿಗೊಂಡಿಲ್ಲ. ಈ ಜನಪ್ರತಿನಿಧಿಗಳ ಸೋಗಲಾಡಿತನವನ್ನು ಜನರಿಗೆ ತಿಳಿಸುತ್ತ, ಇವರು ಪ್ರತಿನಿಧಿಸುತ್ತಿರುವ ಕಾಂಗ್ರೆಸ್, ಬಿಜೆಪಿಯ ಜನ ವಿರೋಧಿ ನೀತಿಗಳನ್ನು ಬಹಿರಂಗಗೊಳಿಸಬೇಕಾಗಿದೆ.

ವೆಂಕಟೇಶ್ ಕೋಣಿ

ಉಡುಪಿ ಜಿಲ್ಲೆಯಲ್ಲಿ ಬೈಂದೂರು, ಕುಂದಾಪುರ, ಉಡುಪಿ, ಕಾಪು, ಕಾರ್ಕಳ ಒಟ್ಟು 5 ವಿಧಾನಸಭಾ ಕ್ಷೇತ್ರ ಒಳಗೊಂಡಿದೆ. 31–12–2017 ರವರೆಗೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳನ್ನು ಹೊಂದಿದ್ದ ಈ ಕರಾವಳಿ ಜಿಲ್ಲೆ ಇದೀಗ ಬೈಂದೂರು, ಬ್ರಹ್ಮಾವರ, ಕಾಪು ಹಾಗೂ ಹೆಬ್ರಿ ತಾಲೂಕುಗಳಾಗಿ ಒಟ್ಟು 7 ತಾಲೂಕುಗಳನ್ನು ಹೊಂದಿದೆ. ಆ ಮೂಲಕ ಆಡಳಿತಾತ್ಮಕವಾಗಿ ವಿಕೇಂದ್ರೀಕರಣವಾಗಿದೆ. ಬೈಂದೂರು ತಾಲೂಕು ವ್ಯಾಪ್ತಿಯ 26 ಗ್ರಾಮ ಹಾಗೂ ನೆರೆಯ ಕುಂದಾಪುರ ತಾಲೂಕಿಗೆ ಸೇರಿದ ವಂಡ್ಸೆ ಹೋಬಳಿಯ ಗ್ರಾಮಗಳು ಸೇರಿದಂತೆ ಒಟ್ಟು 65 ಗ್ರಾಮಗಳನ್ನೊಳಗೊಂಡು ಬೈಂದೂರು ವಿಧಾನಸಭಾ ಕ್ಷೇತ್ರದ ರಚನೆಯಾಗಿದೆ. ಒಟ್ಟು ಮತದಾರರ ಸಂಖ್ಯೆ 2.18 ಲಕ್ಷ ಆಗಿದ್ದು 243 ಬೂತುಗಳಿವೆ.

ಬೈಂದೂರು ಹೊಸತಾಗಿ ರಚನೆಗೊಂಡಿರುವ ತಾಲೂಕು ಆಗಿರುವುದರಿಂದ ನಾಗರಿಕರಲ್ಲಿ ಸಾಕಷ್ಟು ನಿರೀಕ್ಷೆಗಳು ಹೆಚ್ಚಿವೆ. ಆರೋಗ್ಯ, ಶಿಕ್ಷಣ, ಉದ್ಯೋಗ, ಮನೆ ನಿವೇಶನ ಹಂಚಿಕೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಗಮನಾರ್ಹ ಸುಧಾರಣೆಯಾಗಬಹುದು ಎಂಬುದು ನಾಗರಿಕರ ಆಶಯ. ಬೈಂದೂರು ವಿಧಾನಸಭಾ ಕ್ಷೇತ್ರವು ದೂರದ ಹಳ್ಳಿಹೊಳೆಯಿಂದ ಉತ್ತರ ಕನ್ನಡ–ಉಡುಪಿ ಜಿಲ್ಲೆಯ ಗಡಿ ಪ್ರದೇಶ ಶಿರೂರು ವರೆಗೆ ಹಬ್ಬಿದೆ. ಕೊಲ್ಲೂರು, ಮುದೂರು, ಹೇರೂರು, ಕಾಲ್ತೋಡು, ಗೋಳಿಹೊಳೆ, ಯಳಜಿತ್ ಮುಂತಾದ ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಿದೆ. ರಸ್ತೆಗಳು ಇದ್ದರೂ ಜನಸಂಖ್ಯೆ, ಗ್ರಾಮಗಳಿಗೆ ಹೋಲಿಸಿದಲ್ಲಿ ಇನ್ನಷ್ಟು ರಸ್ತೆಗಳು, ಸೇತುವೆ ನಿರ್ಮಾಣ ಕಾರ್ಯ ಆಗಬೇಕಾಗಿದೆ.





ಕುಡಿಯುವ ನೀರಿನ ಸಮಸ್ಯೆ:

ಬೇಸಿಗೆ ಬಂದ ತಕ್ಷಣ ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಸರ್ವೇ ಸಾಮಾನ್ಯವಾಗಿದೆ. ಹಲವು ವರ್ಷಗಳ ಬೇಡಿಕೆಯಾಗಿರುವ ವರಾಹಿ ನೀರನ್ನು ಬೈಂದೂರಿಗೆ ತರುವ ಯೋಜನೆಯನ್ನು ಕಾರ್ಯಗತವಾಗುವಂತೆ ಮಾಡಬೇಕಾಗಿದೆ. ಶುದ್ದ ಕುಡಿಯುವ ನೀರಿನ ಸಮಸ್ಯೆ, ನೀರು ನಿರ್ವಹಣೆಯಲ್ಲಿ ವೈಫಲ್ಯ ಎದ್ದು ಕಾಣುತ್ತಿದೆ. ಆಧ್ದರಿಂದ ನದಿಯ ನೀರನ್ನು ಮೇಲಕ್ಕೆತ್ತಿ ಶುದ್ಧೀಕರಿಸಿ ನೀಡುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಕ್ಷೇತ್ರ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಬೇಕು.

ಆದರೆ ಈಗಾಗಲೇ ಮಂಜೂರಾಗಿರುವ ಶಿರೂರು, ಪಡುವರಿ, ಬೈಂದೂರು, ಯಡ್ತರೆ ಪಂಚಾಯತ್ ವ್ಯಾಪ್ತಿಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಒಂದು ದಶಕ ಕಳೆದರೂ ಕಾರ್ಯಗತವಾಗಿಲ್ಲ. ವಿಶೇಷವೆಂದರೆ ಶಿರೂರು ಗ್ರಾಮವನ್ನು ರಾಜ್ಯಸಭಾ ಸದಸ್ಯ, ಕಾಂಗ್ರೆಸಿನ ಹಿರಿಯ ಮುಖಂಡರಾದ ಆಸ್ಕರ್ ಫೆರ್ನಾಂಡಿಸ್ ರವರು ದತ್ತು ಸ್ವೀಕಾರ ಮಾಡಿದ್ದರೂ ಯೋಜನೆ ನೆನೆಗುದಿಗೆ ಬಿದ್ದಿದೆ.

ಆರೋಗ್ಯ :

ಆಸ್ಪತ್ರೆಗಳ ಕೊರತೆ ಬೈಂದೂರು ಕ್ಷೇತ್ರ ವ್ಯಾಪ್ತಿಯಲ್ಲಿ ಎದ್ದು ಕಾಣುತ್ತದೆ. ಜನರು ಉತ್ತಮ ಚಿಕಿತ್ಸೆಗಾಗಿ ಭಟ್ಕಳ ಅಥವಾ ಕುಂದಾಪುರದಲ್ಲಿರುವ ಆಸ್ಪತ್ರೆಗಳನ್ನು ಆಶ್ರಯಿಸಿರುತ್ತಾರೆ. ಬೈಂದೂರು ಸಮುದಾಯ ಆಸ್ಪತ್ರೆಯು ತಾಲೂಕು ಆಸ್ಪತ್ರೆಯಾಗಿ ಶೀಘ್ರ ಮಾರ್ಪಾಡು ಆಗಬೇಕಾಗಿದೆ. ಅಂದರೆ ಹಾಸಿಗೆ ಸಾಮರ್ಥ್ಯ 100ಕ್ಕೆ ಏರಿಕೆಯಾಗಬೇಕು. ಸ್ಕ್ಯಾನಿಂಗ್, ರಕ್ತ ಪರೀಕ್ಷೆ ಸೌಲಭ್ಯ, ಹೆರಿಗೆ ತಜ್ಞರು, ಸಿಬ್ಬಂದಿ ನೇಮಕ ಸೇರಿದಂತೆ ಅನೇಕ ಸವಲತ್ತುಗಳು ತಾಲೂಕು ಕೇಂದ್ರದಲ್ಲಿ ಲಭ್ಯವಾಗಬೇಕು.

ಕಿರಿಮಂಜೇಶ್ವರ, ಗಂಗೊಳ್ಳಿ, ವಂಡ್ಸೆ, ಕೊಲ್ಲೂರು, ಶಂಕರನಾರಾಯಣ ಮುಂತಾದ ಪ್ರದೇಶಗಳಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದು ಅಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸುವುದು ಬಹಳ ಅಗತ್ಯವಿದೆ. ಅಂದರೆ ಈ ಪ್ರದೇಶಗಳಲ್ಲಿ 40

ಪುಟ 10 ಕ್ಕೆ

ನಿರ್ಲಕ್ಷಕ್ಕೊಳಗಾದ ಮೂಡಬಿದ್ರಿ ಕ್ಷೇತ್ರ

ವಾಸುದೇವ ಉಚ್ಚಿಲ

67 ಗ್ರಾಮಗಳ ಅಸೆಂಬ್ಲಿ ಕ್ಷೇತ್ರವಾಗಿದ್ದರೂ, ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಕಾರಣವಾಗಿ, ಆಡಳಿತಾಂಗದ ದೃಷ್ಟಿ ಕೇವಲ ಮೂಡಬಿದ್ರಿಯ ಮೇಲೆಯೇ ಕೇಂದ್ರೀಕೃತವಾಗಿದೆ. ಪ್ರಚಾರದ ಅಬ್ಬರದಲ್ಲಿ ಇತರ ಗ್ರಾಮಗಳ ಅಭಿವೃದ್ಧಿ ಬಹಿರಂಗಕ್ಕೆ ಬರುತ್ತಿಲ್ಲ. ಶಾಸಕರೂ, ಆಳ್ವಾಸ್ ಸಂಸ್ಥೆಗಳೂ ಜನರನ್ನು ಯಾಮಾರಿಸಿವೆ. ಒಂದು ಬಾರಿ ಸಚಿವರೂ ಆಗಿದ್ದ ಅಭಯಚಂದ್ರ ಜೈನ್ 5 ಅವಧಿಗಳಿಂದ ಕಾಂಗ್ರೆಸ್ ಪಕ್ಷದಿಂದ ಈ ಕ್ಷೇತ್ರದ ಶಾಸಕರಾಗಿದ್ದಾರೆ. ಇವರ ಅವಧಿಯಲ್ಲಿ ಜನರ ನಿರೀಕ್ಷೆಗಳು ಹುಸಿಯಾಗಿವೆ.



ಕಳೆದ ಫೆಬ್ರವರಿ, 27 ರಿಂದ 28 ಗ್ರಾಮಗಳನ್ನೊಳಗೊಂಡ ಮೂಡಬಿದಿರಿ ತಾಲೂಕು ಉದಯವಾಗಿದೆ. ಮೂಡಬಿದ್ರಿ (ಮೂಡಬಿದ್ರಿ–ಮುಲ್ಕಿ) ಅಸೆಂಬ್ಲಿ ಕ್ಷೇತ್ರವು ಜಿಲ್ಲಾ ಪುನರ್ವಿಂಗಣೆಗೂ ಮೊದಲು ಕಾರ್ಕಳ ತಾಲೂಕಿನ ಒಂದಿಷ್ಟು ಗ್ರಾಮಗಳನ್ನೂ, ಮಂಗಳೂರು ತಾಲೂಕಿನ ಒಂದಿಷ್ಟು ಭಾಗಗಳನ್ನೂ ಒಳಗೊಂಡಿತ್ತು. ಪುನರ್ವಿಂಗಡಣೆ ಬಳಿಕ ಮೂಡಬಿದ್ರಿ ಕಾರ್ಕಳ ತಾಲೂಕಿನಿಂದ ಕಳಚಲ್ಪಟ್ಟು ಮಂಗಳೂರು ತಾಲೂಕಿಗೆ ಹಾಗೂ ದ.ಕ. ಜಿಲ್ಲೆಗೆ ಸೇರಿಸಲ್ಪಟ್ಟಿತು. ಜೆಡಿ(ಎಸ್) ಪಕ್ಷದಿಂದ 2 ಬಾರಿ ಮೂಡಬಿದ್ರಿ ಶಾಸಕರೂ, ಸಚಿವರೂ ಆಗಿದ್ದ ಅಮರನಾಥ ಶೆಟ್ಟಿಯವರ ಒತ್ತಡ ಹಾಗೂ ಮಂಗಳೂರಿನಿಂದ ಅದಕ್ಕಿರುವ ದೂರದ ಕಾರಣದಿಂದಾಗಿ ಮೂಡಬಿದ್ರಿ ತಾಲೂಕಾಗುವ ಪ್ರಸ್ತಾಪ ಮೊದಲಿನಿಂದಲೇ ಇದ್ದರೂ, ಈಚೆಗಷ್ಟೇ ತಾಲೂಕು ಸ್ಥಾನಮಾನ ಪಡೆದಿದೆ. ಈಗ ಮೂಡಬಿದ್ರಿ ಅಸೆಂಬ್ಲಿ ಕ್ಷೇತ್ರದಲ್ಲಿ 67 ಗ್ರಾಮಗಳಿದ್ದು, ಅದರಲ್ಲಿ ಮೂಡಬಿದ್ರಿ ತಾಲೂಕಿನ 28 ಗ್ರಾಮಗಳೂ, ಮಂಗಳೂರು ತಾಲೂಕಿನ 39 ಗ್ರಾಮಗಳೂ ಸೇರಿವೆ.



ಮಂಗಳೂರು–ಮುಂಬಯಿ ರಾಷ್ಟ್ರೀಯ ಹೆದ್ದಾರಿಯ ಮೇಲಿರುವ ಹಳೆಯಂಗಡಿ ಮತ್ತು ಮುಲ್ಕಿಗಳು ಈ ಕ್ಷೇತ್ರದ ಪಶ್ಚಿಮದಲ್ಲಿರುವ ಊರುಗಳು. ಅಭಿವೃದ್ಧಿ ಹೊಂದಿದ ಕರಾವಳಿ ಪ್ರದೇಶದಲ್ಲಿರುವುದರಿಂದ ಕೃಷಿಕ ಜನ ಅಲ್ಪಪ್ರಮಾಣದ ಜಮೀನನ್ನು ಕೈಬಿಟ್ಟು ಮಂಗಳೂರು, ನವಮಂಗಳೂರು,ಕೈಗಾರಿಕಾ ಸಂಕೀರ್ಣಗಳಲ್ಲಿ ಕೆಲಸಕ್ಕೆ ಹೋಗುವುದು ಹೆಚ್ಚಾಗಿದೆ. ಪದವಿ ಕಾಲೇಜುಗಳು, ಸಣ್ಣ ಉದ್ದಿಮೆಗಳು ಈ ಪ್ರದೇಶದಲ್ಲಿದೆ. ಮೂಡಬಿದ್ರಿ, ಮುಲ್ಕಿ, ಬಜ್ಪೆ, ಕಿನ್ನಿಗೋಳಿ ಅಭಿವೃದ್ಧಿ ಹೊಂದಿ ಪಟ್ಟಣಗಳಾಗಿವೆ. ಬಜ್ಪೆಯಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಒಂದೊಮ್ಮೆ ಕೃಷಿ ಪ್ರಧಾನವಾಗಿದ್ದ ಈ ಕ್ಷೇತ್ರದ ಗ್ರಾಮಗಳ ರೈತರು ಬತ್ತ ಸಾಗುವಳಿಯನ್ನು ಕಡಿಮೆ ಮಾಡುತ್ತಾ ಅಡಿಕೆ, ತೆಂಗು, ರಬ್ಬರ್‌ಗಳನ್ನು ಬೆಳೆಯತೊಡಗಿದ್ದಾರೆ. ಈ ವರ್ಷ ತೆಂಗಿಗೆ ಧಾರಣೆ ಇದ್ದರೂ ಅಡಕೆ ರಬ್ಬರುಗಳು ಬೆಲೆ ಕುಸಿತಕ್ಕೊಳಗಾಗಿದೆ. ಮೂಡಬಿದ್ರಿ ಸಮೀಪ ಅಡಿಕೆ ಬೆಳೆಯುವ ಮಧ್ಯಮ ರೈತರು ಹಸುರು ಬಾವುಟದಡಿ

ಪುಟ 10 ಕ್ಕೆ

ಬೈಂದೂರು ಜನತೆಯ ನಿರೀಕ್ಷೆಗಳು ಈಡೇರುವುದು ಹೇಗೆ?.........

ಪುಟ 9 ರಿಂದ

ಹಾಸಿಗೆಗಳುಳ್ಳ ಸರಕಾರಿ ಆಸ್ಪತ್ರೆಗಳು ಆಗಬೇಕಾಗಿದೆ. ಸಿಪಿಐ(ಎಂ) ಬೈಂದೂರು ಸಮಿತಿ ನೇತೃತ್ವದಲ್ಲಿ ಇತ್ತೀಚೆಗೆ ಸಳೀಯ ನಾಗರಿಕರೊಡಗೂಡಿ ಬೈಂದೂರು ಸರಕಾರಿ ಆಸ್ಪತ್ರೆಯ ಸಮಸ್ಯೆಗಳನ್ನು ಪರಿಹರಿಸಲು ಒತ್ತಾಯಿಸಿ ಬೃಹತ್ ಹೋರಾಟ ಮಾಡಲಾಗಿದೆ. ಕೂಡಲೇ ಬೇಡಿಕೆ ಈಡೇರಿಸುವ ಲಿಖಿತ ಭರವಸೆ ದೊರಕ್ಕಿದ್ದು ಇದು ಸಿಪಿಐ(ಎಂ) ಹೋರಾಟಕ್ಕೆ ಸಂದ ಗೆಲುವಾಗಿದೆ.



ತ್ಯಾಜ್ಯ ವಿಲೇವಾರಿಗೆ ಸಮರ್ಪಕ ಜಾಗ ಕಂಡುಹಿಡಿಯಲು ಜನಪ್ರತಿನಿಧಿಗಳಿಗೆ ಸಾಧ್ಯವಾಗಿಲ್ಲ. ಸರಕಾರಿ ಪ್ರಥಮ ದರ್ಜೆ ಕಾಲೇಜು ಕ್ಯಾಂಪಸ್ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಎಸೆಯುವುದರ ಮೂಲಕ ನೈರ್ಮಲ್ಯ ಕಾಪಾಡುವುದೇ ದೊಡ್ಡ ಸವಾಲಾಗಿದೆ.

ರೈಲು ಸಂಪರ್ಕ :

ಕಾರವಾರದಿಂದ ಬೆಂಗಳೂರಿಗೆ ಚಲಿಸುವ ರಾತ್ರಿ ರೈಲು ಪ್ರಯಾಣದ ಅವಧಿ ಕಡಿಮೆ ಮಾಡಲು ಹಾಗೂ ಇನ್ನೊಂದು ರಾತ್ರಿ ರೈಲು ಆರಂಭಿಸಲು ಆಗ್ರಹಿಸಿ ಪಕ್ಷದ ವತಿಯಿಂದ 14 ಸಾವಿರ ಸಹಿ ಸಂಗ್ರಹ ಮಾಡಿ ಹುಬ್ಬಳ್ಳಿಯಲ್ಲಿರುವ ರೈಲ್ವೆ ಜನರಲ್ ಮೆನೇಜರ್‌ರವರಿಗೆ ನೀಡಲಾಯಿತು. ಬೈಂದೂರು ಮತ್ತು ಕುಂದಾಪುರ ರೈಲು ನಿಲ್ದಾಣದ ಎದುರು ಸಿಪಿಐ(ಎಂ) ಪ್ರತಿಭಟನೆ ಮಾಡಿರುವುದು – ಜನಸ್ನೇಹಿ ಹೋರಾಟಗಳಲ್ಲಿ ಒಂದಾಗಿದೆ. ಇದರಿಂದಾಗಿ ಈ ವರ್ಷದ ಫೆಬ್ರುವರಿ 10ನೇ ತಾರೀಕಿನಿಂದ ವಾರದಲ್ಲಿ 4 ದಿನ ಹಾಸನ–ಕುಣಿಗಲ್ ಮಾರ್ಗವಾಗಿ ಬೆಂಗಳೂರು ತಲುಪುವ ಮೂಲಕ ಪ್ರಯಾಣದ ಅವಧಿ ಸುಮಾರು 2ಗಂಟೆ ಕಡಿಮೆಯಾಗಿದೆ. ಇದು ಸಿಪಿಐ(ಎಂ) ಹೋರಾಟಕ್ಕೆ ಸಂದ ಜಯವಾಗಿದೆ.

ಭೂಮಿಯ ಹಕ್ಕು:

ಬೈಂದೂರು ಕ್ಷೇತ್ರ ವ್ಯಾಪ್ತಿಯಲ್ಲಿ ಅರಣ್ಯ ಪ್ರದೇಶ ವಿಶಾಲವಾಗಿ ಹರಡಿಕೊಂಡಿದೆ. ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವುದಕ್ಕಾಗಿ ಕ್ರಮ ಕೈಗೊಳ್ಳಬೇಕಾಗಿದೆ.

ಭೂಕಂದಾಯ ಕಾಯ್ದೆ ತಿದ್ದುಪಡಿ ನಿಯಮಗಳ ಅಡಿಯಲ್ಲಿ ಫಾರಂ ನಂಬ್ರ 50 ಮತ್ತು 53ನ್ನು ಸಹಸ್ರಾರು ಕೃಷಿಕರು ಸಲ್ಲಿಸಿರುತ್ತಾರೆ. ಎಲ್ಲಾ ಅರ್ಜಿಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡಬೇಕು. ಹತ್ತಾರು ವರ್ಷಗಳಿಂದ ವಿಲೇವಾರಿಯಾಗದೇ ಬಾಕಿ ಉಳಿದಿವೆ. ಗೋಮಾಳ ಜಮೀನುಗಳಲ್ಲಿ ರೈತರ ಅನಧಿಕೃತ ಸಾಗುವಳಿಯನ್ನು ಸಕ್ರಮ ಮಾಡಲು ಹೈಕೋರ್ಟ್ ತಡೆಯಾಜ್ಞೆ ತೆರವು ಆಗಿರುವ ಹಿನ್ನೆಲೆಯಲ್ಲಿ ಯಾವುದೇ ಸಬೂಬು ನೀಡದೇಎಲ್ಲಾ ಬಾಕಿ ಅರ್ಜಿಗಳನ್ನು ಮಂಜೂರು ಮಾಡಬೇಕು. 94ಸಿ ಮತ್ತು 94ಸಿಸಿ ಕಾಲಂ ಅನ್ವಯ ಸಲ್ಲಿಸಿದ ಅರ್ಜಿಗಳನ್ನು ಗೋಮಾಳ, ಡೀಮ್ಡ್ ಫಾರೆಸ್ಟ್, ಅರಣ್ಯ ಭೂಮಿ ಎಂಬ ನೆಪದಲ್ಲಿ ಮಂಜೂರು ಮಾಡಲು ನಿರಾಕರಿಸಲಾಗುತ್ತಿದೆ. ಈ ಬಗ್ಗೆ ಸೂಕ್ತ ಕಾನೂನು ತಿದ್ದುಪಡಿ ಮಾಡಲು ಸರಕಾರದ ಮೇಲೆ ಒತ್ತಡ ತರಬೇಕಾಗಿದೆ.

ನಿವೇಶನ ರಹಿತರಿಗೆ ನಿವೇಶನಕ್ಕಾಗಿ ಈಗಾಗಲೇ ಸಾಕಷ್ಟು ಚಳುವಳಿ ನಡೆಸಿದುದರ ಫಲವಾಗಿ ಬಹುತೇಕ ಗ್ರಾಮ ಪಂಚಾಯತುಗಳು ನಿವೇಶನ ರಹಿತರ ಪಟ್ಟಿಯನ್ನು ಸಿದ್ದಪಡಿಸಿವೆ. ಆದರೆ ಶಾಸಕರ ಅಸಡ್ಡೆಯಿಂದಾಗಿ ನಿವೇಶನಗಳ ಹಂಚಿಕೆ ಆಗಿಲ್ಲ.

ಕೃಷಿ ಮತ್ತು ತೋಟಗಾರಿಕೆ:

ತೆಂಗು, ಬಾಳೆ, ಅಡಿಕೆ, ಕಾಳುಮೆಣಸು ಮೊದಲಾದ ತೋಟಗಾರಿಕ ಬೆಳೆಗಳನ್ನು ಬೆಳೆಯುವ ರೈತರಿಗೆ ಅನುಕೂಲವಾಗುವಂತೆ ಈ ಉತ್ಪನ್ನಗಳನ್ನು ಸಂಸ್ಕರಿಸುವ ಕೈಗಾರಿಕಾ ಘಟಕಗಳನ್ನು ಆರಂಭಿಸಬೇಕು.

ರೈತರಿಗೆ ಭಿತ್ತನೆ ಬೀಜ, ಗೊಬ್ಬರ, ಕೃಷಿ ಉಪಕರಣಗಳ ವಿತರಣೆಯನ್ನು ಕಾಲ ಕಾಲಕ್ಕೆ ವ್ಯವಸ್ಥಿತವಾಗಿ ನೀಡಬೇಕು. ಸೇನಾಪುರ ಗ್ರಾಮದ ಬಂಟ್ವಾಡಿ ಅಣೆಕಟ್ಟೆಗೆ, ಸೌಪರ್ಣಿಕಾ ನದಿಯ ಹಿನ್ನಿರಿಗೆ ಉಪ್ಪು ನೀರು ನುಗ್ಗಿ ನದಿ ಪಾತ್ರದ ಕೃಷಿ, ತೋಟ ಹಾನಿಗೀಡಾಗಿ ಕೃಷಿಕರು ಸಂಕಷ್ಟ ಎದುರಿಸುತ್ತಿದ್ದಾರೆ. ಹಾನಿಗೀಡಾದ ಬೆಳೆಗಳಿಗೆ ಪರಿಹಾರ ನೀಡುವಂತೆ ಸರಕಾರವನ್ನು ಒತ್ತಾಯಿಸಲು ಹೋರಾಟ ರೂಪಿಸಬೇಕು. ಈ ಭಾಗದ ಕೃಷಿಕರ ಸಂಕಷ್ಟಕ್ಕೆ ಸ್ಪಂದಿಸಿ ಗುಂಡೂರು ಕಿಂಡಿ ಅಣೆಕಟ್ಟಿನಿಂದ ನೀರು ಹರಿಸಲು ಕ್ರಮ ಕೈಗೊಳ್ಳಬೇಕು.

ಮೀನುಗಾರಿಕೆ:

ಮೀನುಗಾರರಿಗೆ ದೊರಕುತ್ತಿದ್ದ ಸಬ್ಸಿಡಿ ದರದ ಸೀಮೆಎಣ್ಣೆ ಪೂರೈಕೆ ನಿಂತು ಹೋಗಿದೆ. ಅದನ್ನು ನೀಡಲು ಒತ್ತಾಯಿಸಬೇಕಾಗಿದೆ. ಹೂಳು ತುಂಬಿರುವ ಗಂಗೊಳ್ಳಿ ಮೀನುಗಾರಿಕ ಬಂದರಿನಲ್ಲಿ ಹೂಳೆತ್ತುವುದು, ಜಟ್ಟಿ ವಿಸ್ತರಿಸುವುದು ಮುಂತಾದ ಕ್ರಮಕೈಗೊಳ್ಳಬೇಕಾಗಿದೆ. ಕುಂದಾಪುರ ಗಂಗೊಳ್ಳಿ ಸಂಪರ್ಕ ಸೇತುವೆ ನಿರ್ಮಾಣ ಅತೀ ಅಗತ್ಯವಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡೆ:

ಯುವ ಜನರಿಗೆ ಉದ್ಯೋಗಕ್ಕಾಗಿ ಕೈಗಾರಿಕಾ ತರಬೇತಿ ಸಂಸ್ಥೆ, ಕೈಗಾರಿಕಾ ಪಾಲಿಟೆಕ್ನಿಕ್ ಕಾಲೇಜು ಸ್ಥಾಪನೆಯಾಗಬೇಕಾಗಿದೆ. ಪ್ರವಾಸೋದ್ಯಮ, ಪ್ರಕೃತಿ ಪ್ರವಾಸೋದ್ಯಮ, ಸಾಹಸ ಕ್ರೀಡೆ ಇತ್ಯಾದಿಗಳನ್ನು ಅಭಿವೃದ್ದಿಪಡಿಸಬೇಕು. ಸರಕಾರಿ ಪ್ರಥಮ ದರ್ಜೆ ಕಾಲೇಜನ್ನು ಪಿ.ಜಿ ಸೆಂಟರ್ ಆಗಿ ಮಾಡಬೇಕು. ಕಾಲೇಜು ಆಟದ ಮೈದಾನವನ್ನು ಹೊರಾಂಗಣ ಕ್ರೀಡಾಂಗಣವಾಗಿ ಅಭಿವೃದ್ದಿಗೊಳಿಸಬೇಕು. ಪ್ರವಾಸಿಗರನ್ನು ಆಕರ್ಷಿಸಲು ಮರವಂತೆ ಸಮುದ್ರ ಕಿನಾರೆಯನ್ನು ಅಭಿವೃದ್ದಿಗೊಳಿಸಬೇಕು. ಜನರಿಗೆ ಆದಾಯ ತರಬಲ್ಲ ಹೋಂ ಸ್ಟೇಗಳನ್ನು ನಿರ್ವಹಿಸಲು ತರಬೇತಿ ನೀಡಬೇಕು.

ನೀರಾವರಿ :

ಬೈಂದೂರು ವಿಧಾನಸಭಾ ಕ್ಷೇತ್ರದ ಆಲೂರು ಗ್ರಾಮದ ಗುಂಡೂರು ಅಣೆಕಟ್ಟು ನೀರಾವರಿ ಉದ್ದೇಶಕ್ಕಾಗಿ ನಿರ್ಮಿಸಲಾಗಿದ್ದು, ಆಲೂರು ಭಾಗದಲ್ಲಿ ಸುಮಾರು 22ಕ್ಕೂ ಹೆಚ್ಚು ಕಿಂಡಿ ಅಣೆಕಟ್ಟು ನಿರ್ಮಿಸಿ ನೀರು ನೀಡಲಾಗುತ್ತಿರುವಂತೆಯೇ ನೆರೆಯ ಕುಂಜ್ಞಾಡಿ, ಹೆರಂಜಾಲು ಮತ್ತು ಕಾಲ್ತೋಡು ಮುಂತಾದ ಪ್ರದೇಶಗಳಲ್ಲಿ ಕಿಂಡಿ ಅಣೆಕಟ್ಟು ನಿರ್ಮಿಸಿ ಈ ಎಲ್ಲಾ ಪ್ರದೇಶದ ಸುಮಾರು 4500 ಎಕ್ರೆ ಕೃಷಿ ಭೂಮಿಗೆ ಸಮಪ್ರಮಾಣದಲ್ಲಿ ನೀರು ಹಾಯಿಸುವುದಕ್ಕೆ ಅಭಿವೃದ್ದಿ ಕಾಮಗಾರಿ ಮಾಡಬೇಕಾಗಿದೆ.

ಕರಾವಳಿ ನಿಯಂತ್ರಣ ವಲಯ (ಸಿಆರ್‌ಝೆಡ್):

ಡಾ.ಶೈಲೇಶ್ ನಾಯಕ್ ಸಮಿತಿಯ ವರದಿಯಂತೆ ಸಿಆರ್‌ಝೆಡ್ ವಲಯ 1 ಮತ್ತು ವಲಯ 3ನ್ನು ವಲಯ 2ಕ್ಕೆ ಪರಿವರ್ತಿಸಿ ಆರ್ಥಿಕ ಚಟುವಟಿಕೆಗಳು ಹೆಚ್ಚುವಂತೆ ಮಾಡಬೇಕು. ಇದರಿಂದ 98 ಕಿ.ಮೀ ಉದ್ದದ ಕರಾವಳಿ ಪ್ರದೇಶಕ್ಕೆ ಅನುಕೂಲವಾಗುವುದಲ್ಲದೇ ಬೈಂದೂರು ವಿಧಾನಸಭಾ ಕ್ಷೇತ್ರದ ಕರಾವಳಿ ಭಾಗಗಳಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚುವುದಕ್ಕೆ ಸಹಾಯವಾಗುತ್ತದೆ.

ಜನಪ್ರತಿನಿಧಿಗಳ ನಿರ್ಲಕ್ಷ:

ಬೈಂದೂರು ಕ್ಷೇತ್ರವು ಆರ್ಥಿಕವಾಗಿ ಹಿಂದುಳಿದಿದೆ. ಆದರೆ ಇಲ್ಲಿಂದ ಆಯ್ಕೆಯಾದ ಶಾಸಕರು, ಸಂಸತ್ ಸದಸ್ಯರು ಪ್ರಭಾವಿ ವ್ಯಕ್ತಿಗಳು ಆಗಿರುತ್ತಾರೆ. 4 ಬಾರಿ ಶಾಸಕರಾಗಿರುವ ಗೋಪಾಲ ಪೂಜಾರಿಯವರು ಕೆ.ಎಸ್.ಆರ್.ಟಿ.ಸಿ. ನಿಗಮದ ಅಧ್ಯಕ್ಷರು. ಮಂತ್ರಿಗಿರಿಗೆ ಸಮಾನ ಸ್ಥಾನದಲ್ಲಿರುವವರು. ಆದರೂ ಕ್ಷೇತ್ರ ಅಭಿವೃದ್ದಿಗೊಂಡಿಲ್ಲ.

ಬೈಂದೂರು ವಿಧಾನ ಸಭಾ ಕ್ಷೇತ್ರವು ಶಿವಮೊಗ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಇಲ್ಲಿನ ಸಂಸತ್ ಸದಸ್ಯರು ಯಡಿಯೂರಪ್ಪನವರು, ಮುಖ್ಯಮಂತ್ರಿ ಯಾಗಬೇಕೆಂದು ಕನಸು ಕಾಣುತ್ತಿರುವವರು. ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಜೈಲಿಗೆ ಹೋಗಿ ಬಂದವರು. ಇವರು ಜನರ ಸಮಸ್ಯೆಗಳಿಗೆ ಗಮನ ನೀಡುವುದಿರಲಿ, ಕ್ಷೇತ್ರಕ್ಕೆ ಬರುವುದೇ ವರುಷಕ್ಕೊಮ್ಮೆ, ಏನಾದರೂ ಯಾತ್ರೆ, ಜಾತ್ರೆಗಳಿದ್ದರೆ ಮಾತ್ರ.

ಈ ಜನಪ್ರತಿನಿಧಿಗಳ ಸೋಗಲಾಡಿತನವನ್ನು ಜನರಿಗೆ ತಿಳಿಸುತ್ತ, ಇವರು ಪ್ರತಿನಿಧಿಸುತ್ತಿರುವ ಕಾಂಗ್ರೆಸ್, ಬಿಜೆಪಿಯ ಜನ ವಿರೋಧಿ ನೀತಿಗಳನ್ನು ಬಹಿರಂಗಗೊಳಿಸಬೇಕಾಗಿದೆ.

●

ನಿರ್ಲಕ್ಷಕ್ಕೊಳಗಾದ ಮೂಡಬಿದ್ರಿ ಕ್ಷೇತ್ರ

ಪುಟ 9 ರಿಂದ

ಧಾರಣೆ ಹೆಚ್ಚಳಕ್ಕಾಗಿ ಬೇಡಿಕೆ ಇಡುತ್ತಲೂ ಇದ್ದಾರೆ.

ಮೂಡಬಿದ್ರಿ ಇವತ್ತು ರಾಜ್ಯದಲ್ಲಿ ಗುರುತಿಸಲ್ಪಡುವುದು ಶೈಕ್ಷಣಿಕ ಸಂಸ್ಥೆಗಳಿಗಾಗಿ ಹಾಗೂ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಗಾಗಿ. ಅಲ್ಲಿ ಡಾ.ಮೋಹನ ಆಳ್ವಾರವರು ಪ್ರಾಥಮಿಕ ಶಾಲೆಯಿಂದ ಆರಂಭಿಸಿ ಪದವಿವರೆಗಿನ ವಿವಿಧ ಬಗೆಯ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿದ್ದು, ಒಂದೇ ಆವರಣದಲ್ಲಿ 30,000ಕ್ಕೂ ಮಿಕ್ಕಿ ಹೊರರಾಜ್ಯಗಳ ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನುಡಿಸಿರಿ, ಆಳ್ವಾಸ್ ವಿರಾಸತ್ ಇತ್ಯಾದಿ ವಾರ್ಷಿಕ ಕಾರ್ಯಕ್ರಮಗಳಿಗೆ ರಾಷ್ಟ್ರೀಯ ಉತ್ಸವದ ಸ್ವರೂಪವನ್ನು ಅಲ್ಲಿ ನೀಡಲಾಗಿದ್ದು, ಇದರಿಂದ ಅಲ್ಲಿನ ಶಿಕ್ಷಣ ಸಂಸ್ಥೆಯಲ್ಲಿರುವ ನ್ಯೂನತೆಗಳನ್ನು ಯಾರೂ ಬಿಚ್ಚಿ ಹೇಳುತ್ತಿಲ್ಲ. ಅಲ್ಲಿಂದ ಆರೇಳು ಕಿಲೋ ಮೀಟರ್‌ಗಳ ವ್ಯಾಪ್ತಿಯಲ್ಲಿ ಮಿಜಾರಿನಲ್ಲಿ ಆಳ್ವಾಸ್ ಮತ್ತು ಡಾ.ಎಂ.ವಿ.ಚೌಟ ಅವರ 2 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಮತ್ತು ತೋಡಾರಿನಲ್ಲಿ ಏನೆಪೋಯ ಗುಂಪಿನ ಇನ್ನೊಂದು ಎಂಜಿನಿಯರಿಂಗ್ ಕಾಲೇಜು– ಈ ಎಲ್ಲಾ ಕಾಲೇಜುಗಳೂ ಮೂಡಬಿದ್ರಿಯ ಸಮೀಪದಲ್ಲೇ ಇವೆ. ಮೂಡಬಿದರೆಯ ಆಸುಪಾಸು ಬಿಟ್ಟರೆ ಇಡೀ ಅಸೆಂಬ್ಲಿ ಕ್ಷೇತ್ರದಲ್ಲಿ ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳೇ ಇರುವುದಿಲ್ಲ.

ಪಟ್ಟಣ ಪಂಚಾಯತ್‌ಗಳಾಗಿ ಅಭಿವೃದ್ಧಿ ಹೊಂದಿರುವ ಬಜ್ಪೆ, ಕಿನ್ನಿಗೋಳಿ, ಬೆಳ್ವಾಯಿ, ಮುಲ್ಕಿ–ಇಲ್ಲಿ ಸಣ್ಣ ಪಟ್ಟಣಗಳಲ್ಲಿ ಇರಬಹುದಾದ ಅಂಗಡಿ ಮುಂಗಟ್ಟುಗಳು, ವರ್ಕ್‌ಶಾಪುಗಳೂ, ಸಣ್ಣ ಉದ್ಯಮಗಳು ಇವೆ. ಎಲ್ಲ ಗ್ರಾಮಗಳಲ್ಲಿಯೂ ಕಟ್ಟಡ ಕಾರ್ಮಿಕರಾಗಿ ದುಡಿಯುವ ಗಂಡಸರು ಸಾಕಷ್ಟಿದ್ದಾರೆ. ಹೆಂಗಸರು ಕ್ಷೇತ್ರದ್ರಾದ್ಯಂತ ಬೀಡಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಮೂಡಬಿದ್ರಿ ನಗರದ ಸಮೀಪವೆ ಬೀಡಿ ಕಾರ್ಮಿಕರು ಸಿಐಟಿಯು ಅಡಿ ಸಂಘ ರಚಿಸಿಕೊಂಡು ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಇತ್ತೀಚೆಗೆ ಸರಕಾರದ ಕೋಟ್ಪಾ ಕಾಯಿದೆ ಜಾರಿಯಾಗುತ್ತಿದ್ದಂತೆ, ಬೀಡಿ ಉದ್ಯಮ ನಶಿಸುವ ಹಂತದಲ್ಲಿದೆ. ಮೂಡಬಿದ್ರಿ ಸುತ್ತಲಿನ ಊರಿನ ಮಹಿಳೆಯರು, ಪುರುಷರು ಅಲ್ಲಿನ ಕಾಲೇಜು, ಹಾಸ್ಟೇಲುಗಳಲ್ಲಿ ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ. ಸರಕಾರಿ ಭೂಮಿಗಳಲ್ಲಿ ಕೃಷಿ ಮಾಡಿ ಅಭಿವೃದ್ಧಿ ಪಡಿಸಿದ 5000ಕ್ಕೂ ಮೀರಿದ ಕೃಷಿಕರು ಸಕ್ರಮೀಕರಣಕ್ಕಾಗಿ ಕಾಯುತ್ತಿದ್ದಾರೆ. ಸ್ವಂತ ಮನೆ ನಿವೇಶನವೂ ಇಲ್ಲದ ನಾಗರಿಕರ ಸಂಖ್ಯೆ ಮಿತಿ ಮೀರಿದ್ದು, ಕರ್ನಾಟಕ ಪ್ರಾಂತ ರೈತ ಸಂಘದ ಮೂಲಕ ನಿವೇಶನಕ್ಕಾಗಿ, ಹಕ್ಕುಪತ್ರಕ್ಕಾಗಿ ಪದೇ ಪದೇ ಹೋರಾಟ ನಡೆಸಿದ್ದಾರೆ. ಇತ್ತೀಚೆಗಷ್ಟೇ ಕೆಲವರಿಗೆ 94ಸಿ ಅಡಿ ನಿವೇಶನ ಮಂಜೂರಾಗಿರುತ್ತದೆ.

ಜಾತಿವಾರು ಜನಸಂಖ್ಯೆಯಲ್ಲಿ ಬಿಲ್ಲವರು, ಬಳಿಕ ಬಂಟರು, ಕ್ರೈಸ್ತರು, ಮುಸ್ಲಿಮರು, ದಲಿತರು ಇದ್ದಾರೆ. ತೀರಾ ಅಲ್ಪಸಂಖ್ಯೆಯಲ್ಲಿರುವ ಜೈನರು ಮತ್ತು ಕೆಲ ಬಂಟರು ಹಳೆಯ ಭೂಮಾಲಕ ಶೈಲಿಯ ಜೀವನ ನಡೆಸುತ್ತಿದ್ದಾರೆ. ಅಂಥ ಕುಟುಂಬಗಳ ಕೆಲವರು ಪಟ್ಟಣಗಳಲ್ಲಿ ಡಾಕ್ಟರಾಗಿಯೋ, ವಕೀಲರಾಗಿಯೋ, ಎಂಜಿನಿಯರಾಗಿಯೋ ಉತ್ತಮ ಸ್ಥಿತಿಯಲ್ಲಿದ್ದಾರೆ. ಪ.ಜಾತಿಯವರಲ್ಲದೆ ಮರಾಠಿ ನಾಯ್ಕ್ ಎಂಬ ಪ.ವರ್ಗದವರಿದ್ದಾರೆ. ಕುಡುಬಿ ಸಮುದಾಯ ನಿಜವಾಗಿ ಆದಿವಾಸಿಗಳ ಹಾಗೇ ಜೀವನ ನಡೆಸುತ್ತಿದ್ದು, ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಇವರ ಹೆಸರಿಲ್ಲ. ಪೆರ್ಮುದೆ ಎಂಬ ಗ್ರಾಮಕ್ಕೆ ಎಂಆರ್‌ಪಿಎಲ್ ವಿಸ್ತರಣೆಗೊಳ್ಳುವ ಹಂತದಲ್ಲಿದ್ದು, ಅಲ್ಲಿನ ಕುಡುಬಿ ರೈತರು ಅವರ ಕೃಷಿ ಬಿಟ್ಟು ಊರು ಬಿಡುವಂತೆ ಮಾಡಲಾಗಿದೆ. ಇಡೀ ಕ್ಷೇತ್ರಾದ್ಯಂತ ಹತ್ತಕ್ಕೂ ಮೀರಿ ಗೋಡಂಬಿ ಕಾರ್ಖಾನೆಗಳಿದ್ದು, ಅವುಗಳಲ್ಲಿ ತಲಾ ಕಡಿಮೆ ಎಂದರೂ 300–400 ಮಂದಿ ಮಹಿಳೆಯರು ಕೆಲಸ ಮಾಡುತ್ತಾರೆ. ಆದರೆ ಮಂಗಳೂರು ಹಾಗೂ ಕಾರ್ಕಳದಂತೆ ಯಾವ ಕಾರ್ಮಿಕ ಸಂಘಟನೆಯ ವ್ಯಾಪ್ತಿಯಲ್ಲೂ ತರಲಾಗಿಲ್ಲ. ಬಹುಶ: ದ.ಕ. ಜಿಲ್ಲೆಯಲ್ಲಿ ಇತರ ಅಸೆಂಬ್ಲಿ ಕ್ಷೇತ್ರಗಳೊಂದಿಗೆ ಹೋಲಿಸಿದರೆ ಕಡಿಮೆ ಅಭಿವೃದ್ಧಿ ಹೊಂದಿದ ಕ್ಷೇತ್ರ ಮೂಡಬಿದ್ರಿ. ಉಡುಪಿ–ಮೂಡಬಿದ್ರಿಯಾಗಿ ಧರ್ಮಸ್ಥಳಕ್ಕೆ ಸರಕಾರಿ ಬಸ್ಸುಗಳು ಸಾಕಷ್ಟು ಓಡಾಡುತ್ತವೆಯಾದರೂ ಕೆಎಸ್‌ಆರ್‌ಟಿಸಿಯದ್ದೇ ಒಂದು ಬಸ್ಸು ನಿಲ್ದಾಣವಿಲ್ಲ. ಮಂಗಳೂರಿನಿಂದ ಮೂಡಬಿದ್ರಿಗಾಗಿ ಕಾರ್ಕಳಕ್ಕೆ ಸರಕಾರಿ ಬಸ್ಸುಗಳಿಗಾಗಿ ಜನ ಪದೇ ಪದೇ ಒತ್ತಾಯಿಸುತ್ತಿದ್ದರೂ, ಇನ್ನೂ ಮೂಡಬಿದ್ರಿಯಲ್ಲಿ ಖಾಸಗಿ ಬಸ್ಸುಗಳ ಅರ್ಭಟವೇ ಇದೆ. ಖಾಸಗಿ ಪದವಿ ಕಾಲೇಜು, ಎಂಜಿನಿಯರಿಂಗ್ ಕಾಲೇಜು ಇಲ್ಲ. ಸರಕಾರಿ ಪಾಲಿಟೆಕ್ನಿಕ್ ಕೂಡಾ ಇಲ್ಲ. ಮೂಡಬಿದ್ರಿಯಲ್ಲಿ ರೂ.15 ಕೋಟಿ ವೆಚ್ಚದಲ್ಲಿ ಬೃಹತ್ ಮಾರುಕಟ್ಟೆಯೊಂದು ನಿರ್ಮಾಣವಾಗಿದ್ದು, ಅದರ ನಿರ್ಮಾಣದ ಹೊಣೆಗಾರಿಕೆಯನ್ನು ಖಾಸಗಿಯವರಿಗೆ ನೀಡಲಾಗಿತ್ತು. ➚

ಹಳಿಯಾಳ ವಿಧಾನ ಸಭಾ ಕ್ಷೇತ್ರ– ನಂ. 76..............

ಪುಟ 8 ರಿಂದ

ಉಚಿತವಾಗಿ ಅಥವಾ ರಿಯಾಯಿತಿಯಲ್ಲಿ ನೀಡಿದ್ದಾರೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡವರಿಗೆ ಉಚಿತವಾಗಿ ಮನೆಗಳನ್ನು ಕೊಡದೇ "ದುಡ್ಡಿನ ಮನೆಗಳನ್ನು" ಕೊಡುವ ಭರವಸೆ ನೀಡಲಾಗಿದೆ. ಈ ಯೋಜನೆಗಳಲ್ಲಿ ಸುಮಾರು 3500 ಜನ ಅರ್ಜಿ ಹಾಕಲು ನಮ್ಮ ಪಕ್ಷ ಶ್ರಮಿಸಿತ್ತು. ಬಡವರ ವಂತಿಗೆಯನ್ನು ಕಡಿಮೆ ಮಾಡಲು ಶ್ರಮಿಸಿದ್ದರ ಭಾಗವಾಗಿ ತಲಾ 50 ಸಾವಿರ ರೂ. ಕಡಿಮೆ ಆಗಿರುವ ಮಾಹಿತಿ ಇದೆ.

ಕೈಗಾರಿಕಾ ಸಚಿವರ ಊರಿನಲ್ಲಿ ಖಾಯಂ ಕಾರ್ಮಿಕ ಅಧಿಕಾರಿಗಳಿಲ್ಲ:

ಕೈಗಾರಿಕಾ ಸ್ಥಾಪನೆಯ ಪ್ರಸ್ತಾಪವೂ ಇಲ್ಲ:– ಹೀಗೆಂದರೆ ನಿಮಗೆ ಆಶ್ಚರ್ಯವಾಗಬಹುದು. ಕೈಗಾರಿಕಾ ನಗರದಲ್ಲಿ ಕಾರ್ಮಿಕರ ಬದುಕು ಆರೋಗ್ಯ ಸೌಲಭ್ಯಗಳ ಬಗ್ಗೆ ಸರ್ಕಾರದ ಗಮನ ಏನೇನೂ ಇಲ್ಲ. ಅಲ್ಲದೇ ಖಾಯಂ ಕಾರ್ಮಿಕ ಅಧಿಕಾರಿಗಳಿಲ್ಲದೇ ದಿನನಿತ್ಯ ಕಟ್ಟಡ ಮತ್ತು ಇತರ ಕಾರ್ಮಿಕರ ಕಛೇರಿ ಅಲೆದಾಟ ಹೆಚ್ಚಿದೆ, ಸರ್ಕಾರದ ಸೌಲಭ್ಯಕ್ಕಾಗಿ ವರ್ಷಾನುಗಟ್ಟಲೆ ಪರದಾಡುವಂತಾಗಿದೆ.

ದಾಂಡೇಲಿ ತನಕ ಬರಬೇಕಾದ ರೈಲು ಕೇವಲ ಬೋರ್ಡು ಮತ್ತು ಹಳಿಗಳಿಗೆ ಸೀಮಿತವಾಗಿದೆ. ಪ್ರವಾಸೋದ್ಯಮದ ಕೇಂದ್ರವನ್ನಾಗಿ ಮಾಡುತ್ತೇವೆಂದು ಹೇಳಿ ಯಾವುದೇ ಉದ್ಯೋಗಾವಕಾಶ ಸೃಷ್ಟಿಸಲು ಮುಂದಾಗಿಲ್ಲ. ಜನವಸತಿ ಪ್ರದೇಶವನ್ನೇ ಕೈಗಾರಿಕಾ ಪ್ರದೇಶ ಹಾಗೂ ಶೈಕ್ಷಣಿಕ ಚಟುವಟಿಕೆಗೆ ಬಿಟ್ಟುಕೊಡಲಾಗುತ್ತಿದೆ. ಇದರಿಂದ ಜನರ ಸಂಕಷ್ಟ ಹೆಚ್ಚಿದೆ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಏಕೆಂದರೆ ಈಗಾಗಲೇ ಹಾಳುಬಿದ್ದ ಎರಡು ಕೈಗಾರಿಕೆಗಳಾದ ಐಪಿಎಂ ಮತ್ತು ಡಿಎಫ್.ಎ ಗೆ ಕೊಟ್ಟ ಜಾಗ ಸರ್ಕಾರ ವಶಪಡಿಸಿಕೊಂಡು ಬಡಜನತೆಯ ವಸತಿ ಸಂಕೀರ್ಣ ಸ್ಥಾಪನೆಗೆ ಹಾಗೂ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಬಳಸಬೇಕೆಂದು ಸಿಪಿಐ(ಎಂ) ಪಕ್ಷ ಮತ್ತು ಯುವಜನ ಸಂಘಟನೆ ಹಾಗೂ ಮಹಿಳಾ ಸಂಘಟನೆಗಳು ಅನಿರ್ದಿಷ್ಟಾವಧಿ ಹೋರಾಟ ಮಾಡುತ್ತಾ ಪತ್ರ ಚಳುವಳಿ ಮಾಡುತ್ತಾ ಒತ್ತಾಯಿಸುತ್ತ ಸರ್ಕಾರದ ಗಮನಸೆಳೆಯುತ್ತಾ ಬಂದಿವೆ. ಆದರೆ ಈ ಹಳೆಯ ಕೈಗಾರಿಕಾ ಪ್ರದೇಶದಲ್ಲಿ ಕಾನೂನು ಬಾಹಿರ ಜಂಗಲ್ ಲಾಜ್‌ನಂಥ ಹೋಂ ಸ್ಟೇ ಗಳಿಗೆ ಅವಕಾಶ ಕೊಟ್ಟಿರುವುದು ಖಂಡನೀಯವಾಗಿದೆ.

ಅಲ್ಲದೇ ಈಗಿರುವ ಕಾಗದ ಕಾರ್ಖಾನೆಯಿಂದ ಮಲಿನ ನೀರು ಮತ್ತು ಕೆಟ್ಟ ಹೊಗೆ ವಾತಾವರಣ ಸೇರುತ್ತಿದ್ದು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ ಎಂದು ಕೆಲವು ಆರೋಗ್ಯ ಸಮೀಕ್ಷೆಗಳು ಹೇಳಿವೆ. ಕಾರ್ಮಿಕರು ಸೇವಿಸುವ ನೀರಿನಲ್ಲಿ ಎಂ.ಎನ್.ಪಿ ಕೌಂಟ್ 15–20 ಅಂಶ ಇದೆ ಎಂದು ಹೇಳಲಾಗುತ್ತಿದೆ.

ಇತ್ತ ಜೋಯಿಡಾ ತಾಲೂಕು:

ತಾನು ಮಾನವ ವಸತಿ ನಕಾಶೆಯಲ್ಲಿಯೇ ಇರಬೇಕೆಂದು ಬಯಸಿದರೂ ಅರಣ್ಯರೋದನವಾಗುತ್ತಿದೆ. ಅತ್ಯಂತ ಹಿಂದುಳಿದ ಬಹುದೊಡ್ಡ ತಾಲೂಕು. ಜೋಯಿಡಾ ತಾಲುಕು ಕೇಂದ್ರ ಕೂಡ ಒಂದು ಗ್ರಾಮ ಪಂಚಾಯ್ತಿಯೇ ಆಗಿದೆ. ಕಾಳಿ ಜಲ ವಿದ್ಯುತ್ ಯೋಜನೆಯ ಪರಿಣಾಮವಾಗಿ ಹಾಗೂ ನಿಸರ್ಗ ಸಹಜ ಗುಡ್ಡಗಾಡು ಪ್ರದೇಶದಲ್ಲಿ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಸೇತುವೆ ನಿರ್ಮಿಸದೇ ಇರುವುದರಿಂದ ಅನೇಕ ಹಳ್ಳಿಗಳು ನಾಗರಿಕ ಸೌಲಭ್ಯ ಕಳಕೊಂಡು ದ್ವೀಪದಂತಾಗಿವೆ. ಇಡೀ ತಾಲೂಕಿನ ವಿಸ್ತೀರ್ಣ 1910.44 ಚ.ಕಿ.ಮಿ, ಜನಸಂಖ್ಯೆಯು ಕೇವಲ 52 ಸಾವಿರ ಆಗಿದೆ. ಅಂದರೆ ಕಿ.ಮಿ ಗೆ ಕೇವಲ 27 ಜನಸಾಂದ್ರತೆ!! ಆದರೆ ಜಿಲ್ಲೆಯ ವಿಸ್ತೀರ್ಣದ 19% ಭೂಭಾಗ ಮಾತ್ರ ಜೋಯಿಡಾದ್ದೇ. ಹಾಗಾಗಿಯೇ 87% ಅರಣ್ಯ ಪ್ರದೇಶ ಹೊಂದಿದ ತಾಲೂಕು ಅಲ್ಲದೇ ದೇಶದ 30 ಹುಲಿ ಯೋಜನೆಗಳ ಪೈಕಿ ಇಲ್ಲಿಯ ಹುಲಿ ಯೋಜನೆಯು ಮಹತ್ವದ ಸ್ಥಾನದಲ್ಲಿದೆ. ಅಂತರ್‌ರಾಷ್ಟ್ರೀಯ ಪರಿಸರ ಎನ್.ಜಿ.ಓ. ಲಾಬಿಯಿಂದಾಗಿ ಇಲ್ಲಿ ಅರಣ್ಯ ಪರಿಸರ ಸಂಬಂಧಿ ಹಲವಾರು ಕಾಯ್ದೆಗಳಿವೆ.

ಎಪ್ಪತ್ತರ ದಶಕದಲ್ಲಿ ಬಂದ ಕಾಳಿ ಜಲ ವಿದ್ಯುತ್ ಯೋಜನೆಯಿಂದ ನಿರಾಶ್ರಿತರಾದ ಮುಗ್ಧ ಬಡ ಅರಣ್ಯವಾಸಿ ಮತ್ತು ಕುಣಬಿ ಜನರ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಇಂತಿರುವಾಗ ಅರಣ್ಯ ಸಂಬಂಧಿ ಕಾಯ್ದೆಗಳು, ಡಾ. ಕಸ್ತೂರಿ ರಂಗನ್ ವರಿದಿ ಜಾರಿ, ಪರಿಸರ ಸೂಕ್ಷ್ಮ ಪ್ರದೇಶ ಹಾಗೂ ವನ್ಯಜೀವಿ ಕಾಯ್ದೆ, ಹುಲಿ ಯೋಜನೆಗಳಿಂದ ನಡುಗುತ್ತಿರುವ ಜೋಯಿಡಾದ ಜನತೆಯನ್ನು ಮೂಲಸೌಕರ್ಯ ಕೊರತೆಯೂ ಕಾಡುತ್ತಿದೆ. ಬದುಕನ್ನೇ ಕಳಕೊಳ್ಳುವಂತಹ ಜೀವ ವಿರೋಧಿ ಕಾಯ್ದೆಗಳು ಮೈಮೇಲೆರಗಿವೆ. ಈ ಜೋಯಿಡಾದಂಥ ಉತ್ತಮವಾದ ಪ್ರದೇಶದಿಂದ ಜನತೆಯನ್ನು ಹೊರಹಾಕಿದರೆ ಅತ್ಯಲ್ಪ ಪರಿಹಾರ ಧನ ಪಡೆದು ಬೇರೆಲ್ಲಿ ಹೋಗಿ ಇದಕ್ಕೆ ಸಮನಾದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ? ನೀರಿನಿಂದ ತೆಗೆದೆಸೆದ ಮೀನಿನಂತೆ ಈ ಜನರ ಪರಿಸ್ಥಿತಿ. ಆದರೆ ಇಲ್ಲಿಯ ಕಾಡು ಕಡಿದು ಬರಿದು ಮಾಡುವ ಕೆಲಸವನ್ನು ಇಲಾಖೆಯೇ ಮುಂದೆ ನಿಂತು ಮಾಡಿದೆ ಎಂದರೆ ತಪ್ಪಿಲ್ಲ. ದಾಂಡೇಲಿ ಹಾಗೂ ವಿವಿಧೆಡೆಯ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಬಿದಿರನ್ನು ಮರಮಟ್ಟುಗಳನ್ನು ಇಲ್ಲಿಂದಲೇ ಪೂರೈಸಲಾಗಿದೆ. ಹಾಗಾಗಿ ಸೂರ್ಯ ಕಿರಣ ತಾಕದ ಜೋಯಿಡಾದ ಕಾಡು ಬರಿದಾಗುತ್ತ ಸಾಗಿದೆ. ಆದರೆ ಅದರ ಬಲಿಪಶುಗಳು ಮಾತ್ರ ಈ ಭಾಗದ ರೈತರು, ಜನಸಾಮಾನ್ಯರು.

ಹಾಗಾಗಿ ಮಾನವ ವಸತಿ ನಕಾಶೆಯಲ್ಲಿ ಜೋಯಿಡಾ ಉಳಿಸಿಕೊಂಡು ಮೂಲಸೌಕರ್ಯ ಕಲ್ಪಿಸಲು ಒತ್ತಾಯಿಸಿ ಸಿಪಿಐ(ಎಂ) ಪಕ್ಷ ಮತ್ತು ಪ್ರಾಂತ ರೈತ ಸಂಘ ಹಾಗೂ ಸಾಮೂಹಿಕ ಸಂಘಟನೆಗಳು ಪ್ರಯತ್ನಿಸುತ್ತಿವೆ. ಕುಣಬಿ ಹಾಗೂ ಗೌಳಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ನಿರಂತರ ಹೋರಾಡುತ್ತಾ ಜಾಗೃತಿ ಮೂಡಿಸುತ್ತಾ ದೆಹಲಿ ತನಕ ಅಹವಾಲು ಸಲ್ಲಿಸಿದ್ದು ಮೊಟ್ಟಮೊದಲು ಸಿಪಿಐ(ಎಂ) ಪಕ್ಷ. ನಂತರ ಈಗ ಬೇರೆ ಕೆಲವು ಪಕ್ಷಗಳು ದೆಹಲಿಗೆ ನಿಯೋಗ ತೆಗೆದುಕೊಂಡು ಹೋಗುತ್ತಿರುವುದು ವರದಿಯಾಗುತ್ತಿದೆ.

ಕೃಷಿ ಉತ್ಪನ್ನ ಹಾಗೂ ಕಾಡು ಉಪಉತ್ಪನ್ನ ನಂಬಿ ಬದುಕುವ ಜನ ಇಲ್ಲಿದ್ದಾರೆ. ಆದರೆ ಈ ಹಕ್ಕಿಗೆ ಈಗ ಕಡಿವಾಣ ಹಾಕಲಾಗಿದೆ. ಜನ ಅರಣ್ಯ ಉತ್ಪನ್ನ ಬಳಕೆ ಹಕ್ಕು ಕಳಕೊಂಡಿದ್ದು ಆದಿವಾಸಿಗಳ ಬದುಕು ಕಷ್ಟಕರವಾಗಿದೆ.

ಜೋಯಿಡಾ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ (ಮೂಲಸೌಕರ್ಯ, ನ್ಯಾಯಬೆಲೆ ಅಂಗಡಿ, ರಸ್ತೆ, ಸೇತುವೆ, ವಿದ್ಯುತ್, ಸನಿವಾಸ ಶಿಕ್ಷಣ, ಉತ್ತಮ ಶಿಕ್ಷಣ, ಭೂಮಿ ಹಕ್ಕು, ಉದ್ಯೋಗ, ವಸತಿ ಸಹಿತ ಸರ್ಕಾರಿ ಸಮುಚ್ಚಯ, ಗ್ರಾಮೀಣ ಸೌಲಭ್ಯಗಳು, ನ್ಯಾಯಾಲಯ, ಅರಣ್ಯ ಭೂಮಿ ಅತಿಕ್ರಮಣ ಸಕ್ರಮ ಮತ್ತು ಕುಂಬ್ರಿ ಜಮೀನಿನ ಹಕ್ಕು, ಇತ್ಯಾದಿ) ವಿಶೇಷ ಪ್ಯಾಕೇಜ್ ನೀಡಲು ಆಗ್ರಹಿಸಿ ಕಾರವಾರ ತನಕ ಉಕ ಜಿಲ್ಲಾ ಪಂಚಾಯತಿಗೆ ಪಾದಯಾತ್ರೆ ನಡೆಸಿದ್ದು ಐತಿಹಾಸಿಕ. ಆನಂತರ ಹಲವಾರು ಬಾರಿ ವಿವಿಧ ಹಳ್ಳಿಗಳಿಂದ ಪಾದಯಾತ್ರೆಗಳು, ರಸ್ತೆತಡೆ, ಧರಣಿ ಇತ್ಯಾದಿ ನಡೆಸಲಾಗಿದೆ. ಅದೆಲ್ಲದರ ಭಾಗವಾಗಿ ಹಲವಾರು ಹಳ್ಳಿಗಳಿಗೆ ರಸ್ತೆ, ಸೇತುವೆ, ವಿದ್ಯುತ್, ಶಿಕ್ಷಣಕ್ಕೆ ಕಾಲೇಜು, ಶಾಲೆ ಹಾಗೂ ಅಗತ್ಯ ಶಿಕ್ಷಕರನ್ನು, ಆಸ್ಪತ್ರೆಗಳನ್ನು ಹೊಂದಲು ಸಾಧ್ಯವಾಗಿದೆ. ಆದರೆ ಇತ್ತೀಚೆಗೆ ಕೆಲವು ಥಳಥಳಿಸುವ ತ್ರಿಡಿ ಜಾಹಿರಾತು ವ್ಯವಸ್ಥೆಯ ಬಸ್ ನಿಲ್ದಾಣಗಳನ್ನು ಕಟ್ಟಲಾಗಿದೆ, ಆದರೆ ಈ ಊರುಗಳಲ್ಲಿ ಬಸ್ ಸೌಲಭ್ಯವೇ ಇಲ್ಲ.!! ಕಾಮಗಾರಿ ಯಾರ ಲಾಭಕ್ಕೆ ಮಾಡಿದ್ದು ಗೊತ್ತಾಗುತ್ತದೆ. ಪ್ರಮುಖ ಊರುಗಳಲ್ಲಿ ಸರ್ಕಾರಿ ಶೌಚಾಲಯಗಳಿಲ್ಲ.

ಜೋಯಿಡಾದ ಕಾಳಿ ನದಿನೀರನ್ನು ಕೊಂಡೊಯ್ದು ಹಳಿಯಾಳದ ಕೆರೆಗಳನ್ನು ತುಂಬುವ, ನೀರಾವರಿಗೆ ಮತ್ತು ಕುಡಿಯುವ ನೀರಿಗೆ ಬಳಸುವ ಕೋಟ್ಯಾಂತರ ರೂಪಾಯಿ ಯೋಜನೆ ತಂದರು. ಆದರೆ ಅದಿನ್ನೂ ಸಮರ್ಪಕವಾಗಿ ಜಾರಿಯಾಗಿಲ್ಲ. ಧಾರವಾಡದ ಅಳ್ನಾವರಕ್ಕೆ ನೀರನ್ನು ಕೊಡುವ ಬಗ್ಗೆಯೂ ಚಿಂತನೆ ನಡೆಯುತ್ತಿದೆಯಂತೆ. ಆದರೆ ಬೇರೆ ಊರಿಗೆ ವಿದ್ಯುತ್ ಕೊಟ್ಟ ಜೋಯಿಡಾ ಕತ್ತಲಲ್ಲಿದ್ದಂತೆ ಬೇರೆ ತಾಲೂಕಿಗೆ ಬೇರೆ ಜಿಲ್ಲೆಗೆ ಕಾಳಿ ನದಿಯ ನೀರು ಕೊಡುವ ಜೋಯಿಡಾದ ವಿವಿಧ ಜನವಸತಿ ಪ್ರದೇಶಕ್ಕೆ, ನಿರಾಶ್ರಿತರ ಕೇಂದ್ರವಾದ ರಾಮನಗರದ ಸುತ್ತಮುತ್ತಲ ಊರುಗಳಿಗೂ ಕುಡಿಯಲು ನೀರಿಲ್ಲದೇ ಹಾಹಾಕಾರ ಎದ್ದಿದೆ. ಇದಕ್ಕೆ ಪರಿಹಾರ ನೀಡದ ರಾಜಕಾರಣ ಜೋಯಿಡಾದ ರೈತಾಪಿ ಜನತೆಗೆ ಕೃಷಿಗೆ ಮತ್ತು ಕುಡಿಯಲು ನೀರು ಪೂರೈಸದೇ ಬರಗಾಲಕ್ಕೆ ನೂಕಿದಲ್ಲಿ ಆಶ್ಚರ್ಯವಿಲ್ಲ. ಅಲ್ಲದೇ ಈ ಕ್ಷೇತ್ರದಲ್ಲಿ ಕುಣಬಿ ಮತ್ತು ಗೌಳಿ ಸಮುದಾಯ ಇನ್ನೂ ಬುಡಕಟ್ಟು ಮಾನ್ಯತೆ ಪಡೆಯದಿರುವುದು ಈ ಸಮುದಾಯದಲ್ಲಿ ನೋವು ತಂದಿದೆ. ಹೀಗೆ ಅನಭಿವೃದ್ಧಿಯ ವಿವಿಧ ಕಾರಣಕ್ಕಾಗಿ ತಮ್ಮನ್ನು ಗೋವಾಕ್ಕೆ ಸೇರಿಸಿ ಎನ್ನುವ ಕೂಗು ಆಗಾಗ ಕೇಳಿಬರುತ್ತಿದೆ.

ಒಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರದ್ದೇ ಕ್ಷೇತ್ರದಲ್ಲಿ ಸಮಸ್ಯೆಗಳಂತೂ ಬಹಳ ಇದೆ. ಮೊದಲ ಭಾರಿಗೆ ಜೋಯಿಡಾ ತಾಲೂಕು ಹಳಿಯಾಳ ಕ್ಕೆ ಸೇರಿದಾಗ ಜನತಾ ದಳದ ಸುನಿಲ್ ಹೆಗಡೆಯವರ ಮೇಲೆ ವಿಶ್ವಾಸವಿಟ್ಟು ಗೆಲ್ಲಿಸಿದರು. ಕಾಂಗ್ರೆಸ್ ನ ಅಭ್ಯರ್ಥಿ ದೇಶಪಾಂಡೆಯವರನ್ನು ಸೋಲಿಸಿದರು. ಎರಡನೇ ಬಾರಿ ಸ್ಪರ್ಧಿಸಿದ ಸುನಿಲ್ ಹೆಗಡೆ ಸೋತ ನಂತರ ಬಿಜೆಪಿ ಪಾಳೆಯ ಸೇರಿಕೊಂಡರು. ಈಗ ಜೆಡಿಎಸ್ ಗೆ ಬೆಂಗಳೂರಿನ ಉದ್ಯಮಿಯಾಗಿರುವ ಹಳಿಯಾಳ ಮೂಲದವರಾದ ರಮೇಶ್ ಅಭ್ಯರ್ಥಿ ಎಂದು ಹೇಳಲಾಗುತ್ತಿದೆ. ಇವರೆಲ್ಲರೂ ಕ್ಷೇತ್ರದ ಜನತೆಯನ್ನು ಸಂದರ್ಶಿಸಿ ಅವರಿಗೆ ವಿವಿಧ ರೀತಿಯಲ್ಲಿ ತುಷ್ಟಿಕರಿಸಲು ಪ್ರಯತ್ನಿಸಿ ಹಣ ಮತ್ತು ವಸ್ತು ರೂಪದ ಕೊಡುಗೆ ಹಂಚಿ ಆಗಿದೆ. ಸರ್ಕಾರಿ ಕಾರ್ಯಕ್ರಮಕ್ಕೆ ಕರೆದು ತಮ್ಮ ಕೊಡುಗೆಗಳನ್ನು ಕೊಟ್ಟ ಮಂತ್ರಿಗಳು ಜಿಲ್ಲೆಯ ಬೇರೆಡೆಯ ಸಮಸ್ಯೆಗಳ ಬಗೆಹರಿಸುವುದಕ್ಕಿಂತ ಹೆಚ್ಚು ಸ್ವಕ್ಷೇತ್ರದಲ್ಲಿ ಬೇರುಬಿಟ್ಟು ಕಾಮಗಾರಿ ಉದ್ಘಾಟಿಸುವ ಕೆಲಸದಲ್ಲಿದ್ದಾರೆ. ●

➘ ಮಾರುಕಟ್ಟೆಗೆ ಸರಕಾರೀ ಅನುದಾನ ಪಡೆಯಲು ಶಾಸಕರು ಪ್ರಯತ್ನಿಸಲಿಲ್ಲ. ಒಂದು ಬಾರಿ ಸಚಿವರೂ ಆಗಿದ್ದ ಅಭಯಚಂದ್ರ ಜೈನ್ 5 ಅವಧಿಗಳಿಂದ ಕಾಂಗ್ರೆಸ್ ಪಕ್ಷದಿಂದ ಈ ಕ್ಷೇತ್ರದ ಶಾಸಕರಾಗಿದ್ದಾರೆ. ಇವರ ಅವಧಿಯಲ್ಲಿ ಜನರ ನಿರೀಕ್ಷೆಗಳು ಹುಸಿಯಾಗಿವೆ.

ಒಂದೊಮ್ಮೆ ಶಾಂತಿ ಸೌಹಾರ್ದದ ಪ್ರದೇಶವಾಗಿದ್ದ ಮೂಡಬಿದ್ರಿ ಇತ್ತೀಚಿನ ವರ್ಷಗಳಲ್ಲಿ ಕೋಮುವಾದಿ ಚಟುವಟಿಕೆಗಳಿಗೆ ಎಡೆಕೊಟ್ಟಿದೆ. ಹಿಂದುತ್ವದ ಪುಂಡಾಟಿಕೆಗೆ ವಿರುದ್ಧವಾಗಿ ಸಣ್ಣ ಮಟ್ಟದ ಮುಸ್ಲಿಂ ಕೋಮುವಾದಿಗಳೂ ಬೆಳೆದಿದ್ದಾರೆ. ವಸಂತ ಪೂಜಾರಿ ಎಂಬವರನ್ನು ಮೂರು ವರ್ಷದ ಹಿಂದೆ ಮುಸ್ಲಿಂ ಕೋಮುವಾದಿಗಳು ಕೊಲೆ ಮಾಡಿದರು. ಸಿಪಿಐ(ಎಂ) ಪಕ್ಷ ಕೋಮುವಾದಕ್ಕೆದುರಾಗಿ ಕೆಲವು ಪ್ರದರ್ಶನ ನಡೆಸಿದೆ. ಸಿಪಿಐ(ಎಂ) ಕಾರ್ಯಕರ್ತರ ಮೇಲೂ ದಾಳಿ ನಡೆದಿದೆ. ಆಳ್ವಾಸ್ ವಿದ್ಯಾ ಸಂಸ್ಥೆಗಳಲ್ಲಿ ಎಲ್ಲವೂ ಸರಿಯಾಗಿಲ್ಲ. ಆಗೀಗ ವಿದ್ಯಾರ್ಥಿಗಳು ನಿಗೂಢ ಸಾವಿಗೀಡಾಗುತ್ತಿದ್ದು, ಆ ಬಗ್ಗೆ ಯಾವ ತನಿಖೆಗಳೂ ಬಹಿರಂಗಗೊಳ್ಳುತ್ತಿಲ್ಲ. ಕ್ರೀಡಾಳುವಾಗಿದ್ದ ಕಾವ್ಯಾ ಎಂಬ ವಿದ್ಯಾರ್ಥಿನಿಯ ನಿಗೂಢ ಸಾವಿನ ಬಗ್ಗೆ ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ ನಡೆದು, ಜಿಲ್ಲಾಡಳಿತ ಆಳ್ವಾಸ್ ಸಂಸ್ಥೆಯನ್ನು ಹೊಣೆಯಾಗಿಸಿ ತನಿಖೆ ನಡೆಸುವಂತಾಗಿದೆ. ತೀರಾ ಈಚೆಗೆ ಆ ಕಾಲೇಜುಗಳು ಹಾಸ್ಟೇಲ್ ವಾರ್ಡನ್‌ಗಳು ಹಲವು ವಿದ್ಯಾರ್ಥಿಗಳ ಮೇಲೆ ಒಂದು ರಾತ್ರಿ ಥಳಿಸಿ ಹಲ್ಲೆ ನಡೆಸಿದ ಪ್ರಕರಣ ನಡೆದಿದೆ. ಸಂಸ್ಥೆಯ ಪ್ರತಿಷ್ಠೆ ಕಾಪಾಡಲು ಬಹುಶ: ಮಾಧ್ಯಮಗಳೂ ಜಿಲ್ಲಾಡಳಿತವೂ ಎಲ್ಲವನ್ನೂ ಮುಚ್ಚಿಡಲು ಪ್ರಯತ್ನಿಸುತ್ತಿದೆ. ಶಾಸಕರಂತೂ ಈ ಬಗ್ಗೆ ಮಾತೇ ಆಡುತ್ತಿಲ್ಲ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಶಿರ್ತಾಡಿ, ನೀರ್ಕೆರೆ (ತೆಂಕಮಿಜಾರು) ಹೊಸಬೆಟ್ಟು, ಪುತ್ತಿಗೆ ಗ್ರಾಮಗಳಲ್ಲಿ ಕೃಷಿ ಕಾರ್ಮಿಕರು, ರೈತರು ಕರ್ನಾಟಕ ಪ್ರಾಂತ ರೈತ ಸಂಘದಡಿ ಸಂಘಟಿತರಾಗಿ ಕಾಮಗಾರಿಗಳಲ್ಲಿ ಭಾಗವಹಿಸಿದ್ದಾರೆ. ಆದರೆ ಮೊದಲ ವರ್ಷಗಳಲ್ಲಿ ಪಂಚಾಯತ್ ತೋರಿದ ಉತ್ಸಾಹ ಕಳೆದೊಂದು ವರ್ಷದಿಂದ ತೋರುತ್ತಿಲ್ಲ. ಇದರ ಪರಿಣಾಮ ಗ್ರಾಮೀಣ ಬಡವರಿಗೆ ಕೆಲಸ ಇಲ್ಲವಾಗಿದೆ. ನಿವೇಶನ ರಹಿತರು ಪ್ರಾಂತ ರೈತಸಂಘದಡಿ ಮಾಡಿದ ಹೋರಾಟದಿಂದ ಮೂಡಬಿದ್ರಿ ತಾಲೂಕಲ್ಲಿ 1000 ಎಕ್ರೆ ನಿವೇಶನ ಗುರುತಿಸಲ್ಪಟ್ಟಿದೆ. ಅದರಲ್ಲಿ ನಿವೇಶನ ರಹಿತರಿಗೆ ಮಂಜೂರಾಗಿರುವುದು 32 ಎಕ್ರೆ ಮಾತ್ರ.

67 ಗ್ರಾಮಗಳ ಅಸೆಂಬ್ಲಿ ಕ್ಷೇತ್ರವಾಗಿದ್ದರೂ, ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಕಾರಣವಾಗಿ, ಆಡಳಿತಾಂಗದ ದೃಷ್ಟಿ ಕೇವಲ ಮೂಡಬಿದ್ರಿಯ ಮೇಲೆಯೇ ಕೇಂದ್ರೀಕೃತವಾಗಿದೆ. ಪ್ರಚಾರದ ಅಬ್ಬರದಲ್ಲಿ ಇತರ ಗ್ರಾಮಗಳ ಅಭಿವೃದ್ಧಿ ಬಹಿರಂಗಕ್ಕೆ ಬರುತ್ತಿಲ್ಲ. ಶಾಸಕರೂ, ಆಳ್ವಾಸ್ ಸಂಸ್ಥೆಗಳೂ ಜನರನ್ನು ಯಾಮಾರಿಸಿವೆ. ಕ್ಷೇತ್ರದಲ್ಲಿ ಕಳೆದ ಕೆಲವು ವರ್ಷಗಳಿಂದ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ಹತ್ತಿರದ ಪೈಪೋಟಿ ಇದೆ. ಎರಡು ಅವಧಿಯಲ್ಲಿ ಜೆಡಿ(ಎಸ್) ಶಾಸಕತ್ವ ಪಡೆದುದರಿಂದಲೋ ಏನೋ ಇಂದಿಗೂ ಮೂಡಬಿದ್ರಿಯಲ್ಲಿ ಮೂರನೆಯ ಪ್ರಮುಖ ಶಕ್ತಿಯಾಗಿ ಜೆಡಿ(ಎಸ್) ಇದೆ. ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನ ಈಚೆಗೆ ಮೂಡಬಿದ್ರಿಯಲ್ಲಿ ನಡೆದಾಗ, ಪಕ್ಷದ ಪ್ರಭಾವ ಹೆಚ್ಚುತ್ತಿರುವುದು ಜನತೆಯ ಅರಿವಿಗೆ ಬಂದಿದೆ. ಅದಕ್ಕೂ ಮೊದಲು ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನ ಸಿಐಟಿಯು ನೇತೃತ್ವದಲ್ಲಿ ಬಹಳ ಯಶಸ್ವಿಯಾಗಿ ನಡೆದಿತ್ತು ಎಂಬುದನ್ನೂ ನಾವು ಗಮನಿಸಬೇಕಿದೆ. ಮೂಡಬಿದ್ರಿಯ ಹೊರಗೂ ಊರುಗಳಿವೆ ಮತ್ತು ಅಲ್ಲಿ ಜನ ವಾಸ ಮಾಡುತ್ತಿದ್ದಾರೆ ಎಂಬ ಅರಿವುಳ್ಳ ಶಾಸಕರು ಈ ಕ್ಷೇತ್ರಕ್ಕೆ ಬರಬೇಕಾಗಿದೆ. ●

1 ಲಕ್ಷ ಹುದ್ದೆಗಳಿಗೆ 2 ಕೋಟಿ ಅರ್ಜಿಗಳು ಮತ್ತು ಉದ್ಯೋಗನಾಶದ ಪರಿಸ್ಥಿತಿಯಲ್ಲೂ 'ನಿಗದಿತ ಅವಧಿಯ ಉದ್ಯೋಗ' ಅಧಿಸೂಚನೆ !



ವರ್ಷಕ್ಕೆ ಎರಡು ಕೋಟಿ ಉದ್ಯೋಗ ನಿರ್ಮಾಣದ ಆಶ್ವಾಸನೆ ಕೇವಲ ಚುನಾವಣಾ ಬೊಗಳೆ ಎಂದು ಜನ, ಅದರಲ್ಲೂ ಯುವಜನ ಕೆಲವು ದಿನ ಆಕ್ರೋಶ ತೋರಿಸಿ ನಂತರ ಮರೆತು ಬಿಡಬಹುದು ಎಂದು ಅಚ್ಚೇದಿನ್‌ವಾಲಾಗಳು ನಿರೀಕ್ಷಿಸಿದ್ದರೇನೋ. ಆದರೆ ಹಾಗಾಗಿಲ್ಲ. ಅಚ್ಛೇ ದಿನ್ ಪ್ರಧಾನ ಸೇವಕರ ಪಕೋಡಾ ಹೇಳಿಕೆಯ ನಂತರವಂತೂ ಅದು ಒದೆಯಲಾರಂಭಿಸಿದೆ. ಇದರಿಂದಾಗಿ ವರ್ಷಾನುಗಟ್ಟಲೆ ನೇಮಕಾತಿಯ ಮೇಲೆ ನಿರ್ಬಂಧ ಹೇರಿದ್ದ ಸರಕಾರೀ ಇಲಾಖೆಗಳಲ್ಲಿ ಕೆಲವು ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಬೇಕಾಗಿ ಬಂದಿದೆ. ಇದರಲ್ಲಿ ಲಕ್ಷಕ್ಕೂ ಹೆಚ್ಚು ಭರ್ತಿ ಮಾಡದ ಖಾಲಿ ಹುದ್ದೆಗಳಿರುವ ರೈಲ್ವೆ ಇಲಾಖೆ ಪ್ರಮುಖವಾದದ್ದು.

ಇತ್ತೀಚೆಗೆ ರೈಲ್ವೆ ಇಲಾಖೆ ಸುಮಾರು 1 ಲಕ್ಷ ಹುದ್ದೆಗಳಿಗೆ ಅರ್ಜಿ ಕರೆದಿದೆ. ಇದರಲ್ಲಿ 26502 ಸಹಾಯಕ ಲೋಕೋ ಪೈಲಟ್ ಮತ್ತು ಟೆಕ್ನಿಶಿಯನ್ ಹುದ್ದೆಗಳು, 62907 ಗ್ರೂಪ್ ಡಿ ಹುದ್ದೆಗಳು, ಅಂದರೆ ಗ್ಯಾಂಗ್‌ಮನ್, ಸ್ವಿಚ್‌ಮನ್, ಟ್ರಾಕ್‌ಮನ್, ಕ್ಯಾಬಿನ್‌ಮನ್, ವೆಲ್ಡರ್, ಹೆಲ್ಪರ್ ಇತ್ಯಾದಿ. ಸುಮಾರು 9500 ರೈಲ್ವೆ ಸುರಕ್ಷಾ ಪಡೆಗೆ.

ಮಾರ್ಚ್ 31 ಇದಕ್ಕೆ ಕೊನೆಯ ದಿನಾಂಕ. ಆದರೆ ಈಗಾಗಲೇ 2 ಕೋಟಿ ಅರ್ಜಿಗಳು ಬಂದಿವೆ, ಅಂದರೆ ಒಂದು ಹುದ್ದೆಗೆ ಕನಿಷ್ಟ 200 ಅರ್ಜಿಗಳು. ಈ ಹುದ್ದೆಗಳಿ ವಿದ್ಯಾರ್ಹತೆಯನ್ನು ಮೀರಿದ ಅರ್ಜಿಗಳು ಬಹಳಷ್ಟಿವೆ ಎನ್ನಲಾಗಿದೆ, ಪಿಹೆಚ್‌ಡಿ ಆದವರೂ ಅರ್ಜಿ ಹಾಕಿದ್ದಾರಂತೆ.

ಈ ನಡುವೆ ಕಳೆದ ಎರಡು ವರ್ಷಗಳಿಂದ ರೈಲ್ವೆ ಇಲಾಖೆಯಲ್ಲಿ ಅಪ್ರೆಂಟಿಸ್‌ಗಳಾಗಿ ಕೆಲಸ ಮಾಡಿಖಾಯಂ ಉದ್ಯೋಗಕ್ಕಾಗಿ ಕಾಯುತ್ತಿರುವ ಸುಮಾರು 3000 ಯುವಜನರು ಈ 2 ಕೋಟಿ ಜನಪ್ರವಾಹದಲ್ಲಿ ತಾವು ಪಡೆದ ತರಬೇತಿಗೆ ಬೆಲೆ ಸಿಗುತ್ತದೆಯೇ ಎಂಬ ಆತಂಕದಿಂದ ಮಾರ್ಚ್ 20ರಂದು ಮುಂಬೈಯಲ್ಲಿ ಕೆಲವು ಗಂಟೆಗಳ ವರೆಗೆ ಉಪನಗರ ರೈಲು ಹಳಿಗಳ ಮೇಲೆ ಧರಣಿ ಕೂತು ಪೋಲೀಸರ ಲಾಟಿಯೇಟುಗಳನ್ನು ತಿಂದರು–ಪ್ರಧಾನಿಗಳು 'ಸ್ಕಿಲ್ ಇಂಡಿಯಾದ ಬಗ್ಗೆ ಬಹಳ ಮಾತಾಡುತ್ತಾರೆ, ಆದರೆ ನಾವು ಎರಡು ವರ್ಷಗಳಲ್ಲಿ ಪಡೆದ 'ಸ್ಕಿಲ್‌ಗೆ ಬೆಲೆಯೆಲ್ಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಾರತೀಯ ರಿಝರ್ವ್ ಬ್ಯಾಂಕ್ ಬೆಂಬಲಿತ ಕೆಎಲ್‌ಇಎಂಎಸ್ ಇಂಡಿಯಾ ಅಧ್ಯಯನವೊಂದರ ಪ್ರಕಾರ ಅಚ್ಚೇದಿನ್‌ಗಳು ಆರಂಭವಾದ ನಂತರ ಉದ್ಯೋಗಾವಕಾಶಗಳು ಹೆಚ್ಚುವುದಂತಿರಲಿ, ವಾಸ್ತವವಾಗಿ ಕಡಿತವಾಗಿದೆ, 2014–15ರಲ್ಲಿ 0.2% ಮತ್ತು 2015–16ರಲ್ಲಿ 0.1%. ಕಡಿತವಾಗಿದೆ(ಮಾನಸ್ ಚಕ್ರವರ್ತಿ, ಲೈವ್‌ಮಿಂಟ್, ಮಾರ್ಚ್29). ಇದರ ನಂತರದ ಮಾಹಿತಿಯನ್ನು ಇನ್ನೂ ಕಲೆಹಾಕಲಾಗಿಲ್ಲ. ಅಂದರೆ **ನಾವೀಗ ಕಾಣುತ್ತಿರುವುದು ಉದ್ಯೋಗ ಬೆಳವಣಿಗೆಯಂತೂ ಅಲ್ಲವೇ ಅಲ್ಲ, ಉದ್ಯೋಗರಹಿತ ಬೆಳವಣಿಗೆಯೂ ಅಲ್ಲ, ವಾಸ್ತವವಾಗಿ ಉದ್ಯೋಗನಾಶದ ಬೆಳವಣಿಗೆ** ಎಂದು ಈ ವಿಶ್ಲೇಷಕರು ಹೇಳುತ್ತಾರೆ.

ಇವೆರಡೂ ನಮ್ಮ ಆಳುವ ಮಂದಿ ನಿಜವಾದ ಅಭಿವೃದ್ಧಿಯ ಸೂಚಕಗಳು ಎಂದು ಬಲವಾಗಿ ನಂಬಿರುವ ಜಿಡಿಪಿ ದರಗಳು ಮೇಲ್ಮಟ್ಟದಲ್ಲಿ ಇದ್ದ ವರ್ಷಗಳಲ್ಲಿ. 2014–15ರಲ್ಲಿ ಅದು 7.4% ಇತ್ತು, 2015–16ರಲ್ಲಿ 8.2%. ಆದರೆ ನಂತರ ನೋಟುರದ್ದತಿ ಮತ್ತು ಜಿಎಸ್‌ಟಿ ಪರಿಣಾಮವಾಗಿ ಈ ದರ ಇಳಿಯುವ ಸಂಭವವೇ ಹೆಚ್ಚು ಎಂಬುದನ್ನು ಅಚ್ಛೇ ದಿನ್ ಮಂದಿಯೂ ಇಲ್ಲಗಳೆಯುತ್ತಿಲ್ಲ. ಅಲ್ಲದೆ ಇವು ಉದ್ಯೋಗಾವಕಾಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಿಸುವ ಅನೌಪಚಾರಿಕ ವಲಯವನ್ನು ವಿಪರೀತವಾಗಿ ತಟ್ಟಿವೆ. ಎಂಬುದೂ ಎಲ್ಲರೂ ಒಪ್ಪಿಕೊಳ್ಳುತ್ತಿರುವ ಸಂಗತಿ. ಅಂದರೆ ಉದ್ಯೋಗನಾಶದ ಪ್ರಮಾಣ ಇನ್ನಷ್ಟು ಹೆಚ್ಚುವ ಸಂಭವವೇ ಹೆಚ್ಚು.

ಆದರೆ ಅಚ್ಛೇದಿನ್ ಮಂದಿಗೆ ಇದರ ಪರಿವೆಯೇ ಇದ್ದಂತಿಲ್ಲ. ಕಳೆದ ವಾರ ಈ ಸರಕಾರ **'ನಿಗದಿತ ಅವಧಿಯ ಉದ್ಯೋಗ'ಕ್ಕೆ ಅವಕಾಶ ಕಲ್ಪಿಸುವ ಅಧಿಸೂಚನೆಯನ್ನು ಜಾರಿ ಮಾಡಿ ಕಾರ್ಮಿಕರಿಗೆ ಒಂದು ಘನತೆಯ ಜೀವನ ಮಟ್ಟವನ್ನು ವಂಚಿಸುವ ಕಾಂಟ್ರಾಕ್ಟ್ ಉದ್ಯೋಗಕ್ಕೆ ಉತ್ತೇಜನೆ ನೀಡಿದೆ,** ಆ ಮೂಲಕ ಹೈರ್ ಅಂಡ್ ಫೈರ್ ಬಯಸುವ ಕಾರ್ಪೊರೇಟ್ ಕುಳಗಳ ಚಪ್ಪಾಳೆ ಗಿಟ್ಟಿಸಿದೆ. ಇದನ್ನು ಸಂಘ ಪರಿವಾರಕ್ಕೆ ಸೇರಿದ ಕಾರ್ಮಿಕ ಸಂಘಟನೆ ಎನಿಸಿರುವ ಬಿಎಂಎಸ್ ಕೂಡ ಬಲವಾಗಿ ಖಂಡಿಸಬೇಕಾಗಿ ಬಂದಿದೆ ಎಂಬುದು ಗಮನಾರ್ಹ.

ಬಿಗ್ ಡಾಟಾ+ಫೇಕ್ ಸುದ್ದಿಗಳು+ಬಿಗ್ ಮನಿ=ಅಚ್ಚೇ ದಿನ್

ಕಳೆದ ಸಂಚಿಕೆಯಲ್ಲಿ ಈ ಕಾಲಂನಲ್ಲಿ ಗಮನಿಸಿದಂತೆ, ಲಂಡನ್‌ನ ಕೆಂಬ್ರಿಜ್ ಅನಲಿಟಿಕ ಎಂಬ ಕಂಪನಿ ಸುಮರು 5 ಕೋಟಿ ಫೇಸ್‌ಬುಕ್ ಮಾಹಿತಿಗಳನ್ನು ದುರುಪಯೋಗಪಡಿಸಿಕೊಂಡು ಅಮೆರಿಕಾದ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಗೆಲುವಿಗೆ ನೆರವಾಗಿದೆ ಎಂಬುದು ಬಯಲಾಗಿ ಈಗ ಬಹಳ ಚರ್ಚೆಯಲ್ಲಿದೆ. 20 ಕೋಟಿ ಮತದಾರರ ಮಾನಸಿಕತೆಯನ್ನು ಪ್ರತ್ಯೇಕವಾಗಿ ವಿಶ್ಲೇಷಿಸಿ ಅವರನ್ನು ವೈಯಕ್ತಿವಾಗಿ ತಟ್ಟುವ ಸಂದೇಶಗಳನ್ನು ಕಳಿಸಿ ಇದನ್ನು ಸಾಧಿಸಲಾಗಿದೆಯಂತೆ.

ದಿನ ಬೆಳಗಾದರೆ, ಮುಖ್ಯವಾಗಿ ಅಳುವ ಮಂದಿಯ ಫೇಕ್ ನ್ಯೂಸ್‌ಗಳನ್ನು ಕೇಳುತ್ತಿರುವ ಭಾರತದಲ್ಲೂ ಇದರ ಬಿಸಿ ಹತ್ತಿದೆ. ಈ ಬಗ್ಗೆ ಕಾಂಗ್ರೆಸ್–ಬಿಜೆಪಿ ನಡುವೆ ಜಟಾಪಟಿ ನಡೆಯುತ್ತಿದೆ.

ಈ ರೀತಿ ಖಾಸಗಿ ಮಾಹಿತಿಗಳ ರಾಜಕೀಯ ದುರುಪಯೋಗದ ಬಗ್ಗೆ ಚರ್ಚೆ ನಡೆಯುತ್ತಿರುವಾಗಲೇ ನಮ್ಮ ದೇಶದ ಪ್ರಧಾನಿಗಳ 'ನಮೋ ಆಪ್" ಡೌನ್‌ಲೋಡ್ ಮಾಡಿಕೊಂಡವರ ಮಾಹಿತಿಗಳು ಅಮೆರಿಕಾದ ಕ್ಲೆವರ್‌ಟ್ರಾಪ್ ಎಂಬ ಕಂಪನಿಗೆ ರವಾನೆಯಾಗುತ್ತದೆ ಎಂಬ ಸಂಗತಿಯೂ ಬೆಳಕಿಗೆ ಬಂತು. ನಮೋಆಪ್ ಕಬಳಿಸಿ ಅಮೆರಿಕಾಕ್ಕೆ ಕಳಿಸುತ್ತಿರುವ ಮಾಹಿತಿಯ ಪ್ರಮಾಣ ಕೇಂಬ್ರಿಜ್ ಅನಾಲಿಟಿಕ ಪಡೆದುಕೊಂಡುದಕ್ಕಿಂತ ಇನ್ನೂ ಎಷ್ಟೋ ಹೆಚ್ಚು ಎಂಬುದು ಇನ್ನಷ್ಟು ಆತಂಕಕಾರಿಯಾದ ಸುದ್ದಿ. ಯಥಾಪ್ರಕಾರ ಬಿಜೆಪಿ ತಾನು ಹೀಗೆ ಮಾಡುತ್ತಿಲ್ಲ ಎಂದು ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಲು ಬೇರೆ ಪಕ್ಷಗಳ ಮೇಲೆ ಕೆಸರೆರಚುವ ತನ್ನ ಎಂದಿನ ತಂತ್ರವನ್ನು ಅನುಸರಿಸಿತು. ಆಪ್‌ನ ಖಾಸಗಿತ್ವದ ಶರತ್ತುಗಳನ್ನು ಮುರಿದಿಲ್ಲ ಎಂದಿತು, ನಂತರ ಸದ್ದಿಲ್ಲದೆ ಈ ಶರತ್ತುಗಳನ್ನು ಬದಲಿಸಿತು ಎಂಬುದೂ ಈಗ ಬೆಳಕಿಗೆ ಬಂದಿದೆ. ಈ ನಡುವೆ 9 ಲಕ್ಷ ಎನ್‌ಸಿಸಿ ಕೆಡೆಟ್‌ಗಳ ಮಾಹಿತಿಗಳನ್ನು ಪ್ರಧಾನಿಗಳು ಕೇಳಿದ್ದಾರೆ ಎಂಬ ಸುದ್ದಿಯೂ ಬಂತು.

ಸೋರುತಿಹುದು ಮನೆಯ ಮಾಳಿಗಿ!

* ನಮೋಆಪ್ ಖಾಸಗಿತ್ವದ ಶರತ್ತುಗಳನ್ನು ಮುರಿದು ಅದರ ಭಕ್ತರುಗಳ ಮಾಹಿತಿಗಳನ್ನು ಅಮೆರಿಕಾಕ್ಕೆ ಕಳಿಸುತ್ತಿದೆ; ಚುನಾವಣಾ ಆಯೋಗ ಕರ್ನಾಟಕದ ವಿಧಾನಸಭಾ ಚುನಾವಣೆಯ ಪ್ರಕಟಣೆಯನ್ನು ಮಾಡುವ ಮೊದಲೇ ಬಹಿರಂಗ* ಸಿಬಿಎಸ್‌ಇ ಪರಿಕ್ಷಾ ಪತ್ರಿಕೆಗಳ ಸೋರಿಕೆ* ಆಧಾರ್ ಬಗ್ಗೆ ಹತ್ತು ಹಲವು ಪ್ರಶ್ನೆಗಳು –ಸುದ್ದಿ



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಇದಲ್ಲದೆ ಕೇಂಬ್ರಿಜ್ ಅನಲಿಟಿಕಾದ ಭಾರತದಲ್ಲಿನ ಸಹಯೋಗಿ ಕಂಪನಿ ಒವೆಲೆನೊ ಬಿಸಿನೆಸ್ ಇಂಟೆಲಿಜೆನ್ಸ್ ಜೆಡಿ(ಯು)ನ ಹಿರಿಯ ನಾಯಕರೊಬ್ಬರ ಪುತ್ರ ನಡೆಸುತ್ತಿರುವ ಕಂಪನಿಯಾಗಿದ್ದು 2010 ಬಿಹಾರ ಚುನಾವಣೆಯಲ್ಲಿ ಜೆಡಿ(ಯು)ಗೆ ಮತ್ತು ಒಂದು ರಾಷ್ಟ್ರೀಯ ಪಕ್ಷಕ್ಕೆ ಇಂತಹ 'ವಿಶ್ಲೇಷಣೆ'ಯನ್ನು ಮಾಡಿ ಕೊಟ್ಟಿರುವುದಾಗಿ ಈ ಸಂಸ್ಥೆಯ ಮುಖ್ಯ ಅಧಿಕಾರಿಗಳೊಬ್ಬರು ಹೇಳಿರುವುದಾಗಿ ವರದಿಯಾಗಿದೆ. 2010ರಲ್ಲಿ ಜೆಡಿ(ಯು) ಮತ್ತು ಬಿಜೆಪಿ ಮೈತ್ರಿಯಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಬಿಜೆಪಿ ಇವನ್ನೆಲ್ಲ ನಿರಾಕರಿಸಿ ಕಾಂಗ್ರೆಸಿನತ್ತ ಬೆರಳು ತೋರಿಸುತ್ತಿದ್ದರೂ, 2016ರಲ್ಲಿ ಅಲ್ಪ ಅಂತರದಿಂದ ಟ್ರಂಪ್ ಗೆದ್ದಂತೆ, 2014ರಲ್ಲಿ ಕೇವಲ 31% ಮತಗಳಿಂದ ತನ್ನ 272+ ಮಿಶನ್ ಸಾಧಿಸಲು ಬೆಜೆಪಿಗೆ ನೆರವಾಯಿತು ಎಂಬ ಸಂಗತಿಯನ್ನು ಇಲ್ಲಗಳೆಯುವುದು ಕಷ್ಟವೇ. ಆ ನಂತರವೂ ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲೂ ಈ ಸಂಸ್ಥೆಯ ನೆರವು ಸಿಕ್ಕಿದೆ ಎನ್ನಲಾಗಿದೆ. ಬಿಜೆಪಿ ತಾನು ಈ ಕಂಪನಿಯ ನೆರವು ಪಡೆದಿಲ್ಲ, ಕಾಂಗ್ರೆಸ್ ಈ ಸಂಸ್ಥೆಯ ಬಳಿ ಹೋಗಿದೆ ಎಂದು ಆಪಾದಿಸುತ್ತಿದೆ.

ಕಳೆದ ನಾಲ್ಕು ಅಚ್ಚೇ ದಿನ್ ವರ್ಷಗಳಲ್ಲಿ ನಾವು ಪ್ರಜಾಪ್ರಭುತ್ವದ ಅಣಕ ಹೆಚ್ಚುತ್ತಿರುವುದನ್ನು ಆತಂಕದಿಂದ ಕಾಣುತ್ತಿದ್ದೇವೆ. ಚುನಾವಣೆಗಳ ಸಮಯದಲ್ಲಿ ರಾಜಕೀಯ ಸಂಕಥನವನ್ನು ತಮಗೆ ಬೇಕಾದಂತೆ ತಿರುಚುತ್ತಿರುವ ಪ್ರಯತ್ನಗಳನ್ನು ನೋಡುತ್ತಿದ್ದೇವೆ. ಆದರೆ ಈಗ ಈ ಬಿಗ್ ಡಾಟಾ ಅಂದರೆ ದೊಡ್ಡ ಮಾಹಿತಿಯ ದುರುಪಯೋಗದಿಂದ ಅದು ಇನ್ನೂ ಅಪಾಯಕಾರಿ ಆಯಾಮವನ್ನು ಪಡೆದುಕೊಂಡಂತೆ ಕಾಣುತ್ತಿದೆ.

ಚುನಾವಣೆಗಳು ಈಗ ರಾಜಕಿಯದ ಪ್ರಶ್ನೆಯಾಗಿ ಉಳಿದಿಲ್ಲ ಎನ್ನುತ್ತಾರೆ ಈ ರಂಗದಲ್ಲಿನ ಒಬ್ಬ ವಿಶೇಷಜ್ಞರಾದ ಪ್ರಬೀರ್ ಪುರಕಾಯಸ್ಥ. (ನ್ಯೂಸ್‌ಕ್ಲಿಕ್.ಇನ್, ಮಾರ್ಚ್ 27). ಚುನಾವಣೆ ಎಂದರೆ ಈಗ ರಾಜಕೀಯ ಮುಖಂಡರನ್ನು ಮತ್ತು ರಾಜಕಿಯ ಪಕ್ಷಗಳನ್ನು 'ಮಾರುವ' ಪ್ರಶ್ನೆಯಾಗಿ ಬಿಟ್ಟಿದೆ. ಅದಕ್ಕೆ ದೊಡ್ಡ ಮಾಹಿತಿ ಕಂಪನಿಗಳು ನಿರ್ಮಿಸಿರುವ ಒಂದಷ್ಟು ತಂತ್ರಗಳನ್ನು ಬಳಸಲಾಗುತ್ತದೆ. ಇದಕ್ಕೆ ಬಲಪಂಥಿಯ ಶಕ್ತಿಗಳು ಹುಸಿ ಸುದ್ದಿಗಳನ್ನು, ವಿಭಜನಕಾರಿ ರಾಜಕೀಯ, ಕೋಮುವಾದಿ ದ್ವೇಷ ಮತ್ತು ಗಲಭೆಗಳ ಹೊಲಸು ತಂತ್ರಗಳನ್ನು ಸಂಯೋಜಿಸಿ ಒಂದು ಅತ್ಯಂತ ವಿಷಕಾರೀ ಮಿಶ್ರಣವನ್ನು ತಯಾರಿಸುತ್ತಿವೆ.

ಇದರಲ್ಲಿನ ಇನ್ನೊಂದು ಅಂಶವೆಂದರೆ, ಈ ವಿಷಕಾರಿ ಮಿಶ್ರಣ ಅಗ್ಗದಲ್ಲಿ ಸಿಗುವಂತದ್ದಲ್ಲ ಎಂಬ ಸಂಗತಿಯತ್ತವೂ ಪುರಕಾಯಸ್ಥ ಗಮನ ಸೆಳೆಯುತ್ತಾರೆ. ತನಗೆ ಬೇಕಾದ ಅನಾಲಿಟಿಕ್ಸ್ ಅಂದರೆ ವಿಶ್ಲೇಷಣೆಗಳನ್ನು ಪಡೆಯಲು, ಬಿಜೆಪಿ ಕ್ಲೆವರ್‌ಟ್ಯಾಪ್‌ಗೆ ಎಷ್ಟು ಹಣ ಸುರಿಯುತ್ತಿದೆ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಕಾರಣಕ್ಕಾಗಿಯೇ ಅನಾಮಧೇಯ ದಾನಿಗಳಿಂದ ಅಪಾರ ಮೊತ್ತಗಳನ್ನು ಸಂಗ್ರಹಿಸಲು ಅದು ಚುನಾವಣಾ ಬಾಂಡ್ ದಾರಿಯನ್ನು ಕಂಡುಕೊಂಡಿದೆಯೇ? ಕ್ಲೆವರ್‌ಟ್ಯಾಪ್‌ನ ಅಗಾಧ ಬಿಲ್‌ಗಳನ್ನು ಪಾವತಿ ಮಾಡಲು ವಿದೇಶಗಳಲ್ಲಿಯೂ 'ಧಾರಾಳಿ ಹಿತೈಷಿ'ಗಳನ್ನು ಹೊಂದಿದೆಯೇ?–ಇದು ಅವರು ಕೇಳುವ ಪ್ರಶ್ನೆಗಳು.

ನಿಜ, ಬಿಜೆಪಿ ಬೇರೆಯವರ ಮೇಲೆ ಕೆಸರೆರಚಿ ಈ ಪ್ರಶ್ನೆಗಳನ್ನು ಮರೆಮಾಚಲು ಪ್ರಯತ್ನಿಸುತ್ತದೆ. ಆದರೂ, ಪುರಕಾಯಸ್ಥ ಅವರು ಹೇಳುವಂತೆ ಬಿಜೆಪಿ ನಮ್ಮ ಪ್ರಜಾಪ್ರಭುತ್ವವನ್ನು ಈ ಬಿಗ್ ಡಾಟಾ ವಿಶ್ಲೇಷಣೆಗಳು, ಫೇಕ್ ಸುದ್ದಿಗಳು ಮತ್ತು ಬೃಹತ್ ಹಣದ ಮೂಲಕ ಸೀಳಿ ಹಾಕುತ್ತಿದೆಯೇ ಎಂಬ ಪ್ರಶ್ನೆ ಪ್ರಜಾಪ್ರಭುತ್ವವಾದಿಗಳನ್ನು ಕಾಡುತ್ತದೆ.

ಚುನಾವಣಾ ಆಯೋಗ ಈಗ ಎಷ್ಟು ವಿಶ್ವಾಸಾರ್ಹ?

ಕಳೆದ ವಾರ ಬೆಂಗಳೂರಿನಲ್ಲಿ ಚುನಾವಣಾ ಆಯೋಗದ ಅಧಿಕಾರಿಗಳು ಬೆಳಿಗ್ಗೆ ವಾಯುವಿಹಾರಕ್ಕೆ ಹೋದವರಿಗೆ ಇಲೆಕ್ಟ್ರಾನಿಕ್ ಮತಯಂತ್ರಗಳ ವಿಶ್ವಾಸಾರ್ಹತೆಯ ಬಗ್ಗೆ ಮನವರಿಕೆ ಮಾಡಲು ಪ್ರಾತ್ಯಕ್ಷಿಕೆಗಳನ್ನು ನಡೆಸಿದರು ಎಂದು ವರದಿಯಾಗಿದೆ. ಮರುದಿನ ದಿಲ್ಲಿಯಲ್ಲಿ ಮುಖ್ಯ ಚುನಾವಣಾ ಆಯುಕ್ತರು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸುವ ಮೊದಲೇ ಬಿಜೆಪಿಯ ಐಟಿ ಸೆಲ್‌ನ ಪ್ರಮುಖರು ಅ ಬಗ್ಗೆ ಟ್ವೀಟ್ ಮಾಡಿದರು, ಅದೇ ವೇಳೆಗೆ ಕಾಂಗ್ರೆಸ್‌ನ ಕರ್ನಾಟಕದ ಐಟಿ ಮುಖ್ಯಸ್ಥ ಕೂಡ ಟ್ವೀಟ್ ಮಾಡಿದರು. ಈ ಬಗ್ಗೆ ಆಕ್ಷೇಪಗಳೆದ್ದಾಗ ಇಬ್ಬರೂ ತಮಗೆಸುದ್ದಿ ವಾಹಿನಿಯೊಂದರಿಂದ ತಿಳಿಯಿತು ಎಂದಿದ್ದಾರೆ. ಆ ಸುದ್ದಿ ವಾಹಿನಿಗೆ ಹೇಗೆ ತಿಳಿಯಿತು? ಮುಜುಗರಕ್ಕೆ ಒಳಗಾದ ಮುಖ್ಯ ಚುನಾವಣಾ ಆಯುಕ್ತರು ಈ ಬಗ್ಗೆ ತನಿಖೆ ಮಾಡುವುದಾಗಿ ಹೇಳಿದ್ದಾರೆ.

ಇದಕ್ಕೆ ಮೊದಲು ತ್ರಿಪುರಾದ ಬಿಜೆಪಿ ಅಭ್ಯರ್ಥಿಯೊಬ್ಬರು ಮತದಾನದ ದಿನ ಪ್ರತಿ ಮತಗಟ್ಟೆಯೊಳಗೆ ಏನಾಗುತ್ತಿದೆ ಎಂಬ ಮಾಹಿತಿ ತನಗೆ ದಿಲ್ಲಿಯಲ್ಲಿನ ಬಿಜೆಪಿ ಮುಖ್ಯ ಕಚೇರಿಯಿಂದ ಸತತವಾಗಿ ದೊರೆಯುತ್ತಿತ್ತು ಎಂದು ಹೇಳಿರುವ ವೀಡಿಯೋ ಪ್ರಸಾರದಲ್ಲಿದೆ. ಚುನಾವಣಾ ಆಯೋಗದ ಸಂಬಂಧಪಟ್ಟ ಸಿಬ್ಬಂದಿಗೆ ಮಾತ್ರ ಗೊತ್ತಿರುವ ಪಾಸ್ವರ್ಡ್ ಬಿಜೆಪಿ ಮುಖ್ಯ ಕಚೇರಿಗೂ ಲಭ್ಯವಾಗಿತ್ತೇ?

ಈ ನಡುವೆ 20 ಎಎಪಿ ಶಾಸಕರನ್ನು ಲಾಭದಾಯಕ ಹುದ್ದೆಯಲ್ಲಿದ್ದಾರೆ ಎಂದು ಅನರ್ಹಗೊಳಿಸಿರುವ ಚುನಾವಣಾ ಆಯೋಗದ ನಿರ್ಧಾರವನ್ನು ದಿಲ್ಲಿ ಹೈಕೋರ್ಟ್ ರದ್ದು ಮಾಡಿದೆ, ಇದು ಸರಿಯಾದ, ಕಾನೂನು ಪ್ರಕಾರ ಕೈಗೊಂಡ ಕ್ರಮ ಅಲ್ಲ, ಈ ಬಗ್ಗೆ ಮೌಕಿಕ ವಿಚಾರಣೆ ನಡೆಸಿದ ಮೇಲೆಯೇ ನಿರ್ಧರಿಸಬೇಕು ಎಂದು ತಾಕೀತು ಮಾಡಿದೆ.

ಕೆಲವು ತಿಂಗಳ ಮೊದಲು ಗುಜರಾತ್ ಮತದಾನ ದಿನಾಂಕವನ್ನು 15 ದಿನಗಳ ವರೆಗೆ ಸಕಾರಣವಿಲ್ಲದೆ ಪ್ರಕಟಿಸದಿದ್ದ ಸಂಗತಿಯನ್ನೂ ಇಲ್ಲಿ ನನೆಪಿಸಿಕೊಳ್ಳಬಹುದು.

ಹಣಕ್ಕಾಗಿ ಸುಳ್ಳು ಸುದ್ದಿಗಳನ್ನೂ ಪ್ರಸಾರ ಮಾಡಲು ಸಿದ್ಧ

ಇದು ಇತ್ತಿಚೆಗೆ ಕೋಬ್ರಾಪೋಸ್ಟ್ ಕೆಲವು ದೊಡ್ಡ ಸುದ್ದಿ ವಾಹಿನಿಗಳು ಮತ್ತು ಪತ್ರಿಕೆಗಳ ನಡುವೆ ನಡೆಸಿರುವ ಒಂದು ಕುಟುಕು ಕಾರ್ಯಾಚರಣೆಯಿಂದ ತಿಳಿದು ಬಂದಿರುವ ಸಂಗತಿ.

ವರದಿಗಾರ ಪುಷ್ಪ್ ಶರ್ಮ ತಾನು ಶ್ರೀಮದ್ ಭಗವದ್ಗೀತ ಸಮಿತಿಯ ಆಚಾರ್ಯ ಅಟಲ್, 2019ರ ಚುನಾವಣೆಯ ಮೊದಲು ಹಿಂದುತ್ವ ಅಜೆಂಡಾವನ್ನು ಮೂರು ಹಂತಗಳಲ್ಲಿ ಪ್ರೋತ್ಸಾಹಿಸಬೇಕೆಂದು ಬಯಸುತ್ತೇವೆ, ಇದಕ್ಕೆ 50 ಕೋಟಿ ರೂ.ವರೆಗೂ ಹಣ ಕೊಡಲಾಗುತ್ತದೆ, ಮೊದಲು ಮೂರು ತಿಂಗಳು 'ಮೃದು ಹಿಂದುತ್ವ' ಅಂದರೆ ಮುಖ್ಯವಾಗಿ ಧಾರ್ಮಿಕ ಅಂಶಗಳು, ಎರಡನೇ ಹಂತದಲ್ಲಿ ಅರೆ–ರಾಜಕೀಯ ಅಂಶಗಳು, ಇದರಲ್ಲಿ ಪ್ರತಿಪಕ್ಷಗಳ ಮುಖಂಡರ ಚಾರಿತ್ರ್ಯ ವಧೆಯೂ ಸೇರಿರುತ್ತದೆ ಮತ್ತು ಕೊನೆಯದಾಗಿ ಹಿಂದುಗಳು ಮತ್ತು ಮುಸ್ಲಿಮರ ನಡುವೆ ಧ್ರುವೀಕರಣದ ಅಂಶಗಳು ಇರುತ್ತವೆ ಎಂದರಂತೆ. ಉತ್ತರ ಭಾರತದ ಸುಮಾರು 17 ಪತ್ರಿಕೆಗಳು ಮತ್ತು ಸುದ್ದಿ ವಾಹಿನಿಗಳನ್ನು ಸಂಪರ್ಕಿಸಿದಾಗ ಸಾಮಾನ್ಯವಾಗಿ 'ಸಕಾರಾತ್ಮಕ' ಸ್ಪಂದನವೇ ಸಿಕ್ಕಿತಂತೆ. ಅಂದರೆ ಸುಮಾರಾಗಿ ಎಲ್ಲರು ಹಿಂದುತ್ವ ಅಜೆಂಡಾವನ್ನು ಪ್ರಸಾರ ಮಾಡಲು ಸಿದ್ದರಿದ್ದರು! **ಇದು ಅತ್ಯಂತ ವಿಭಜನಕಾರಿ ಅಜೆಂಡಾವನ್ನು ಹೊಂದಿದ್ದರೂ ದುರದೃಷ್ಟವಶಾತ್ ಯಾರೂ ಇದನ್ನು ತಿರಸ್ಕರಿಸಲಿಲ್ಲ ಎನ್ನುತ್ತಾರೆ ಕೋಬ್ರಾಪೋಸ್ಟ್‌ನ ಮುಖ್ಯಸ್ಥರು.**

ಜಾಗತೀಕರಣದ ದುಷ್ಫಲಗಳಿಂದ ಏಗಲು ಹತಾಶ ಟ್ರಂಪ್ ಕ್ರಮಗಳು

ಅಮೆರಿಕಾದ ಅರ್ಥವ್ಯವಸ್ಥೆಯು ಸಿಲುಕಿಕೊಂಡಿರುವ ಬಿಕ್ಕಟ್ಟಿನಿಂದ ಹೊರ ಬರಲು ಟ್ರಂಪ್ ರಕ್ಷಣಾತ್ಮಕ ವ್ಯಾಪಾರ ಕ್ರಮಗಳಿಗೆ ಇಳಿದಿದ್ದಾರೆ. ಬಂಡವಾಳಿಗರ ಮೇಲೆ ತೆರಿಗೆ ಹೇರದೆಯೇ ಅಧ್ಯಕ್ಷೀಯ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕೊಟ್ಟಿದ್ದ ಭರವಸೆಗಳನ್ನು ಈಡೇರಿಸಲೆಂದು ಹಿಡಿದ ದಾರಿಯಿದು. ಆದರೆ ಇದು ಕೆಲವರು ವರ್ಣಿಸುವಂತೆ 'ವಿಜಾಗತೀಕರಣ' ಅಂದರೆ ಜಾಗತೀಕರಣದಿಂದ ಹಿಂದೆ ಸರಿಯುವ ಪ್ರಕ್ರಿಯೆಯಲ್ಲ, ಬದಲಾಗಿ, ಹಣಕಾಸು ಬಂಡವಾಳದ ಯಜಮಾನಿಕೆಯನ್ನು ಉಳಿಸಿಕೊಳ್ಳಲು ಅದು ತನ್ನ ಜಾಗತೀಕರಣ ಪ್ರಕ್ರಿಯೆಯ ದುಷ್ಫಲವಾಗಿ ಹುಟ್ಟಿಹಾಕಿದ ಬಿಕ್ಕಟ್ಟಿನೊಂದಿಗೆ ಏಗಲು ಕೈಗೊಂಡಿರುವ ಹತಾಶೆಯ ಘೋರ ಕ್ರಮಗಳು ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್. ಪೀಪಲ್ಸ್ ಡೆಮಾಕ್ರಸಿ ಪತ್ರಿಕೆಯಲ್ಲಿ ಪ್ರಕಟವಾದ ಈ ಕುರಿತ ಅವರ ಲೇಖನದ ಭಾವಾನುವಾದ: ಕೆ.ಎಂ.ನಾಗರಾಜ್

ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾರ್ಚ್ 8ರಂದು, ಅಮೇರಿಕಾ ಆಮದು ಮಾಡಿಕೊಳ್ಳುವ ಉಕ್ಕಿನ ಮೇಲೆ 25% ಮತ್ತು ಅಲ್ಯೂಮಿನಿಯಂನ ಮೇಲೆ 10% ಆಮದು ಸುಂಕ ವಿಧಿಸುವುದಾಗಿ ಘೋಷಿಸಿದ್ದಾರೆ. ಈ ಘೋಷಣೆಯು ಜಾಗತಿಕ ವ್ಯಾಪಾರ ಸಮರ ಆರಂಭವಾಗುವ ಸಾಧ್ಯತೆಯನ್ನು ಸೂಚಿಸುತ್ತದೆ ಎಂಬುದು ಅನೇಕರ ಅಭಿಪ್ರಾಯ.

ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ, ಅಂದರೆ, ಒಂದು ದೇಶವು ಅತಿಯಾದ ಲಾಭ ಪಡೆಯುವ ಉದ್ದೇಶದಿಂದ ತನ್ನ ರಫ್ತುಗಳಿಗೆ ಸಮಂಜಸವಲ್ಲದ ಪ್ರಮಾಣದಲ್ಲಿ ಸಬ್ಸಿಡಿ ಕೊಡುತ್ತಿದ್ದರೆ, ಅಥವಾ ಯಾವ ಮಾರ್ಗವಾದರೂ ಸರಿ ತನ್ನ ಸರಕುಗಳು ಹೆಚ್ಚಾಗಿ ಮಾರಾಟವಾಗಲೇಬೇಕು ಎಂಬ ಉದ್ದೇಶದಿಂದ ತನ್ನ ಸರಕುಗಳನ್ನು ಮತ್ತೊಂದು ದೇಶದಲ್ಲಿ ಸುರಿದಾಗ(ಅಂದರೆ, ಸರಕುಗಳನ್ನು ತನ್ನ ಆಂತರಿಕ ಮಾರುಕಟ್ಟೆಯ ಬೆಲೆಗಳಿಗಿಂತ ಕಡಿಮೆ ಇಟ್ಟು ಇನ್ನೊಂದು ದೇಶದಲ್ಲಿ ಮಾರಿದಾಗ), ಆಮದು ಮಾಡಿಕೊಳ್ಳುವ ದೇಶವು ಆಮದು ಸುಂಕ ವಿಧಿಸಲು ವಿಶ್ವ ವ್ಯಾಪಾರ ಸಂಸ್ಥೆಯು ಅನುಮತಿ ಕೊಟ್ಟಿದೆ. ಆಮದುಗಳ ಸವಾಲುಗಳನ್ನು ಎದುರಿಸಲು ಸ್ಥಳೀಯ ಉತ್ಪಾದಕರು ಸನ್ನದ್ಧರಾಗುವಂತೆ ಅನುವಾಗಲು, ತಾತ್ಕಾಲಿಕವಾಗಿ, ಆಮದು ಸುಂಕ ವಿಧಿಸಲೂ ಅನುಮತಿ ಇದೆ. ಆದರೆ, ಸುಂಕ ವಿಧಿಸುವ ಡೊನಾಲ್ಡ್ ಟ್ರಂಪ್ ಅವರ ಈ ಕ್ರಮವು ವಿಶ್ವ ವ್ಯಾಪಾರ ಸಂಸ್ಥೆಯು ಕೊಟ್ಟಿರುವ ಈ ಎರಡು ಅನುಮತಿಗಳಲ್ಲಿ ಯಾವುದನ್ನೂ ಬಳಕೆ ಮಾಡಿಕೊಂಡಿಲ್ಲ. ಬದಲಾಗಿ, ಅವರು ತಮ್ಮ ದೇಶದ ಕಾನೂನಿನಡಿಯಲ್ಲಿ, "ರಾಷ್ಟ್ರೀಯ ಭದ್ರತೆ"ಯ ಹೆಸರಿನಲ್ಲಿ ಈ ಕ್ರಮ ಕೈಗೊಂಡಿದ್ದಾರೆ.

ಯಾವುದು ರಾಷ್ಟ್ರೀಯ ಭದ್ರತೆಯಾಗುತ್ತದೆ ಎಂಬುದನ್ನು ನಿಖರವಾಗಿ ಹೇಳುವುದು ಕಷ್ಟದ ಕೆಲಸ. ಒಂದು ದೇಶದ ಮಿಲಿಟರಿ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಅನೇಕ ಸರಕುಗಳು ಬೇಕಾಗುತ್ತವೆ. ಅಂತಹ ಸರಕುಗಳನ್ನು ಆಮದು ಮಾಡಿಕೊಳ್ಳುವುದರ ಬದಲಾಗಿ ಅವುಗಳನ್ನು ಆಂತರಿಕವಾಗಿಯೇ ಉತ್ಪಾದಿಸಲು ಮೀಸಲು ಕಲ್ಪಿಸಿಕೊಳ್ಳಬಹುದು ಮತ್ತು ಈ ನೆಪದಲ್ಲಿ ಅನೇಕಾನೇಕ ಸರಕುಗಳ ಆಮದನ್ನು ನಿಲ್ಲಿಸಲೂ ಬಹುದು. ಹೇಗೆ ಬೇಕಾದರೂ ವ್ಯಾಖ್ಯಾನ ಮಾಡಬಹುದಾದ ಕಾನೂನಿನ ಈ ಉಪಕ್ರಮವನ್ನು ಬಳಸಿಕೊಂಡು, ಟ್ರಂಪ್ ಅವರು ಆಮದು ರಕ್ಷಣೆಗೆ ಹೊರಟಿರುವ ಈ ಕ್ರಮವು ಒಂದು ಸಣ್ಣ ಘಟನೆಯಲ್ಲ, "ಮುಕ್ತ ವ್ಯಾಪಾರ" ವ್ಯವಸ್ಥೆಯೊಳಗೆ ಮಾಡಿದ ಒಂದು ಕಿರು ಬದಲಾವಣೆಯೂ ಅಲ್ಲ, ಬದಲಿಗೆ, ಅದು "ಮುಕ್ತ ವ್ಯಾಪಾರ" ವ್ಯವಸ್ಥೆಯನ್ನೇ ಒಳಗೊಳಗೇ ಹಾಳುಗೆಡಹುವ ಹುನ್ನಾರ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಅಮೇರಿಕಾ ಮತ್ತು ಯೂರೋಪ್ ದೇಶಗಳು ಬಹಳ ಜಾಗರೂಕತೆಯಿಂದ ಇತ್ತೀಚೆಗೆ ನಿರ್ಮಿಸಿದ್ದ "ಮುಕ್ತ ವ್ಯಾಪಾರ" ವ್ಯವಸ್ಥೆಯ ಉದ್ದೇಶವು ವಾಸ್ತವಿಕವಾಗಿ ಅದು ಮುಕ್ತವಾಗಿರಬೇಕು ಎಂದೇನೂ ಅಲ್ಲ. ಮೂರನೇ ಜಗತ್ತಿನ ದೇಶಗಳಿಗೆ ತಾರತಮ್ಯ ಮಾಡುವ ಅಂಶ ಅದರಲ್ಲಿ ಅಂತರ್ಗತವಾಗಿತ್ತು. ಕೃಷಿ ಸಬ್ಸಿಡಿ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ಅವರ ತಾರತಮ್ಯ ಮತ್ತು ಇಬ್ಬಂದಿ ನಿಲುವುಗಳು ಅವರ "ಮುಕ್ತ ವ್ಯಾಪಾರ" ವ್ಯವಸ್ಥೆಯಲ್ಲಿ ಎದ್ದು ಕಾಣುತ್ತವೆ. ತಮ್ಮ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳುವ ಉದ್ದೇಶದಿಂದಲೇ ರೂಪಿಸಿಕೊಂಡಿದ್ದ ಈ "ಮುಕ್ತ ವ್ಯಾಪಾರ" ವ್ಯವಸ್ಥೆಯನ್ನು ಹಾಳುಗೆಡವಲು ಟ್ರಂಪ್ ಆಡಳಿತ ಹೊರಟಿದೆ. ಅವರು ಈ ಕ್ರಮ ಕೈಗೊಳ್ಳಲು ಮುಂದಾಗಿರುವುದನ್ನು ನೋಡಿದರೆ, ಬಂಡವಾಳಶಾಹಿಯ ಬಿಕ್ಕಟ್ಟು ಎಷ್ಟು ಆಳವಾಗಿದೆ ಎಂಬುದನ್ನೂ ಮತ್ತು ನವ–ಉದಾರಿ ಬಂಡವಾಳಶಾಹಿಗೆ ಮುಂದೆ ಹೋಗಲು ರಸ್ತೆ ಸಂಪೂರ್ಣವಾಗಿ ಬಂದ್ ಆಗಿದೆ ಎಂಬುದನ್ನೂ ಸೂಚಿಸುತ್ತದೆ.

ಜಾಗತಿಕ ಅರ್ಥವ್ಯವಸ್ಥೆ ಚೇತರಿಸಿಕೊಳ್ಳುತ್ತಿದೆ ಮತ್ತು ಅದರಲ್ಲೂ ವಿಶೇಷವಾಗಿ ಅಮೇರಿಕಾದ ಅರ್ಥವ್ಯವಸ್ಥೆಯು ಬಿಕ್ಕಟ್ಟಿನಿಂದ ಹೊರಬರುತ್ತಿದೆ ಎಂಬ ಮಾತುಗಳು ಬಹಳ ಗಟ್ಟಿಯಾಗಿ ಕೇಳಿಬರುತ್ತಿದ್ದವು. ಫೆಬ್ರವರಿಯ ಮೊದಲ ವಾರದಲ್ಲಿ ಹೊರ ಬಂದ ಅಂಕಿ ಅಂಶಗಳ ಪ್ರಕಾರ ಅಮೇರಿಕಾದಲ್ಲಿ ನಿರುದ್ಯೋಗದ ಪ್ರಮಾಣ 4.1%ಗೆ ಇಳಿದದ್ದು ಉನ್ನತ ಬೆಳವಣಿಗೆಯ ಸೂಚನೆ ಎಂಬ ಸುದ್ದಿ ಹರಿದಾಡುತ್ತು. ಆದರೆ, ನಿರುದ್ಯೋಗದ ಮಟ್ಟ ನಿಜಕ್ಕೂ ಕೆಳಗಿಳಿದಿದ್ದರೆ, ರಕ್ಷಣಾತ್ಮಕ ವ್ಯಾಪಾರ ಕ್ರಮಗಳನ್ನು ಕೈಗೊಳ್ಳಲು ಟ್ರಂಪ್ ಆಡಳಿತಕ್ಕೆ ಕಾರಣಗಳೇ ಇರಲಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ಒಂದು ವೇಳೆ, ಶ್ರಮ ಮಾರುಕಟ್ಟೆಯು 4.1%ರಷ್ಟು ಬಿಗಿಯಾಗಿಯೇ ಇದ್ದಿದ್ದರೆ, ಆಗ, ಆಮದು ತೆರಿಗೆ ಹೆಚ್ಚಿಸುವುದರಿಂದಾಗಿ, ರಕ್ಷಣೆ ಪಡೆದ ವಲಯಗಳಲ್ಲಿ ಉತ್ಪಾದನೆ ಹೆಚ್ಚುವುದರ ಬದಲು ಉತ್ಪನ್ನಗಳ ಬೆಲೆ ಹೆಚ್ಚುತ್ತದೆ. ಅದರಿಂದಾಗಿ, ಉಂಟಾಗುವ ಹಣದುಬ್ಬರವು ಅರ್ಥವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಹಾಗಾಗಿ, ಟ್ರಂಪ್ಆಡಳಿತ ಕೈಗೊಂಡ ಈ ರಕ್ಷಣಾತ್ಮಕ ವ್ಯಾಪಾರ ಕ್ರಮಗಳು ಶ್ರಮ ಮಾರುಕಟ್ಟೆಯು ಅವರು ಹೇಳುವ ರೀತಿಯಲ್ಲಿ ಬಿಗಿಯಾಗಿಲ್ಲ ಎಂಬುದನ್ನೂ ಮತ್ತು ಅಮೇರಿಕಾದ ಅರ್ಥವ್ಯವಸ್ಥೆಯ ಬಿಕ್ಕಟ್ಟು ಮುಂದುವರಿಯುತ್ತಿದೆ ಎಂಬುದನ್ನೂ ದೃಢಪಡಿಸುತ್ತದೆ.

ಲಭ್ಯವಿರುವ ಎಲ್ಲ ಸೂಚನೆಗಳೂ ಈ ಅಭಿಪ್ರಾಯವನ್ನು ಪುಷ್ಠೀಕರಿಸುತ್ತವೆ. ಉದಾಹರಣೆಯಾಗಿ ನೋಡುವುದಾದರೆ, ಅಧಿಕೃತ ನಿರುದ್ಯೋಗ ದರ 4.1% ಇದ್ದಾಗ್ಯೂ, ಇದು 2008ರ ಬಿಕ್ಕಟ್ಟು ಆರಂಭವಾದಾಗ ಇದ್ದದ್ದಕ್ಕಿಂತಲೂ ಕಡಿಮೆ ಇದ್ದರೂ ಸಹ, ಕೆಲಸಕ್ಕೆ ಅರ್ಹರಿರುವ ಜನಸಂಖ್ಯೆಗೆ ಹೋಲಿಸಿದರೆ ಕೆಲಸ ಪಡೆದವರ ಅನುಪಾತವು ಆಗ ಇದ್ದದ್ದಕ್ಕಿಂತಲೂ ಈಗ ಕಡಿಮೆ ಇದೆ. ಒಂದು ವೇಳೆ ಈಗ ಕೆಲಸದಲ್ಲಿರುವವರ ಅನುಪಾತವು ಆಗ ಕೆಲಸದಲ್ಲಿದ್ದವರ ಅನುಪಾತಕ್ಕೆ ಸಮನಾಗಿ ಇದೆ ಎಂದು ಊಹಿಸಿಕೊಂಡರೂ, ಅಮೇರಿಕಾದಲ್ಲಿ ಇಂದಿನ ನಿರುದ್ಯೋಗ ದರವು 4.15% ಆಗುವುದಿಲ್ಲ. ಅದು 6.1% ಆಗುತ್ತದೆ. ಕೆಲಸಕ್ಕೆ ಅರ್ಹರಿದ್ದರೂ ಕೆಲಸದಲ್ಲಿ ತೊಡಗುವವರ ಅನುಪಾತವು ಕಡಿಮೆಯಾಗಲು ಇರುವ ಕಾರಣವೆಂದರೆ ಕೆಲಸ ಹುಡುಕಿಕೊಂಡು ಹೋದಾಗ ಅದು ದೊರೆಯುವ ಸಾಧ್ಯತೆ ಕಡಿಮೆಯೇ ಇರುತ್ತದೆ.

ಕೂಲಿ ದರದ ಮೇಲೆ ಪರಿಶೀಲನೆ ನಡೆಸಿದಾಗಲೂ ಅದೇ ರೀತಿಯ ಅನುಮಾನಗಳು ಕಾಡುತ್ತವೆ. ಶ್ರಮ ಮಾರುಕಟ್ಟೆ ಬಿಗಿಯಾಗಿದ್ದಾಗ ಕೂಲಿ ದರಗಳು ಏರಿಕೆಯತ್ತ ವಾಲುತ್ತವೆ. ಆದರೆ, ಅಮೇರಿಕಾದಲ್ಲಿ, ನಿರುದ್ಯೋಗ ದರವು ಅಧಿಕೃತ ವಾಗಿ 4.1%ರಷ್ಟು ಕಡಿಮೆ ಇದ್ದರೂ, ಕೂಲಿಯ ದರಗಳಲ್ಲಿ ಏರಿಕೆಯೇ ಇಲ್ಲದಿರುವುದರಿಂದ, ಶ್ರಮ ಮಾರುಕಟ್ಟೆ ಬಿಗಿಯಾಗಿದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು ಮತ್ತು ನಿರುದ್ಯೋಗದ ಪ್ರಮಾಣ 4.1%ರ ಮಟ್ಟದಲ್ಲಿದೆ ಎಂಬ ಅಂಕಿ ಅಂಶವೂ ದಾರಿ ತಪ್ಪಿಸುವ ಉದ್ದೇಶದ್ದೇ ಆಗಿದೆ. ಮತ್ತು, ಇಡೀ ಬಂಡವಾಳಶಾಹಿ ಜಗತ್ತು ಚೇತರಿಕೆ ಪಡೆಯಲು ಅಮೇರಿಕಾದತ್ತ ಆಸೆ ಕಣ್ಣುಗಳಿಂದ ನೋಡುತ್ತಿರುವ ಸಂದರ್ಭದಲ್ಲಿಯೇ ಟ್ರಂಪ್ ಕೈಗೊಂಡಿರುವ ರಕ್ಷಣಾತ್ಮಕ ವ್ಯಾಪಾರ ಕ್ರಮಗಳು ಅಮೇರಿಕಾದ ಅರ್ಥವ್ಯವಸ್ಥೆಯು ಬಿಕ್ಕಟ್ಟಿನ ಕೆಸರಿನಲ್ಲಿ ಸಿಕ್ಕಕೊಂಡಿರುವುದನ್ನು ಪುಷ್ಟೀಕರಿಸುತ್ತಿವೆ.

ಬಿಕ್ಕಟ್ಟಿನಿಂದ ಹೊರ ಬರಲು ಟ್ರಂಪ್ ಅನುಸರಿಸಲು ಹೊರಟಿರುವ ರಕ್ಷಣಾತ್ಮಕ ವ್ಯಾಪಾರ ಕ್ರಮಗಳು, ಅಧ್ಯಕ್ಷೀಯ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಅವರು ಕೊಟ್ಟಿದ್ದ ಭರವಸೆಗಳಿಗೆ ಅನುಗುಣವಾಗಿವೆ. ಅವರು, ಬೃಹತ್ ಸಾರ್ವಜನಿಕ ವೆಚ್ಚಗಳ ಮೂಲಕ ಅಮೇರಿಕಾದ ಮಾರುಕಟ್ಟೆಯ ವಿಸ್ತರಣೆಯ ಬಗ್ಗೆ ಯೋಚಿಸುವುದಿಲ್ಲ. ಅವರು ಹಾಗೆ ಮಾಡದಿರುವ ಕಾರಣ ಏನೆಂದರೆ, ಸಾರ್ವಜನಿಕ ಉದ್ದೇಶಗಳಿಗೆ ಭಾರೀ ದೊಡ್ಡ ಮೊತ್ತದ ಹಣ ಖರ್ಚು ಮಾಡಬೇಕೆಂದಾದರೆ, ಅಷ್ಟು ಹಣವನ್ನು ಸಂಗ್ರಹಿಸಲು ಬಂಡವಾಳಿಗರ ಮೇಲೆ ತೆರಿಗೆ ಹೇರಬೇಕು ಅಥವಾ ವಿತ್ತೀಯ ಕೊರತೆಯ ಮೂಲಕ ಅದನ್ನು ಹೊಂದಿಸಿಕೊಳ್ಳಬೇಕಾಗುತ್ತದೆ (ಸಾಮಾನ್ಯ ದುಡಿಮೆಗಾರರ ಮೇಲೆ ತೆರಿಗೆ ಹೇರಿ ಹಣ ಸಂಗ್ರಹಿಸಿದರೆ, ಅವರು ಮಾಡುವ ಖರ್ಚುಗಳೂ ಅಷ್ಟೇ ಪ್ರಮಾಣದಲ್ಲಿ ಕಡಿಮೆಯಾಗುತ್ತವೆ. ಹಾಗಾಗಿ, ಮಾರುಕಟ್ಟೆ ವಿಸ್ತರಣೆಯ ಉದ್ದೇಶ ಈಡೇರುವುದಿಲ್ಲ). ಬಂಡವಾಳಿಗರ ಮೇಲೆ ತೆರಿಗೆ ಹೇರುವ ಮತ್ತು ವಿತ್ತೀಯ ಕೊರತೆ ಉಂಟಾಗುವ ಎರಡೂ ಪರಿಸ್ಥಿತಿಗಳನ್ನು ಹಣಕಾಸು ಬಂಡವಾಳವು ಸುತರಾಂ ಒಪ್ಪುವುದಿಲ್ಲ.

ಸಾರ್ವಜನಿಕ ವೆಚ್ಚಗಳ ಮೂಲಕ ಅಮೇರಿಕಾದ ಮಾರುಕಟ್ಟೆಯ ಒಟ್ಟು ಗಾತ್ರವನ್ನು ವಿಸ್ತರಿಸುವ ಯಾವ ಯೋಜನೆಗಳೂ ಇಲ್ಲದಿರುವಾಗ, ರಕ್ಷಣಾತ್ಮಕ ವ್ಯಾಪಾರ ಕ್ರಮಗಳ ಮೂಲಕ ಅಮೇರಿಕಾದ ಈಗಿನ ಮಾರುಕಟ್ಟೆಯನ್ನು ಆಂತರಿಕ ಉತ್ಪಾದಕರಿಗೆ ಮೀಸಲಿಟ್ಟು ಅವರಿಗೆ ಒಪ್ಪಿಸಿದಂತಾಗುತ್ತದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅಮೇರಿಕಾದ ಈ ಕ್ರಮವು, ತನ್ನ ಆಂತರಿಕ ಉತ್ಪತ್ತಿಯ ಹೆಚ್ಚಳ ಮತ್ತು ಹೆಚ್ಚಿನ ಉದ್ಯೋಗಾವಕಾಶಗಳಿಗಾಗಿ, ಬೇರೆ ದೇಶಗಳ ಉತ್ಪಾದಕರಿಂದ ಅವರ ಮಾರುಕಟ್ಟೆಯ ಒಂದು ಭಾಗವನ್ನು ಕಿತ್ತುಕೊಳ್ಳುವುದೇ ಆಗಿರುತ್ತದೆ. ಅಂದರೆ, ಅಮೇರಿಕಾದಲ್ಲಿ ಉದ್ಯೋಗ ಸೃಷ್ಟಿಸಲು ಬೇರೆ ದೇಶಗಳಲ್ಲಿ ಉದ್ಯೋಗ ನಾಶಮಾಡಬೇಕಾಗುತ್ತದೆ. ಇಂತಹ ನೀತಿಯನ್ನು "ನನ್ನ ನೆರೆಯವನು ಹಾಳಾಗಲಿ" ಎನ್ನುವ ನೀತಿ ಎಂದು ಕರೆಯುತ್ತಾರೆ. ಇದು, ಸದ್ಯದಲ್ಲಿ ಬಂಡವಾಳಶಾಹಿಯು ಎಂತಹ ಘೋರ ಪರಿಸ್ಥಿತಿಗೆ ಬಂದು ತಲುಪಿದೆ ಎಂಬುದನ್ನು ಎಷ್ಟರಮಟ್ಟಿಗೆ ವ್ಯಕ್ತಪಡಿಸುತ್ತದೆಯೋ ಅಷ್ಟರ ಮಟ್ಟಗೆ ಮುಂಬರುವ ದಿನಗಳಲ್ಲಿ ಬಂದೊದಗುವ ಇನ್ನೂ ಹೆಚ್ಚಿನ ಆಪತ್ತುಗಳಿಗೆ ಬಂಡವಾಳಶಾಹಿಯು ಮೂಲ ಕಾರಣವೂ ಆಗುತ್ತದೆ.

ಈ ಪರಿಸ್ಥಿತಿ ಘೋರವಾಗಿದೆ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ, ಬಿಕ್ಕಟ್ಟಿನ ಈ ಸಂದರ್ಭದಲ್ಲಿ, ಅಮೇರಿಕಾದ "ನನ್ನ ನೆರೆಯವನು ಹಾಳಾಗಲಿ" ನೀತಿಯ ಬಗ್ಗೆ ಉಳಿದ ಬಂಡವಾಳಶಾಹಿ ದೇಶಗಳ ನಡುವೆ ಸುಸಂಘಟಿತವಾದ ಯಾವ ಒಂದು ಕಾರ್ಯತಂತ್ರವೂ ಕಾಣುತ್ತಿಲ್ಲ. ಹಾಗಾಗಿ, ಉಳಿದ ದೇಶಗಳು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಅನಿವಾರ್ಯತೆ ಉಂಟಾಗುತ್ತದೆ. ಬೇರೆಯವರು ತಮ್ಮ ಮಾರುಕಟ್ಟೆಯನ್ನು ಕಿತ್ತುಕೊಂಡಾಗ ಉಂಟಾಗುವ ತೊಂದರೆಗಳಿಗೆ ಒಳಗಾದ ದೇಶಗಳು ಕೈಕಟ್ಟಿಕೊಂಡು ತಮಾಷೆ ನೋಡುವವರಂತೆ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ತಾನು ಎದುರಿಸುತ್ತಿರುವ ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗಗಳನ್ನು ಬೇರೆ ದೇಶಗಳಿಗೆ ಅಮೇರಿಕಾ ರಫ್ತು ಮಾಡುಲು ಅವರು ಬಿಡುವುದಿಲ್ಲ. ತಮ್ಮ ದೇಶದ ಹಿತಾಸಕ್ತಿಗಳನ್ನು ಅಮೇರಿಕಾ ಬಲಿ ಪಡೆಯಲು ಅವರು ಬಿಡುವುದಿಲ್ಲ. ಹಾಗಾಗಿ, ಎಲ್ಲರೂ "ನನ್ನ ನೆರೆಯವನು ಹಾಳಾಗಲಿ" ನೀತಿಯನ್ನು ಅನುಸರಿಸುವುದು ಸಾಮಾನ್ಯವಾಗುತ್ತದೆ.

ಈ ಪರಿಸ್ಥಿತಿಯಲ್ಲಿ, ಎಲ್ಲರೂ "ನನ್ನ ನೆರೆಯವನು ಹಾಳಾಗಲಿ" ನೀತಿ ಅನುಸರಿಸುವುದು ಸಾಮಾನ್ಯವಾದಾಗ (ಈ ಪರಿಸ್ಥಿತಿಯನ್ನು, ಜಾಗತಿಕ ವ್ಯಾಪಾರ ಸಮರದ ಸ್ಫೋಟ ಎಂದು ಕೆಲವರು ಅಭಿಪ್ರಾಯಪಡುತ್ತಾರೆ), ಬಂಡವಾಳಗಾರರರಿಗೆ ಹೂಡಿಕೆ ಮಾಡಲು ಇದ್ದ ಅಲ್ಪ ಸ್ವಲ್ಪ ಉಮೇದು ಕುಗ್ಗುತ್ತದೆ. ಅದರಿಂದಾಗಿ, ಒಟ್ಟಾರೆ ಬೇಡಿಕೆ ಕುಸಿಯುತ್ತದೆ ಮತ್ತು ಪರಿಣಾಮವಾಗಿ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಳ್ಳುತ್ತದೆ. ನವ ಉದಾರಿ ಬಂಡವಾಳಶಾಹಿಯು ತಾನು ಸಾಗುತ್ತಿರುವ ರಸ್ತೆಯ ತುದಿಗೆ ಬಂದು ನಿಂತಿದೆ. ಅದಕ್ಕೆ ಮುಂದೆ ಹೋಗಲು ದಾರಿ ಬಂದ್ ಆಗಿದೆ ಎಂಬುದನ್ನು ತಿಳಿಯಲು ಇದಕ್ಕಿಂತಲೂ ಸ್ಪಷ್ಟವಾದ ಪರಿಸ್ಥಿತಿ ಇರಲಾರದು.

ಸದ್ಯದ ಈ ಪರಿಸ್ಥಿತಿಯನ್ನು ವರ್ಣಿಸಲು ಕೆಲವರು ಇತ್ತೀಚೆಗೆ "ವಿಜಾಗತೀಕರಣ" ("de-globalisation") ಎಂಬ ಪದ ಬಳಕೆಮಾಡುತ್ತಿದ್ದಾರೆ. ಜಾಗತೀಕರಣ ಪ್ರಕ್ರಿಯೆಯ ಅಂಗವಾಗಿ, ಅಮೇರಿಕಾ ಮತ್ತು ಯೂರೋಪ್ ಎತ್ತಿ ನಿಲ್ಲಿಸಿದ್ದ "ಮುಕ್ತ ವ್ಯಾಪಾರ"ದ ಆಳ್ವಿಕೆಯು ಗಮನಾರ್ಹವಾಗಿ ಬಲಗುಂದಿದೆ. ಆದರೆ, ಈ "ವಿಜಾಗತೀಕರಣ" ಕೊಡುವ ಅರ್ಥದಿಂದ ಒಂದು ಅಂಶ ತಪ್ಪಿಸಿಕೊಂಡಿದೆ. ಅದು ಯಾವುದೆಂದರೆ, ವರ್ತಮಾನದಲ್ಲಿಯಾಗಲಿ ಅಥವಾ ಮುಂದೆಯಾಗಲಿ, ಜಾಗತಿಕ ಹಣಕಾಸಿನ ಹರಿವಿಗೆ ಯಾವುದೇ ಹಿನ್ನಡೆ ಅಥವಾ ಅಡೆ ತಡೆಗಳಾಗಲಿ ಆಗಿಲ್ಲ ಎಂಬುದು.

ಖಚಿತವಾಗಿ ಹೇಳುವುದಾದರೆ, ಅಮೇರಿಕಾದ ರಕ್ಷಣಾತ್ಮಕ ವ್ಯಾಪಾರ ಕ್ರಮಗಳು ಜಾರಿಯಾದಾಗ, ವಿದೇಶಗಳಲ್ಲಿರುವ ಕಡಿಮೆ ಕೂಲಿಯ ಲಾಭ ಪಡೆಯುವ ಉದ್ದೇಶದಿಂದ ಅಮೇರಿಕಾದ ಕಂಪೆನಿಗಳು ಆ ದೇಶಗಳಲ್ಲಿ ಬಂಡವಾಳ ಹೂಡಿಕೆ ಮಾಡಿ ತೊಡಗಿರುವ ತಯಾರಿಕಾ ಚಟುವಟಿಕೆಗಳ ಮೇಲೆಯೂ ಹೊಡೆತ ಬೀಳುತ್ತದೆ. ವಾಸ್ತವವಾಗಿ, ಅಮೇರಿಕಾ ದೇಶವು ಪೂರ್ವ ಏಷ್ಯಾದಿಂದ ಆಮದು ಮಾಡಿಕೊಳ್ಳುತ್ತಿರುವ ಸರಕುಗಳನ್ನು ತಯಾರಿಸುವ ಘಟಕಗಳ ಒಡೆತನ ಅಮೇರಿಕಾದ ಕಂಪೆನಿಗಳಿಗೆ ಸೇರಿದೆ. ಮತ್ತು ಭಾರತದಂತಹ ದೇಶಗಳು ನಿರ್ವಹಿಸುತ್ತಿರುವ ಹೊರ ಗುತ್ತಿಗೆ ಕೆಲಸಗಳಿಗೂ ಅಡ್ಡಿಪಡಿಸುವ ಕ್ರಮಗಳು (ಒಬಾಮ ಆಡಳಿತ ಇದಕ್ಕೆ ಚಾಲನೆ ನೀಡಿತ್ತು), ಅಮೇರಿಕಾದ ಕಂಪೆನಿಗಳ ಲಾಭದಾಯತೆಯನ್ನು ಕುಗ್ಗಿಸುತ್ತವೆ. ಇಂತಹ ಕ್ರಮಗಳು ಉತ್ಪಾದನೆಯಲ್ಲಿ ತೊಡಗಿರುವ ಬಂಡವಾಳಕ್ಕೆ ಮಾತ್ರ ಅನ್ವಯಿಸುತ್ತವೆ, ಹಣಕಾಸು ಬಂಡವಾಳಕ್ಕೆ ಅನ್ವಯವಾಗುವುದಿಲ್ಲ. ಹಣಕಾಸು ಬಂಡವಾಳದ ಮೇಲೆ ಕಿಂಚಿತ್ತಾದರೂ ನಿರ್ಬಂಧವಿಲ್ಲ ಮತ್ತು ಅದನ್ನು ಪರಿಗಣಿಸುವ ಇರಾದೆಯೂ ಇಲ್ಲ ಟ್ರಂಪ್ ಆಡಳಿತಕ್ಕೆ.

ಹಣಕಾಸು ಬಂಡವಾಳದ ಮೇಲೆ ನಿರ್ಬಂಧಗಳೇ ಇಲ್ಲದ ಕಾರಣದಿಂದ ಅದು ಮೇಲುಗೈ ಪಡೆದಿದೆ. ಆದ್ದರಿಂದ, ವಿತ್ತೀಯ ನೀತಿಗಳ ಬಗ್ಗೆ (ಅಂದರೆ ಕೊರತೆ ಹಣಕಾಸು ನೀತಿ) ಅದಕ್ಕಿರುವ ಬದ್ಧ ವಿರೋಧವನ್ನು ಪ್ರಭುತ್ವಗಳು ಗೌರವಿಸುತ್ತವೆ. ಹಾಗಾಗಿ, ಪ್ರಭುತ್ವಗಳು ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ಯಾವುದೇ ವಿತ್ತೀಯ ಕಾರ್ಯಾಚರಣೆಗೆ ಇಳಿಯುವ ಸಾಧ್ಯತೆಯನ್ನು ತಳ್ಳಿಹಾಕಬೇಕಾಗುತ್ತದೆ. ಸರಕಾರ ನಡೆಸುವವರು ಬಯಸುವ ಪರಿಣಾಮ(ಅರ್ಥವ್ಯವಸ್ಥೆಯ ಪುನಶ್ಚೇತನ) ಉಂಟುಮಾಡುವುದರಲ್ಲಿ ಹಣಕಾಸು ನೀತಿಯೂ (ಬಡ್ಡಿ ದರ ನೀತಿ) ವಿಫಲವಾಗಿರುವುದರಿಂದ, ಇನ್ನುಳಿದಿರುವ ಆಯ್ಕೆ ರಕ್ಷಣಾತ್ಮಕ ವ್ಯಾಪಾರ ಕ್ರಮವೇ ಆಗುತ್ತದೆ. ಅದರ ಅಂಗವಾಗಿ, ಉತ್ಪಾದನೆಯಲ್ಲಿ ತೊಡಗಿದ ಬಂಡವಾಳದ ಮೇಲೆ ಹೇರುವ ನಿರ್ಬಂಧಗಳು ಹತಾಶ ಕ್ರಮಗಳಾಗುತ್ತವೆ. ನಿರ್ಬಂಧವಿಲ್ಲದುದರಿಂದ ಹಣಕಾಸು ಬಂಡವಾಳ ಬಗ್ಗುವುದಿಲ್ಲ. ಅದು ಬಗ್ಗದ ಕಾರಣದಿಂದಾಗಿ ಉತ್ಪಾದನೆಯಲ್ಲಿ ತೊಡಗಿದ ಬಂಡವಾಳದ ಮೇಲೆ ನಿರ್ಬಂಧ ಹೇರುವುದು ಒಂದು ಹತಾಶೆಯ ಕ್ರಮವೂ ಮತ್ತು ವಿಡಂಬನೆಯೂ ಆಗುತ್ತದೆ.

ಈ ಬದಲಾವಣೆಗಳನ್ನು "ವಿಜಾಗತೀಕರಣ" ಎಂದು ಕರೆಯುವವರು ಒಂದು ಅಂಶವನ್ನು ಗಮನಿಸಿಲ್ಲ. ಅದು ಯಾವುದೆಂದರೆ, ಈಗ ಕೈಗೊಳ್ಳುತ್ತಿರುವ ರಕ್ಷಣಾತ್ಮಕ ವ್ಯಾಪಾರದ ಕ್ರಮಗಳು, ಇಡೀ ಜಾಗತೀಕರಣ ಪ್ರಕ್ರಿಯೆಯ ಸಾರ ಸತ್ವದಂತಿರುವ ಮತ್ತು ಸಂಪೂರ್ಣವಾಗಿ ಜಾಗತೀಕರಣಗೊಂಡಿರುವ ಹಣಕಾಸು ಬಂಡವಾಳ ವಿದ್ಯಮಾನದ ನಿರಾಕರಣೆಯಲ್ಲ ಎಂಬುದು. ನಮ್ಮ ಮುಂದೆ ಈಗ ನಡೆಯುತ್ತಿರುವುದು "ವಿಜಾಗತೀಕರಣ"ವಲ್ಲ. ಬದಲಾಗಿ, ನಾವು ಈಗ ಕಾಣುತ್ತಿರುವುದು ಏನೆಂದರೆ, ಅದು, ಜಾಗತೀಕರಣ ಪ್ರಕ್ರಿಯೆಯ ಫಲವಾಗಿ ಎದ್ದು ಬಂದ ಹಣಕಾಸು ಬಂಡವಾಳವು ಹುಟ್ಟಿಹಾಕಿದ ಬಿಕ್ಕಟ್ಟಿನೊಂದಿಗೆ ಏಗಲು ಸಹಾಯವಾಗುವ ಕ್ರಮಗಳು. ಈ ಕ್ರಮಗಳು, ಯಾವ ರೀತಿಯಲ್ಲಿಯೂ ಜಾಗತೀಕರಣ ಪ್ರಕ್ರಿಯೆಯ ನಿರಾಕರಣೆಯಲ್ಲ. ಅವು, ಹಣಕಾಸು ಬಂಡವಾಳವು ಉಂಟುಮಾಡಿದ ಬಿಕ್ಕಟ್ಟಿನಿಂದ ಅನಿವಾರ್ಯವಾಗಿ ಒದಗಿ ಬಂದ ಅಡ್ಡ ಪರಿಣಾಮಗಳೊಂದಿಗೆ ಏಗಲು ಸಹಾಯವಾಗುವ ಉದ್ದೇಶದಿಂದ ಮಾಡಿದ ಹತಾಶೆಯ ಮತ್ತು ವಿರುದ್ಧ–ಪರಿಣಾಮಕ ಪ್ರಯತ್ನಗಳು. ಹಣಕಾಸು ಬಂಡವಾಳವು ಜಾಗತೀಕರಣದ ಕೇಂದ್ರ ಸ್ಥಾನದಲ್ಲಿರುವುದರಿಂದ, ಅದರ ಯಜಮಾನಿಕೆ ಕೊನೆಗೊಂಡಾಗ ಮಾತ್ರ ಜಾಗತೀಕರಣ ಪ್ರಕ್ರಿಯೆಯ ನಿರಾಕರಣೆಯಾಗುತ್ತದೆ. ●

ಪಶ್ಚಿಮ ಬಂಗಾಲ: ರಾಮನವಮಿ ಹೆಸರಲ್ಲಿ ಕೋಮುವಿಭಜನೆಗೆ ಬಿಜೆಪಿ-ಟಿಎಂಸಿ ಸ್ಪರ್ಧೆ

ಪಶ್ಚಿಮ ಬಂಗಾಲದ ಹಲವೆಡೆಗಳಲ್ಲಿ, ನಿರೀಕ್ಷಿಸಿದಂತೆ, ರಾಮನವಮಿಯ ಸಂದರ್ಭದಲ್ಲಿ ಸಶಸ್ತ್ರ ಮೆರವಣಿಗೆಗಳು ರಾಜ್ಯ ಬಿಜೆಪಿ ಮುಖ್ಯಸ್ಥರೂ ಸೇರಿದಂತೆ, ಅವರ ಮುಖಂಡರ ನೇತೃತ್ವದಲ್ಲಿಯೇ ನಡೆದಿವೆ. ರಾಜ್ಯದ ಆಳುವ ಪಕ್ಷವೂ ಇದರಲ್ಲಿ ಹಿಂದೆ ಬಿದ್ದಿಲ್ಲ. ಅದರ ಮುಖಂಡರೂ ಮೆರವಣಿಗೆಗಳನ್ನು ಸಂಘಟಿಸಿದ್ದು ಅವುಗಳಲ್ಲೂ ಖಡ್ಗಗಳನ್ನು ಝುಳಪಿಸಲಾಯಿತು ಎಂದು ವರದಿಯಾಗಿದೆ.

ರಾಮನವಮಿ ಈ ರಾಜ್ಯದಲ್ಲಿ ಕೋಮು ವಿಭಜನೆ ನಡೆಸುವಲ್ಲಿ ಕೇಂದ್ರದ ಮತ್ತು ರಾಜ್ಯದ ಆಳುವ ಪಕ್ಷಗಳ ನಡುವೆ ಸ್ಪರ್ಧೆಯ ಕಣವಾಗಿ ಬಿಟ್ಟಿದೆ. ಮೊಹಲ್ಲಾ-ಮೊಹಲ್ಲಾಗಳಲ್ಲಿ, ವಿಶೇಷವಾಗಿ ಹಿಂದಿ ಭಾಷಿಕ ಕೈಗಾರಿಕಾ ಪ್ರದೇಶಗಳಲ್ಲಿ ಸಶಸ್ತ್ರ ರಾಮನವಮಿ ಮೆರವಣಿಗೆಗಗಳ ಮತ್ತು ಆ ಸಂದರ್ಭದಲ್ಲಿ ಗಲಭೆಗಳ ಸುದ್ದಿ ಭಯದ ವಾತಾವರಣ ಸೃಷ್ಟಿಸಿತು. ಈ ಮೆರವಣಿಗೆಗಳು ಸಾಗಿದ ಸ್ಥಳಗಳಲ್ಲಿ ಆಸ್ತಿಪಾಸ್ತಿಗಳು ನಷ್ಟಗೊಂಡಿವೆ, 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ, ನಾಲ್ಕು ಸಾವುಗಳು ಸಂಭವಿಸಿವೆ ಎಂದೂ ವರದಿಯಾಗಿದೆ.

ಒಂದು ಸ್ಥಳದಲ್ಲಿ ದೇಶದ ಮೊದಲ ಶಿಕ್ಷಣ ಮಂತ್ರಿಗಳೂ, ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಮೌಲಾನಾ ಅಬುಲ್ ಕಲಂ ಆಝಾದ್‌ರವರ ಪ್ರತಿಮೆಯನ್ನೂ ಉರುಳಿಸಲಾಗಿದೆ ಎಂಬ ಸುದ್ದಿಯೂ ಬಂದಿದೆ.

ಅಸನ್‌ಸೋಲ್‌ನಲ್ಲಿ ಕೋಮುಗಲಭೆಯಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು ರಾಜ್ಯ ಆಡಳಿತ ಮತ್ತು ಪೊಲೀಸ್ ಜನಗಳಲ್ಲಿ ಶಾಂತಿ ರಕ್ಷಣೆಯ ವಿಶ್ವಾಸ ಮೂಡಿಸುವಲ್ಲಿ ವಿಫಲವಾಗಿವೆ, ಈ ಸನ್ನಿವೇಶದಲ್ಲಿ ಪರಿಸ್ಥಿತಿಯನ್ನು ಸಂಭಾಳಿಸಲು ಅರೆಸೈನಿಕ ಪಡೆಗಳ ಸಹಾಯ ಪಡೆಯಬೇಕು ಎಂದು ಸಿಪಿಐ(ಎಂ) ಹೇಳಿದೆ.

ಹಲವೆಡೆಗಳಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಭಯಗ್ರಸ್ತ ಜನಗಳ ಬೆಂಬಲಕ್ಕೆ ನಿಂತಿದ್ದಾರೆ. ರಾಜ್ಯಾದ್ಯಂತ ಎಡರಂಗದ ಕರೆಯ ಮೇರೆಗೆ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಕಾರ್ಯಕರ್ತರು ಕೆಂಬಾವುಟಗಳನ್ನು ಹಿಡಿದು ಕೋಮು ಸಾಮರಸ್ಯದ ಘೋಷಣೆಗಳೊಂದಿಗೆ ಮೆರವಣಿಗೆಗಳನ್ನು ನಡೆಸಿದ್ದಾರೆ. ಕಳೆದ ವರ್ಷ ಗಲಭೆಗಳು ನಡೆದ ಸ್ಥಳಗಳಲ್ಲಿ, ಉದಾ: ಉತ್ತರ 24 ಪರಗಣ ಜಿಲ್ಲೆಯ ಬದುರಿಯದಲ್ಲಿ ಎಡಕಾರ್ಯಕರ್ತರು ಸ್ಥಳೀಯ ಜನಗಳೊಂದಿಗೆ ರಾತ್ರಿ-ಹಗಲು ಕಾವಲು ಕಾಯ್ದು ಗಲಭೆಗಳು ಮರುಕಳಿಸದಂತೆ ನೋಡಿಕೊಂಡಿದ್ದಾರೆ.

ಕೋಮು ವಿಭಜನೆಯ ಹುನ್ನಾರ



ಕೋಮು ಸಾಮರಸ್ಯದ ಸಂದೇಶ



ರಾಜ್ಯಗಳ ಸುತ್ತ

ಏಳನೇ ವೇತನ ಆಯೋಗ ಶಿಫಾರಸಿನ ಜಾರಿ-ಮಣಿಪುರದಲ್ಲಿ ವಿಶ್ವಾಸದ್ರೋಹದ ವಿರುದ್ಧ ಅನಿರ್ದಿಷ್ಟ ಕಾಲದ ಮುಷ್ಕರ

ಮಣಿಪುರದ ಸರಕಾರೀ ನೌಕರರು ಮಾರ್ಚ್ 22ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಿದ್ದಾರೆ. ಬಿಜೆಪಿ ಮಾರ್ಚ್ 2017ರಲ್ಲಿ ಮಣಿಪುರ ವಿಧಾನಸಭಾ ಚುನಾವಣೆಯ ವೇಳೆಯಲ್ಲಿ ತನ್ನ 'ವಿಶನ್ ಡಾಕ್ಯುಮೆಂಟ್'ನಲ್ಲಿ ಈ ಭರವಸೆ ನೀಡಿತ್ತು. ಆದರೆ ಒಂದು ವರ್ಷವಾಗುತ್ತಿದ್ದರೂ ಇನ್ನೂ ಈಡೇರಿಸಿಲ್ಲ, ಮಾತ್ರವಲ್ಲ, ಇದಕ್ಕೆ 1500 ಕೋಟಿ ರೂ.ಗಳು ಬೇಕಾಗುತ್ತದೆಯಾದ್ದರಿಂದ ಸದ್ಯಕ್ಕೆ ಅದನ್ನು ಜಾರಿ ಮಾಡುವ ಯೋಚನೆ ಸರಕಾರಕ್ಕೆ ಇಲ್ಲ ಎಂದೂ ಹೇಳಲಾಗುತ್ತಿದೆ,

ಅಖಿಲ ಮಣಿಪುರ ಕಾರ್ಮಿಕ ಸಂಘಗಳ ಮಂಡಳಿ(ಎಎಂಟಿಯುಸಿ) ಮತ್ತು ಅಖಿಲ ಮಣಿಪುರ ಸರಕಾರೀ ನೌಕರರ ಸಂಘಟನೆ(ಎಎಂಜಿಇಒ)ನ ಜಂಟಿ ಆಡಳಿತ ಸಮಿತಿ(ಜೆಎಸಿ) ರಾಜ್ಯ ಸರಕಾರಕ್ಕೆ 22 ಅಂಶಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದು ಈ ಬಗ್ಗೆ ರಾಜ್ಯ ಹಣಕಾಸು ಮಂತ್ರಿಗಳನ್ನು ಭೇಟಿಯಾಗಿರುವುದಲ್ಲದೆ ಮುಖ್ಯಮಂತ್ರಿಗಳನ್ನು ಜೆಎಸಿ ಮುಖಂಡರು ನಾಲ್ಕು ಬಾರಿ ಭೇಟಿಯಾಗಿದ್ದಾರೆ. ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಮೇಲೆ ಈ ಕುರಿತು ಒತ್ತಡ ಹಾಕುವುದಾಗಿ ಹೇಳಿದರಂತೆ.

ಮಾರ್ಚ್ 16ರಂದು ಪ್ರಧಾನ ಮಂತ್ರಿಗಳು ಅದನ್ನು ಜಾರಿಗೊಳಿಸುವ ಪ್ರಕಟಣೆ ಮಾಡಬಹುದು ಎಂದೂ ನಿರೀಕ್ಷಿಸಲಾಗಿತ್ತು. ಆದರೆ ಪ್ರಧಾನಿಗಳು ಬಂದರು, ಭಾರತೀಯ ವಿಜ್ಞಾನ ಸಮ್ಮೇಳನವನ್ನು ಉದ್ಘಾಟಿಸಿ ಹೋದರು, ಬಿಜೆಪಿಯ ವಿಷನ್ ಡಾಕ್ಯುಮೆಂಟಿನ ಆಶ್ವಾಸನೆಯ ಬಗ್ಗೆ ಚಕಾರವೆತ್ತಲಿಲ್ಲ. ಇದರಿಂದ ಕುಪಿತರಾದ ಸರಕಾರಿ ನೌಕರರು ಅನಿರ್ದಿಷ್ಟ ಕಾಲದ ಮುಷ್ಕರಕ್ಕಿಳಿದರು.

ಇತ್ತೀಚೆಗೆ ತ್ರಿಪುರಾ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಈ ಪ್ರಶ್ನೆಯನ್ನು ಬಿಜೆಪಿ ಎಡರಂಗ ಸರಕಾರದ ವಿರುದ್ಧ ವ್ಯಾಪಕವಾಗಿ ಬಳಸಿತ್ತು. ಬಿಜೆಪಿಯ ರಾಷ್ಟ್ರ ಅಧ್ಯಕ್ಷರ ಮತ್ತು ಸ್ವತಃ ಪ್ರಧಾನಿಗಳ ಆಶ್ವಾಸನೆಯನ್ನು ತ್ರಿಪುರಾದ ಸರಕಾರಿ ನೌಕರರು ನಂಬಿದ್ದೂ ಎಡರಂಗದ ಸೋಲಿಗೆ ಒಂದು ಕಾರಣ ಎಂದು ಹೇಳಲಾಗಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪ್ರಧಾನ ಮಂತ್ರಿಗಳ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಎಂದು ಜಮ್ಮು-ಕಾಶ್ಮೀರ ಜನತೆಯನ್ನು ಮರುಳುಗೊಳಿಸಿದ್ದು ಸಾಕು-ತರಿಗಾಮಿ

ಮೂರು ವರ್ಷಗಳ ಹಿಂದೆ ಜಮ್ಮು ಮತ್ತು ಕಾಶ್ಮೀರಕ್ಕೆ 82,452 ಕೋಟಿ ರೂ.ಗಳ ವಿಶೇಷ ಅಭಿವೃದ್ಧಿ ಪ್ಯಾಕೇಜ್ ನೀಡಲಾಗಿದೆ ಎಂದು ಪ್ರಧಾನ ಮಂತ್ರಿಗಳು ಮತ್ತು ರಾಜ್ಯದ ಮುಖ್ಯಮಂತ್ರಿಗಳು ವೈಭವದಿಂದ ಸಾರಿದ್ದರು. ಆದರೆ ಈ ಮೂರು ವರ್ಷಗಳಲ್ಲಿ ಈ 'ವಿಶೇಷ ಪ್ಯಾಕೇಜಿ'ನಲ್ಲಿ ರಾಜ್ಯಕ್ಕೆ ಸಿಕ್ಕಿರುವುದು ಕೇವಲ ಅದರ 18% ಮಾತ್ರ ಎಂದು ಮಾರ್ಚ್ 26ರಂದು ಅಲ್ಲಿಯ ಪ್ರಮುಖ ದೈನಿಕ 'ಗ್ರೇಟರ್ ಕಾಶ್ಮೀರ' ವರದಿ ಮಾಡಿದೆ. ಇದನ್ನು ಪ್ರಸ್ತಾಪಿಸುತ್ತ ಬಿಜೆಪಿ ಸರಕಾರದ ಅಭಿವೃದ್ಧಿ ಅಜೆಂಡಾ ಎಂಬುದು ಟೊಳ್ಳು ಮಾತು, ಇಡೀ ದೇಶದಂತೆ ಕಾಶ್ಮೀರದಲ್ಲೂ ವಾಸ್ತವಗೊಂಡಿಲ್ಲ ಎಂದು ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡರೂ ಮತ್ತು ಶಾಸಕರೂ ಆಗಿರುವ ಮಹಮ್ಮದ್ ಯೂಸುಫ್ ತರಿಗಾಮಿ ಹೇಳಿದ್ದಾರೆ.

ಕೇಂದ್ರದ ಬಿಜೆಪಿ ಸರಕಾರದ ನಿಜವಾದ ಆಶಯ ಈಗ ಸ್ಪಷ್ಟವಾಗಿದೆ. ಇದು ರಾಜ್ಯಕ್ಕೆ ಬರಬೇಕಾಗಿದ್ದ ಎಂದಿನ ಪಾಲು ಅಷ್ಟೇ. ಅದಕ್ಕೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಎಂಬ ಆವರಣ ತೊಡಗಿಸಲಾಗಿತ್ತಷ್ಟೇ. ಆದರೂ ಮೈತ್ರಿ ಸರಕಾರದ ಭಾಗೀದಾರರು ಈಗಲೂ ಜನರನ್ನು ಮರುಳುಗೊಳಿಸುತ್ತಲೇ ಇದ್ದಾರೆ ಎಂದು ತರಿಗಾಮಿ ಹೇಳಿದ್ದಾರೆ.

ನವಂಬರ್ 2015ರಲ್ಲಿ ಇದನ್ನು ವಿಶೇಷ ಪ್ಯಾಕೇಜ್ ಎಂದು ಪ್ರಕಟಿಸುವಾದ ಪ್ರಧಾನ ಮಂತ್ರಿಗಳು ಒಂದು ಆಧುನಿಕ, ಪ್ರಗತಿಪರ ಮತ್ತು ಸಮೃದ್ಧ ಜಮ್ಮು ಮತ್ತು ಕಾಶ್ಮೀರ ಕಟ್ಟುವಲ್ಲಿ ಹಣದ ಲಭ್ಯತೆಯೇನೂ ಅಡ್ಡಿಯಾಗುವುದಿಲ್ಲ ಸಾರಿದ್ದರು. ಆದರೆ ರಾಜ್ಯದಲ್ಲಿ ಈಗ ನಿರುದ್ಯೋಗ ಆತಂಕಕಾರಿ ಮಟ್ಟ ತಲುಪುತ್ತಿದೆ ಎಂದು ತರಿಗಾಮಿ ಆಕ್ರೋಶ ವ್ಯಕ್ತಪಡಿಸಿದರು.

ಹೆಚ್ಚಿನ ಕೇಂದ್ರ-ಪ್ರಾಯೋಜಿತ ಯೋಜನೆಗಳಿಗೆ ಸಿಗುತ್ತಿರುವ ಹಣ ಅತ್ಯಲ್ಪ, ಕೆಲವಕ್ಕಂತೂ ಏನೂ ಬರುತ್ತಿಲ್ಲ, ಇದು ರಾಜ್ಯದ ಜನಗಳಿಗೆ ಅಪಾರ ತೊಂದರೆಗಳನ್ನು ಉಂಟುಮಾಡಿದೆ. ಪ್ರಮುಖ ಅಭಿವೃದ್ಧಿ ಕಾಮಗಾರಿಗಳು ನಿಂತುಹೋಗಿ ಲಕ್ಷಾಂತರ ಜನಗಳ ಜೀವನಾಧಾರಗಳಿಗೆ ಕುತ್ತು ಬಂದಿದೆ.

ಹಣದ ಅಭಾವದಿಂದಾಗಿ ವಿದ್ಯುತ್ ಮತ್ತು ನೀರು ಪೂರೈಕೆ ಯೋಜನೆಗಳನ್ನು ಕೈಬಿಡಲಾಗಿದೆ. ಜೀವನಾಧಾರ ಕಲ್ಪಿಸುವ ಯೋಜನೆಗಳು ಮುಚ್ಚಿ ಹೋಗುತ್ತಿವೆ. ಆದರೂ ಸರಕಾರ ಇನ್ನೂ ಅಭಿವೃದ್ಧಿಯ ಟೊಳ್ಳು ಮಾತುಗಳನ್ನಾಡುತ್ತಿದೆ. ಇಂತಹ ಟೊಳ್ಳು ಮಾತುಗಳಿಂದ ರಾಜ್ಯದ ಪ್ರತಿಯೊಂದು ಜನವಿಭಾಗವೂ ನಿರಾಶಗೊಂಡಿದೆ ಎಂದು ಪರಿಗಾಮಿಯವರು ಖೇದ ವ್ಯಕ್ತಪಡಿಸಿದ್ದಾರೆ.

ತ್ರಿಪುರಾದಲ್ಲಿ ಬಿಜೆಪಿ-ಐಪಿಎಫ್‌ಟಿ ಹಿಂಸಾಚಾರ ಮುಂದುವರೆಯುತ್ತಿದೆ. ಇದನ್ನು ಪ್ರತಿಭಟಿಸಿ ಎಡರಂಗದ ಶಾಂತಿಯುತ ಪ್ರತಿಭಟನೆಗಳು ನಡೆಯುತ್ತಿವೆ. ಮಾರ್ಚ್ 26 ರಂದು ರಾಜಧಾನಿ ಅಗರ್ತಲಾದಲ್ಲಿ ಸಿಪಿಐ(ಎಂ)ನ ಪಶ್ಚಿಮ ತ್ರಿಪುರಾ ಜಿಲ್ಲಾ ಸಮಿತಿಯ ಕರೆಯ ಮೇಲ ನಡೆದ ಒಂದು ಪ್ರತಿಭಟನೆಯ ದೃಶ್ಯ.



ಆಧಾರ್ ಹೆಸರಲ್ಲಿ ಬಡಜನರಿಗೆ ರೇಶನ್ ನಿರಾಕರಿಸುತ್ತಿರುವುದರ ವಿರುದ್ಧ ಮಾರ್ಚ್ 28 ರಂದು ಉತ್ತರಪ್ರದೇಶದ ಎಲ್ಲಡೆಗಳಿಂದ ರಾಜಧಾನಿ ಲಕ್ನೌಗೆ ಬಂದ ಸಾವಿರಾರು ಮಹಿಳೆಯರು ಜನವಾದಿ ಮಹಿಳಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. 'ರೋಟೀ ಕಾ ಹಕ್..ಸಬ್ ಕಾ ಹಕ್' ಮತ್ತು 'ಹಕ್ ಹಮಾರಾ ರಾಶನ್ ಪಾನಾ, ನಹೀಂ ಹೋಗಾ ಕೋಯೀ ಬಹಾನಾ" (ರೊಟ್ಟಿಯ ಹಕ್ಕು ನಮ್ಮಹಕ್ಕು; ರೇಷನ್ ಪಡೆಯುವುದು ನಮ್ಮ ಹಕ್ಕು, ಅದರ ಬಗ್ಗೆ ಯಾವುದೇ ಯಾವುದೇ ನೆವ ಬೇಡ) ಎಂಬ ಘೋಷಣೆಗಳು ರಾಜಧಾನಿಯಲ್ಲಿ ಮೊಳಗಿದವು.



ಅಧ್ಯಕ್ಷ ಮ್ಯಾಕ್ರಾನ್ ಕಾರ್ಮಿಕ ವಿರೋಧಿ ಸುಧಾರಣೆಗಳಿಗೆ ಫ್ರಾನ್ಸಿನ ಕಾರ್ಮಿಕರ ವ್ಯಾಪಕ ಪ್ರತಿಭಟನೆ



ನಾಗರಾಜ ನಂಜುಂಡಯ್ಯ

ಅಧ್ಯಕ್ಷ ಮ್ಯಾಕ್ರಾನ್ ಕಳೆದ ವರ್ಷ ಚುನಾಯಿತರಾದಂದಿನಿಂದ ಅನುಸರಿಸುತ್ತಿರುವ ನವ–ಉದಾರೀಕರಣ ಕಾರ್ಯಸೂಚಿಗೆ ಅನುಸಾರವಾಗಿ ಖಾಸಗಿ ಬಂಡವಾಳ ಉತ್ತಮವಾಗಿ ನಡೆಯುವ ಆವಶ್ಯಕ ಸೇವೆಯನ್ನು ವಶಪಡಿಸಿಕೊಳ್ಳುವುದನ್ನು ಫ್ರೆಂಚ್ ಕಾರ್ಮಿಕರು ಉಗ್ರವಾಗಿ ಪ್ರತಿಭಟಿಸುತ್ತಿದ್ದಾರೆ.



ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರಾನ್ ಸರ್ಕಾರ ರೈಲ್ವೆ ಸುಧಾರಣೆಗಳು ಮತ್ತು ಸ್ವಯಮಾಧಿಕ್ಯ (ಅಂದರೆ ಸರ್ಕಾರದ ಪ್ರಕಾರ ಅವಶ್ಯಕತೆಗಿಂತ ಹೆಚ್ಚಾಗಿರುವುದು) ನೀಡುವ ಮೂಲಕ 2022 ರ ಒಳಗೆ ಸುಮಾರು 1,20,000 ಉದ್ಯೋಗಗಳನ್ನು ಕಡಿತಗೊಳಿಸಲು ತೀರ್ಮಾನಿಸಿದೆ. ಅದ್ಯಕ್ಷರು ಪ್ರಕಟಿಸಿದ ಈ ಪ್ರಸ್ತಾವನೆಗಳು ಕಾರ್ಮಿಕರನ್ನು ಕೆರಳಿಸಿ, ದೇಶವ್ಯಾಪಿ ಬೃಹತ್ ಪ್ರತಿಭಟನೆಗಳು ನಡೆದಿರುವುದು ವರದಿಯಾಗಿದೆ.

55ಲಕ್ಷ ಉದ್ಯೋಗಗಳು ಸಾರ್ವಜನಿಕ ವಲಯುದಲ್ಲಿವೆ ಎಂದು ಅಧಿಕೃತ ಅಂಕಿ–ಅಂಶಗಳು ಹೇಳುತ್ತವೆ. ರಾಜಧಾನಿ ಪ್ಯಾರೀಸ್ ನಲ್ಲಿಯೇ ಸುಮಾರು 48,000 ಪ್ರತಿಭಟನೆಕಾರರು ಬೀದಿಗಿಳಿದು ಹೋರಾಟದಲ್ಲಿ ಭಾಗವಹಿಸಿದ್ದಾರೆ. ಇದರಲ್ಲಿ 13,000 ಮಂದಿ ರೈಲ್ವೆ ಸಿಬ್ಬಂದಿಗಳು. ಪೋಲಿಸರು ಮತ್ತು ಪ್ರತಿಭಟನೆಕಾರರ ನಡುವೆ ಘರ್ಷಣೆಗಳು ಸ್ಫೋಟಗೊಂಡಿವೆ, ಹಾಗೆಯೇ ನಾಂಟೆಸ್ ನಗರದಲ್ಲಿಯೂ ಪೋಲಿಸರು ಮತ್ತು ಪ್ರದರ್ಶನಕಾರರ ಮಧ್ಯೆ ಸಂಘರ್ಷ ನಡೆದು, ಅನಿಲ ಶೆಲ್‌ಗಳು ಮತ್ತು ನೀರಿನ ಫಿರಂಗಿಗಳನ್ನು ಪ್ರತಿಭಟನೆಕಾರರ ಮೇಲೆ ಬಳಸಿ ಚದುರಿಸಲು ಪ್ರಯತ್ನಿಸಿದ್ದಾರೆ.

ಪ್ರತಿಭಟನೆಗಳ ಪರಿಣಾಮದಿಂದ, ರೈಲ್ವೆ ಇಲಾಖೆಯ ವರದಿಯ ಪ್ರಕಾರ ಶೇ. 60 ರಷ್ಟು ವೇಗದ ರೈಲುಗಳು ಮತ್ತು ಶೇ. 75 ರಷ್ಟು ಅಂತರ–ನಗರ ಸೇವೆಗಳನ್ನು ಸ್ಥಗಿತಗೊಂಡವು ಮತ್ತು ಪ್ಯಾರೀಸ್ ನಿಂದ ಹೊರಡುವ ಶೇ.30 ರಷ್ಟು ವಿಮಾನಗಳನ್ನು ರದ್ದುಗೊಂಡವು.

ಪ್ರಮುಖವಾಗಿ "ಸೊಸೈಟಿ ನ್ಯಾಷನಲ್ ಡೆಸ್ ಕೆಮಿನ್ಸ್ ಡೆ ಫರ್ ಫ್ರಾನ್ಸಿಸ್ (ಎಸ್.ಎನ್.ಎಫ್.ಸಿ) ಹಾಗೂ ರಾಷ್ಟ್ರೀಯ ಸರ್ಕಾರಿ ಸ್ವಾಮ್ಯದ ರೈಲ್ವೆ ಇಲಾಖೆಯನ್ನೂ ಪ್ರತಿನಿಧಿಸುವ ನಾಲ್ಕು ಸಂಘಗಳು, ಮಾರ್ಚ್ 15 ರಂದು ಸಭೆ ಸೇರಿ, ಏಪ್ರಿಲ್ 3 ರಿಂದ ಜೂನ್ 28 ರ ನಡುವೆ, ಸರಣಿ ಮುಷ್ಕರ ನಡೆಸುವುದು ಹಾಗೂ ಈ ಅವಧಿಯಲ್ಲಿಯೇ ಪ್ರತಿ 5 ದಿನಗಳಲ್ಲಿ ಸತತ 2 ದಿನಗಳ ಮುಷ್ಕರ ನಡೆಸಲು ನಿರ್ಣಯ ಕೈಗೊಂಡಿದ್ದಾರೆ.

ಪ್ರಸ್ತುತವಿರುವ ಕಾನೂನಿನ ಪ್ರಕಾರ ಮುಷ್ಕರದ ಸಂದರ್ಭದಲ್ಲಿಯೂ ಕನಿಷ್ಠ ಮೂರರಲ್ಲಿ ಒಂದು ರೈಲು ಕಡ್ಡಾಯವಾಗಿ ಚಾಲನೆಯಲ್ಲಿರಬೇಕೆಂಬ ಅಗತ್ಯ ಸೇವೆ ಉಲಂಘಿಸಿದರೆ ಶಿಕ್ಷೆ ಎದುರಿಸಬೇಕೆಂಬ ಎಚ್ಚರಿಕೆಯನ್ನೂ ಎಸ್.ಎನ್.ಎಫ್.ಸಿ. ಪ್ರದೇಶದ ಅಧ್ಯಕ್ಷರಾದ ವ್ಯಾಲೇರಿ ಪೆಕ್ರೆಸ್ಸ್ ರವರು ನೀಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಅತಿ ದೊಡ್ಡ ಕಾರ್ಮಿಕ ಸಂಘವಾದ ಸಿ.ಜಿ.ಟಿ. ಯ ನಾಯಕರಾದ ಲಾರೆಂಟ್ ಬೂನ್ ರವರು ಸರ್ಕಾರದ ಸರ್ವಾಧಿಕಾರದ ಧೋರಣೆಗಳಿಗೆ ಸೂಕ್ತವಾಗಿ ಉತ್ತರ ಕೊಡುತ್ತೇವೆ, ಮುಷ್ಕರದ–ಪ್ರತಿಭಟನೆಗಳನ್ನು ದೀರ್ಘಕಾಲದವರೆಗೆ ಕಾಯ್ದಿಟ್ಟುಕೊಳ್ಳುವ ನಿಟ್ಟಿನಲ್ಲಿ ಕಾರ್ಮಿಕರು ಒಗ್ಗಟ್ಟಾಗಿದ್ದಾರೆ ಎಂದಿದ್ದಾರೆ.

ರೈಲ್ವೆ ಕಾರ್ಮಿಕರು ಏಕೆ ಮುಷ್ಕರ ನಡೆಸುತ್ತಿದ್ದಾರೆ?

ಈ ಮೊದಲು ಖಾಸಗಿ ಕ್ಷೇತ್ರಗಳಲ್ಲಿ ನೇಮಕಾತಿ–ಹೊರದಬ್ಬುವಿಕೆ ನೀತಿಗಳನ್ನು ಒತ್ತಾಯ ಪೂರ್ವಕವಾಗಿ ಹೇರಲಾಗಿತ್ತು. ಈ ಆಧಾರದಲ್ಲಿಯೇ ಹಲವಾರು ನಿಗಮ/ಸಂಸ್ಥೆಗಳಲ್ಲಿ ಕಳೆದ ಒಂದು ವರ್ಷದಲ್ಲಿಯೇ ಸಾವಿರಾರು ನೌಕರರನ್ನು ಕೆಲಸದಿಂದ ಹೊರದಬ್ಬಿ ವಜಾ ಮಾಡಲಾಗಿತ್ತು. ಇದೀಗ ಅಧ್ಯಕ್ಷ ಮ್ಯಾಕ್ರಾನ್ ರವರ ಕಾರ್ಮಿಕ ಸುಧಾರಣೆಗಳ ಪ್ರಸ್ತಾವನೆಯಂತೆ, 2022 ರೊಳಗೆ ಸುಮಾರು 1,20,000 ಉದ್ಯೋಗಗಳನ್ನು ಕಡಿತಗೊಳಿಸಲು ತೀರ್ಮಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ, ಪ್ರಧಾನಿ ಎಡ್ವರ್ಡ್ ಫಿಲಿಪ್ ರವರು ಮಾರ್ಚ್ 14 ರಂದು ಔಪಚಾರಿಕವಾಗಿ 'ರೈಲ್ವೆ ಕಾರ್ಮಿಕರಿಗೆ ಇದ್ದ ವಿಶೇಷ ಸ್ಥಾನಮಾನ ಸೌಕರ್ಯಗಳನ್ನು ರದ್ದುಗೊಳಿಸುವ ಒಂದು ಶಾಸನವನ್ನು ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸಿದರು. ಇದು ರೈಲ್ವೆ ಕಾರ್ಮಿಕರನ್ನು ಕೆರಳಿಸಿ, ಅವರು ಬೀದಿಗಿಳಿದು ಮುಷ್ಕರ ನಡೆಸುವಂತಾಯಿತು.

ಪ್ರಸ್ತುತವಿರುವ ರೈಲ್ವೆ ಇಲಾಖೆಯಲ್ಲಿ ಸುಮಾರು ಶೇ. 90 ರಷ್ಟು ಅಂದರೆ 1,40,000 ರಷ್ಟು ನೌಕರರು 'ಸ್ಟಾಟ್ಯೂಟ್ ಡಿ ಚೆಮಿನೋಟ್ (ಸರ್ಕಾರದ ನೇಮಕಾತಿ) ಒಪ್ಪಂದಗಳ ಮೂಲಕ ನೇಮಕಗೊಂಡಿದ್ದಾರೆ. ಈ ನೌಕರರು 'ನಾಗರೀಕ ಸೇವಕರು' ಎಂಬ ಸ್ಥಾನವನ್ನು ಶಾಸನಬದ್ಧವಾಗಿ ಹೊಂದಿರುತ್ತಾರೆ. ಇದು ಇವರಿಗೆ ಉನ್ನತ ಮಟ್ಟದ ಉದ್ಯೋಗದ ಭದ್ರತೆಯನ್ನೂ ನೀಡಿರುತ್ತದೆ. ಈ ಸ್ಟಾಟ್ಯೂಟ್ ಡಿ ಚೆಮಿನೋಟ್ ಒಪ್ಪಂದದಂತೆ, ಅನಾರೋಗ್ಯದಿಂದ ಅಥವಾ ತಾನಾಗೇ ರಾಜೀನಾಮೆ ನೀಡುವುದನ್ನು ಹೊರತು ಪಡಿಸಿದರೆ ನೌಕರರಿಗೆ 50–55 ವಯಸ್ಸಿನವರೆಗೂ ಉದ್ಯೋಗದ ಖಾತ್ರಿ ಇರುತ್ತದೆ.

ಪ್ರಸ್ತುತ ಈ ಒಪ್ಪಂದದ ಅಡಿಯಲ್ಲಿ ಅಸ್ತಿತ್ವದಲ್ಲಿರುವ ಈ ಎಲ್ಲಾ ಭದ್ರತಾ ಸೌಲಭ್ಯಗಳು ತಕ್ಷಣದಲ್ಲಿಯೇ ಕೊನೆಗೊಳ್ಳುವುದಿಲ್ಲವಾದರೂ 2022 ರ ಒಳಗೆ 1,20,000 ನೌಕರರನ್ನು ಕಡಿತಗೊಳಿಸುವ ಪ್ರಸ್ತಾವನೆಗಳಿಂದಾಗಿ, ಉದ್ಯೋಗದ ಭದ್ರತೆಗೆ ಖಾತ್ರಿ ಇರುವುದಿಲ್ಲ ಎಂಬ ಆತಂಕವನ್ನೂ ಕಾರ್ಮಿಕ ಸಂಘಗಳು ವ್ಯಕ್ತಪಡಿಸಿವೆ. ಇನ್ನು ಮುಂದೆ ನೇಮಕಾತಿ 'ಕೋಡ್ ಡು ಟ್ರಾವೆಲ್' ಅಡಿಯಲ್ಲಿ ನಡೆಯಲಿದ್ದು ಈ ಭದ್ರತೆಗಳು, ಸೌಲಭ್ಯಗಳು ಇರುವುದಿಲ.

ಕಾರ್ಮಿಕ ಸಂಘಗಳ ಕಳವಳ

ರೈಲ್ವೆಯು ಪ್ರಸ್ತುತ 'ಸಾರ್ವಜನಿಕ ಸಂಸ್ಥೆ'ಯಾಗಿದೆ ಇದನ್ನು ಕಾನೂನು ಬದ್ಧವಾಗಿ 'ಸಾರ್ವಜನಿಕ ಹಣಕಾಸಿನಿಂದ ನಡೆಯುವ' ನಿಗಮವನ್ನಾಗಿ ಬದಲಾಯಿಸುವ ಸರ್ಕಾರದ ಧೋರಣೆಯ ಬಗ್ಗೆ ಕಾರ್ಮಿಕ ಸಂಘಗಳು ಕಳವಳ ವ್ಯಕ್ತಪಡಿಸಿವೆ. ಏಕೆಂದರೆ, ಫ್ರಾನ್ಸಿನ ದೂರಸಂಪರ್ಕ ಸಂಸ್ಥೆಯನ್ನು ಈ ಹಿಂದೆ ಹೀಗೆಯೇ ಮೊದಲು ಸಾರ್ವಜನಿಕ ಹಣಕಾಸಿನಿಂದ ನಡೆಯುವ ನಿಗಮವಾಗಿ ಮಾಡಿ ನಂತರ ಸಂಪೂರ್ಣವಾಗಿ ಇದೀಗ ಖಾಸಗೀಕರಣಗೊಂಡಿದೆ. ಅಧ್ಯಕ್ಷ ಮ್ಯಾಕ್ರಾನ್ ರೈಲ್ವೆಯನ್ನು ಖಾಸಗೀಕರಣಗೊಳಿಸುವುದಿಲ್ಲ ಎಂದು ಭರವಸೆ ಕೊಟ್ಟಿದ್ದಾರೆ. ಆದರೆ ಪ್ರತಿಭಟನೆಕಾರರಿಗೆ ಇದರಲ್ಲಿ ನಂಬಿಕೆ ಮೂಡುತ್ತಿಲ್ಲ.

ಫ್ರಾನ್ಸಿನ ರಾಷ್ಟ್ರೀಯ ರೈಲ್ವೆಯು ಇಡೀ ಯುರೋಪಿನಲ್ಲಿಯೇ ಅತ್ಯುತ್ತಮ ಸೇವೆ ಕೊಡುತ್ತಿದೆ. ಕಳೆದ ವರ್ಷ 1.3 ಶತಕೋಟಿ ಯುರೋ ಅಭಿವೃದ್ಧಿ ಸಾಧಿಸಿದೆ. ಇಂತಹ ಸಂಸ್ಥೆಯನ್ನು ಕಠಿಣ ಸುಧಾರಣೆಗಳ ಮೂಲಕ ಹದಗೆಡಿಸುವುದು ಸರಿಯಲ್ಲಿವೆಂದು ಕಾರ್ಮಿಕ ಮುಖಂಡರು ಹೇಳುತ್ತಾರೆ.

ಫ್ರಾನ್ಸ್‌ನ ರೈಲ್ವೆ ಯುರೋಪಿನಲ್ಲೇ ಅತ್ಯುತ್ತಮ ಮತ್ತು ದಕ್ಷ ವ್ಯವಸ್ಥೆಯೆಂದು ಹೆಸರು ಪಡೆದಿದೆ. ಅಧ್ಯಕ್ಷ ಮ್ಯಾಕ್ರಾನ್ ಕಳೆದ ವರ್ಷ ಚುನಾಯಿತರಾದಂದಿನಿಂದ ಅನುಸರಿಸುತ್ತಿರುವ ನವ–ಉದಾರೀಕರಣ ಕಾರ್ಯಸೂಚಿಗೆ ಅನುಸಾರವಾಗಿ ಖಾಸಗಿ ಬಂಡವಾಳ ಇಂತಹ ಒಂದು ಉತ್ತಮವಾಗಿ ನಡೆಯುವ ಆವಶ್ಯಕ ಸೇವೆಯನ್ನು ವಶಪಡಿಸಿಕೊಳ್ಳುವುದನ್ನು ಫ್ರೆಂಚ್ ಕಾರ್ಮಿಕರು ಉಗ್ರವಾಗಿ ಪ್ರತಿಭಟಿಸುತ್ತಿದ್ದಾರೆ. ●

"ಮೂರ್ತಿ–ಭಂಜನೆ ಸಾಂಸ್ಕೃತಿಕ ರಾಜಕಾರಣದ ಭಾಗ"............. ಪುಟ 16 ರಿಂದ

ಎಡರಂಗದ ಅಭಿವೃದ್ಧಿ ಮಾದರಿಗೆ ತೊಡಕು ತಂದು, ಹಣ ಮತ್ತು ಉಡುಗೊರೆಗಳ ಹೊಳೆ ಹರಿಸಿದ ಭರಾಟೆಯ ಚುನಾವಣಾ ಪ್ರಚಾರಗಳಿಂದ – ಈ "ಅಪಮೌಲ್ಯೀಕರಣ"ವನ್ನು ಸಾಧಿಸಿತು ಎಂದರು. ಬಿದಿರು ಮತ್ತು ರೇಗಾ ಮೂಲಕ ಜಾರಿ ಮಾಡಿದ ಮೀನಿನ ಕೆರೆಗಳು ಹೇಗೆ ಎಡರಂಗದ ಅಭಿವೃದ್ಧಿ ಮಾದರಿಯ ಪ್ರತಿಮೆಗಳಾಗಿದ್ದವು, ಎಂದು ಅವರು ಮನೋಜ್ಞವಾಗಿ ವಿವರಿಸಿದರು.

ಚುನಾವಣೆಯ ಸಮಯದಲ್ಲಿ ತ್ರಿಪುರಾ ಪ್ರವಾಸ ಕೈಗೊಂಡಿದ್ದ ಪತ್ರಕರ್ತ ನವೀನ್ ಸೂರಿಂಜೆ ಮಾತನಾಡಿ, ಲೆನಿನ್ ಪ್ರತಿಮೆ ಉರುಳಿಸಿದ್ದು ಆಕಸ್ಮಿಕವೇನಲ್ಲ. ಅದಕ್ಕಾಗಿ ಆಕ್ರಾಮಕ ಕರೆಗಳ ಸೂಚನೆ ಅಮಿತ್ ಶಾ ಚುನಾವಣಾ ಭಾಷಣದಲ್ಲೇ ಇದ್ದವು ಎಂದರು. ತ್ರಿಪುರಾದ ಎಡರಂಗ ಚುನಾವಣೆ ಗೆಲ್ಲಲು ಯಾವುದೇ ತಾತ್ಕಾಲಿಕ ತಂತ್ರಗಳನ್ನು ಉಪಯೋಗಿಸಲು ನಿರಾಕರಿಸಿದ್ದು ಮತ್ತು ಸ್ವಲ್ಪ ಮಟ್ಟಿಗೆ ವಿಪರೀತ ಆದರ್ಶ ಸೋಲಲು ಕಾರಣವಾಯಿತು ಎಂದರು. ಬುಡಕಟ್ಟು ಪ್ರತ್ಯೇಕತಾ ಸಂಘಟನೆಗಳ ಐಡೆಂಟಿಟಿ ರಾಜಕೀಯದ ಜತೆ ಯಾವುದೇ ರಾಜಿ ಮಾಡದೆ, ಅವುಗಳ ಮಧ್ಯೆ ಇದ್ದ ಒಡಕನ್ನು ಬಳಸಿಕೊಳ್ಳಲು ನಿರಾಕರಿಸಿದ್ದು, ಕೆಲವು ಕಡೆ ಬುಡಕಟ್ಟು ಸಂಘಟನೆಗಳ ದಾಳಿ–ದಮನಕ್ಕೆ ಗುರಿಯಾಗಿದ್ದ ದಲಿತ–ಮುಸ್ಲಿಂ ಬಡವರ ಜತೆ ಗಟ್ಟಿಯಾಗಿ ನಿಂತಿದ್ದು ಸ್ವಲ್ಪ ಮಟ್ಟಿಗೆ ಬುಡಕಟ್ಟುಗಳ ಒಂದು ವಿಭಾಗದ ಮಧ್ಯೆ ಬೆಂಬಲ ಕಳೆದುಕೊಳ್ಳಲು ಕಾರಣವಾಯಿತು. ರಾಜ್ಯ ಸರಕಾರದ ಅಧಿಕಾರವನ್ನು ಎಡರಂಗ ಕಳೆದುಕೊಂಡಿದ್ದರೂ ರಾಜ್ಯದ ಶೇ. 60ರಷ್ಟು ಪ್ರದೇಶವನ್ನು ಆವರಿಸಿಕೊಂಡಿರುವ ಬುಡಕಟ್ಟು ಸ್ವಾಯತ್ತ ಪ್ರದೇಶವನ್ನೂ ಈಗಲೂ ಎಡರಂಗ ಆಳುತ್ತಿದೆ ಎಂದು ತಿಳಿಸಿದರು. ಇಂದಿನ ವ್ಯಕ್ತಿ–ವೈಭವೀಕರಣದ ಚುನಾವಣಾ ವೈಖರಿ ತಪ್ಪಾದರೂ, ಮುಖ್ಯಮಂತ್ರಿ ಸೇರಿದಂತೆ ಯಾವುದೇ ಅಭ್ಯರ್ಥಿಯ ಅಪಾರ ಕೆಲಸವನ್ನು ಪ್ರೊಜೆಕ್ಟ್ ಮಾಡದ ಚಿತ್ರವನ್ನೂ ಬಳಸದ, ಬರಿಯ ಪಕ್ಷವನ್ನು ಮಾತ್ರ ಪ್ರೊಜೆಕ್ಟ್ ಮಾಡುವ ಚುನಾವಣಾ ಪ್ರಚಾರ, ಇಂದಿನ ಸಂದರ್ಭದಲ್ಲಿ ಅತಿ ಆದರ್ಶವಾದ ಆಗುವುದಿಲ್ಲವೇ ಎಂದು ಅವರು ಪ್ರಶ್ನಿಸಿದರು.

"ಕ್ಯಾಸ್ಟ್ರೋ ಕತೆ"

ಇದಕ್ಕಿಂತ ಮೊದಲು ಡಾ. ಕೆ.ಪ್ರಕಾಶ್ ಬರೆದ "ಕ್ಯಾಸ್ಟ್ರೋ ಕತೆ" ಪುಸ್ತಕವನ್ನು ಬಿಡುಗಡೆ ಮಾಡಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ. ಕೆ. ಮರುಳಸಿದ್ದಪ್ಪ ಅದರ ಬಗ್ಗೆ ಮಾತನಾಡಿದರು. ಇದು ಕ್ಯಾಸ್ಟ್ರೋ ಅವರು ಸಂದರ್ಶನ ಮೂಲಕ ನೀಡಿದ ಮಾಹಿತಿಯಿರುವ 'ಆತ್ಮಕತೆ"ಯಾದರೂ, ಮೊದಲ ಒಂದೆರಡು ಅಧ್ಯಾಯ ಬಿಟ್ಟರೆ ಹೆಚ್ಚಿನ ವ್ಯಕ್ತಿಗತ ಮಾಹಿತಿ ಸಿಗುವುದಿಲ್ಲ. ಇದು ಕ್ಯೂಬಾದಂತಹ ಪುಟ್ಟ ರಾಷ್ಟ್ರ ನೆರೆಯ ಜಗತ್ತಿನ ಅತಿ ಪ್ರಬಲ ರಾಷ್ಟ್ರಕ್ಕೆ ಸವಾಲು ಹಾಕಿ ಹಲವು ದಶಕಗಳ ಕಾಲ ಬಾಳಿ ಬದಲಿ ಸಮಾಜ ಕಟ್ಟಿದ್ದರ ಕತೆ ಎಂದು ಕೆ.ಎಂ.ಎಸ್. ಹೇಳಿದರು. ಸಾರ್ವತ್ರಿಕ ಉಚಿತ ಶಿಕ್ಷಣ, ಆರೋಗ್ಯ ವ್ಯವಸ್ಥೆಗೆ ಹೆಸರಾದ ಕ್ಯೂಬಾ ವನ್ನು ಅತ್ಯಂತ ಕ್ರೂರ ವ್ಯಾಪಾರೀಕೃತ ಅಮೆರಿಕದ ವ್ಯವಸ್ಥೆಗೆ ಹೋಲಿಸಿ ಕ್ಯೂಬಾ ಮತ್ತು ಕ್ಯಾಸ್ಟ್ರೊ ಸಾಧನೆಗಳನ್ನು ಅವರು ವಿವರಿಸಿದರು. ಕ್ಯಾಸ್ಟ್ರೋರಂತಹ ಅಪರೂಪದ ವ್ಯಕ್ತಿ ಆಳುತ್ತಿದ್ದರೂ ವ್ಯಕ್ತಿ–ಪೂಜೆಯನ್ನು ನಿರಾಕರಿಸಲು ಸಾಧ್ಯವಾಗಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದರು.

ಡಾ. ಕೆ.ಪ್ರಕಾಶ್ ತಮ್ಮ ಕ್ಯೂಬಾ ಪ್ರವಾಸದ ಮತ್ತು ಪುಸ್ತಕ ಬರೆದ ಅನುಭವಗಳ ಬಗ್ಗೆ ಮಾತನಾಢಿದರು. ಕ್ರಿಯಾ ಮಾಧ್ಯಮದ ವಸಂತರಾಜ್ ಅಧ್ಯಕ್ಷತೆ ವಹಿಸಿದ್ದರು. ಸಮುದಾಯ ಕನಾಟಕದ ಕೆ.ಎಸ್.ವಿಮಲ ವಿಚಾರಗೋಷ್ಟಿಯನ್ನು ನಡೆಸಿಕೊಟ್ಟರು. ●

JANASHAKTHI KANNADA VARA PATRIKE APRIL 2-8, 2018 Price: Rs. 10/- Date of Publication: 30 MARCH 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

“ಮೂರ್ತಿ–ಭಂಜನೆ ಸಾಂಸ್ಕೃತಿಕ ರಾಜಕಾರಣದ ಭಾಗ”



ವಸಂತರಾಜ ಎನ್.ಕೆ.

ತಮಗೆ ವಿರೋಧವಾಗಿರುವ ಜನಮಾನಸದಲ್ಲಿ ಬೇರೂರಿದ ಒಬ್ಬ ವ್ಯಕ್ತಿಯ ಚಿಂತನೆಗಳನ್ನು ಅಥವಾ ಒಂದು ಸಿದ್ಧಾಂತವನ್ನು ಕಿತ್ತು ಹಾಕಲು, ಸಮಾಜದಲ್ಲಿ ಯಜಮಾನಿಕೆ ಇರುವ ವಿಭಾಗ ಹಲವು ರೀತಿಯಲ್ಲಿ ಪ್ರಯತ್ನಿಸುತ್ತದೆ. ಮೌನ(ನಿರ್ಲಕ್ಷ್ಯ), ದಾಳಿ–ಹಿಂಸೆ, ತುಚ್ಚೀಕರಣ, ದೈವೀಕರಣ, ಆಪೋಶನ – ಮುಂತಾದವು ಬೇರೆ ಬೇರೆ ಸಂದರ್ಭದಲ್ಲಿ ಅದು ತೋರುವ ಪ್ರತಿಕ್ರಿಯೆಗಳು. ಭಾರತದ ಯಜಮಾನ ವರ್ಗಗಳು ಬುದ್ಧ, ಬಸವಣ್ಣ, ಮಾರ್ಕ್ಸ್, ಲೆನಿನ್, ಪೆರಿಯಾರ್, ಭಗತ್ ಸಿಂಗ್, ಅಂಬೇಡ್ಕರ್, ಅವರುಗಳ ವ್ಯಕ್ತಿತ್ವ–ಸಿದ್ಧಾಂತಗಳ ಬಗ್ಗೆ ಇದನ್ನೇ ಮಾಡಿವೆ. ಬುದ್ಧನ ಚಿಂತನೆಗಳನ್ನು ಬ್ರಾಹ್ಮಣ ಪುರೋಹಿತಶಾಹಿ ಬುದ್ಧನ ತತ್ವಗಳನ್ನು – ಮೌನ(ನಿರ್ಲಕ್ಷ್ಯ)ಗಳ ಮೂಲಕ ಮುಚ್ಚಿಹಾಕುವ, ವಿಕೃತಗೊಳಿಸಿ ಅಪಪ್ರಚಾರ ಮಾಡುವ ತುಚ್ಛೀಕರಣ, ದಾಳಿ–ಹಿಂಸೆಗಳು, ದೇವರು ಮಾಡುವ ದೈವೀಕರಣ, ವಿಷ್ಣುವಿನ 10ನೇ ಅವತಾರ ಮಾಡುವ ಮೂಲಕ ಆಪೋಶನ – ಮುಂತಾದ ಹಲವು ಪ್ರತಿಕ್ರಿಯೆಗಳ ಮೂಲಕ ಕಿತ್ತು ಹಾಕಲು ಪ್ರಯತ್ನಿಸಿದೆ. ಇತ್ತೀಚೆಗೆ ಸಂಘಪರಿವಾರ ಪ್ರದರ್ಶಿಸಿರುವ ಸರಣಿ ಮೂರ್ತಿ–ಭಂಜನೆ ಬರಿಯ ಕೀಳು ಮಟ್ಟದ ಹಿಂಸಾತ್ಮಕ ವಿಜಯೋತ್ಸವದ ಮಾದರಿ ಮಾತ್ರವಲ್ಲ. ಅದೊಂದು ಸಾಂಸ್ಕೃತಿಕ ರಾಜಕಾರಣದ ವ್ಯವಸ್ಥಿತ ಅಜೆಂಡಾ. ಹೀಗೆಂದವರು “ಪ್ರತಿಮೆ–ಭಂಜನ ಮತ್ತು ವಿಚಾರವಾದ” ಎಂಬ ವಿಚಾರಗೋಷ್ಠಿಯಲ್ಲಿ, ಪ್ರಸಿದ್ಧ ಚಿಂತಕ–ಪರ್ತಕರ್ತ ದಿನೇಶ್ ಅಮಿನ್ ಮಟ್ಟು ಅವರು. ಅದನ್ನು ಸಮುದಾಯ ಕರ್ನಾಟಕ ಮತ್ತು ಕ್ರಿಯಾ ಮಾಧ್ಯಮ ಮಾರ್ಚ್ 22ರಂದು ಬೆಂಗಳೂರಿನಲ್ಲಿ ಸಂಘಟಿಸಿತ್ತು.

ಸಂಘ ಪರಿವಾರ ಚುನಾವಣೆಯ ಸುತ್ತಮುತ್ತ ಚುನಾವಣಾ ರಾಜಕಾರಣ ಮಾಡುತ್ತದೆ. ಸತತವಾಗಿ ಸಾಂಸ್ಕೃತಿಕ ರಾಜಕಾರಣ ಮಾಡುತ್ತಿರುತ್ತದೆ. ತ್ರಿಪುರಾದಲ್ಲಿ ಚುನಾವಣಾ ರಾಜಕಾರಣ ಮುಗಿದ ಕೂಡಲೇ ಸರಣಿ ಮೂರ್ತಿ–ಭಂಜನೆಗಳ ಮೂಲಕ ಸಾಂಸ್ಕೃತಿಕ ರಾಜಕಾರಣ ಮಾಡಲಾರಂಭಿಸಿದೆ. ಈ ಮೂಲಕ ಜನಮಾನಸದಿಂದ ವ್ಯಕ್ತಿ ಅಥವಾ ಸಿದ್ಧಾಂತಗಳನ್ನು ನಾಶ ಮಾಡುವ ಹುನ್ನಾರ ಅದರದು. ಇದು ಬೌದ್ಧಿಕ ಸೈದ್ಧಾಂತಿಕ ಕ್ಷೇತ್ರದ ವಾಗ್ವಾದಗಳಲ್ಲಿ ಸೋಲಿನ ಹತಾಶೆಯ ಪ್ರತಿಕ್ರಿಯೆ ಸಹ. ಉದಾಹರಣೆಗೆ ಐ.ಸಿ.ಎಚ್.ಆರ್., ಎಫ್.ಟಿ.ಐ.ಐ., ಐ.ಸಿ.ಎಸ್.ಎಸ್.ಆರ್. ಮುಂತಾದ ದೇಶದ ಉನ್ನತ ಶಿಕ್ಷಣ–ಸಂಶೋಧನಾ ಸಂಸ್ಥೆಗಳ ನಿರ್ವಹಣಾ ಮಂಡಳಿಗಳ ಸುಮಾರು 650 ಹುದ್ದೆಗಳಿದ್ದು ಅವುಗಳಲ್ಲಿ 100ನ್ನು ಭರ್ತಿ ಮಾಡಲೂ ಯೋಗ್ಯತೆಯಿರುವ ಸಂಘೀ ಬುದ್ಧಿಜೀವಿಗಳಿಲ್ಲ. ಆದ್ದರಿಂದಲೇ ಬುದ್ಧಿಜೀವಿ–ಲದ್ದಿಜೀವಿ ಮುಂತಾದ ವಿಕೃತ ಕಲ್ಪನೆಗಳನ್ನು ಅದು ಹರಡುತ್ತದೆ ಎಂದರು ಮುಂದುವರೆಯುತ್ತಾ ಅಮಿನ್ ಮಟ್ಟು.

ಸಂಘಪರಿವಾರ ಪ್ರದರ್ಶಿಸಿರುವ ಸರಣಿ ಮೂರ್ತಿ–ಭಂಜನೆಯ ವಿರುದ್ಧ ಪ್ರತಿರೋಧ ಒಡ್ಡಲು ಅದಕ್ಕೆ ವಿರೊಧವಾಗಿರುವ ಪ್ರಜಾಸತ್ತಾತ್ಮಕ ಸೆಕ್ಯುಲರ್ ಚಿಂತನೆಗಳಲ್ಲಿ ನಂಬಿಕೆ ಇಟ್ಟಿರುವ ಎಲ್ಲಾ ಶಕ್ತಿಗಳು ತಮ್ಮ ಸಿದ್ಧಾಂತಗಳನ್ನು ಸರಳ ಭಾಷೆಯ ಮೂಲಕ ಹರಡಿ ಜನಮಾನಸದಲ್ಲಿ ಬೇರೂರಿಸಲು ಸತತವಾಗಿ ಪ್ರಯತ್ನಿಸಬೇಕು. ಹೀಗೆ ಮಾಡುವುದರ ಮೂಲಕವೇ ಮೂರ್ತಿ–ಭಂಜನೆಯ ಸಾಂಸೃತಿಕ ರಾಜಕಾರಣವನ್ನು ಸೋಲಿಸಲು ಸಾಧ್ಯ. ತಮ್ಮ ಸಿದ್ಧಾಂತ, ಅಭಿಪ್ರಾಯಗಳನ್ನು ಪ್ರಚಾರ ಮಾಡುತ್ತಲೇ ಅದರ ಬಗ್ಗೆ ನೈಜ ಸಂವಾದ ಮಾಡುತ್ತಲೇ, ಸಂಘಪರಿವಾರದಂತಹ ಅವೈಚಾರಿಕ ಶಕ್ತಿಗಳ ವಿರುದ್ಧ ಐಕ್ಯತೆಯಿಂದ ಇರಬೇಕು ಎಂದು ದಿನೇಶ್ ಅಮಿನ್ ಮಟ್ಟು ಕರೆ ಕೊಟ್ಟರು. ದ.ಸಂ.ಸಂ. ರಾಜ್ಯ ಸಂಚಾಲಕರಾದ ಮೋಹನರಾಜ್ ಪುರೋಹಿತಶಾಹಿಯ ಮೂರ್ತಿಭಂಜನೆಯ ಚರಿತ್ರೆ ಬಿಚ್ಚಿಟ್ಟು, ಸತತವಾಗಿ ಅಂಬೇಡ್ಕರ್ ಮೂರ್ತಿ ಭಂಜನೆಯನ್ನು ಮಾಡುತ್ತಿರುವ ಮನುವಾದಿಗಳನ್ನು ಖಂಡಿಸಿ ಮಾತನಾಡಿ, ಪ್ರಜಾಸತ್ತಾತ್ಮಕ ಸೆಕ್ಯುಲರ್ ಚಿಂತನೆಗಳಲ್ಲಿ ನಂಬಿಕೆ ಇಟ್ಟಿರುವ ಎಲ್ಲಾ ಶಕ್ತಿಗಳ ಐಕ್ಯತೆಯ ಅಗತ್ಯಕ್ಕೆ ದನಿಗೂಡಿಸಿದರು.

ಮೌಲ್ಯಗಳ “ಅಪಮೌಲ್ಯೀಕರಣ”ದ ಮೂಲಕ ಸೋಲು

ವಿಚಾರಗೋಷ್ಠಿಯಲ್ಲಿ ಸರಣಿ ಮೂರ್ತಿ–ಭಂಜನೆಯ ಹಿಂದೆ ಇದ್ದ ತ್ರಿಪುರಾದ ಬಿಜೆಪಿಯ ಚುನಾವಣಾ ವಿಜಯದ ಸ್ವರೂಪ ಮತ್ತು ಕಾರಣಗಳ ಬಗ್ಗೆ ಮಾತನಾಡಿ, ಹಂಪಿ ವಿ.ವಿ.ಯ ಪೋಸ್ಟ್ ಡಾಕ್ಟರಲ್ ಫೆಲೊ ಅರುಣ್ ಜೋಳದ ಕೂಡ್ಲಿಗಿ ಅವರು ಹಲವು ಒಳನೋಟಗಳನ್ನು ನೀಡಿದರು. ತ್ರಿಪುರಾದ ಎಡರಂಗ ಸರಕಾರದ ಸ್ವರೂಪ, ನೀತಿಗಳು ಮತ್ತು ಆಡಳಿತ ಹಲವು ಸಕಾರಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿದಿದ್ದವು. ಅವು ಭಾರತದ ಇಂದಿನ ರಾಜಕಾರಣಕ್ಕೆ ಅಗತ್ಯವಾದವುಗಳು ಕೂಡಾ. ಆದರೆ ಅವುಗಳನ್ನು ಪ್ರಶ್ನಿಸಿ ಜನತೆಯ ಅದರಲ್ಲೂ ಪ್ರಮುಖವಾಗಿ ಯುವಜನತೆಯ ಮಧ್ಯೆ ಅವನ್ನು “ಅಪಮೌಲ್ಯೀಕರಣ” ಮಾಡುವ ಮೂಲಕ (ಅಂದರೆ ಅವು ತಪ್ಪು ಮೌಲ್ಯಗಳು ಅಥವಾ ಆ ಮೌಲ್ಯಗಳು ಪ್ರಗತಿ ಮತ್ತು ಅಭಿವೃದ್ಧಿಗೆ ವಿರೋಧಿ ಎಂದು ಬಿಂಬಿಸುವ ಮೂಲಕ) ಬಿಜೆಪಿ ಎಡರಂಗವನ್ನು ಸೋಲಿಸಿತು ಎಂದು ಅಭಿಪ್ರಾಯಪಟ್ಟರು.

ಭ್ರಷ್ಟಾಚಾರ–ರಹಿತ ಚುನಾವಣಾ ಮತ್ತು ಆಡಳಿತ ಪ್ರಕ್ರಿಯೆ, ಸರಳ ಸ್ವಚ್ಛ ನಿಸ್ವಾರ್ಥಿ ರಾಜಕಾರಣಿಗಳು, ಪ್ರಜಾಸತ್ತಾತ್ಮಕ ಪಾರದರ್ಶಕ ಆಡಳಿತ, ಬಂಗಾಲಿ–ಬುಡಕಟ್ಟು ಸೌಹಾರ್ದತೆ, ಶೇ.30 ಜನ ಇರುವ ಬುಡಕಟ್ಟುಗಳಿಗೆ ಪೂರ್ಣ ಸ್ವಾಯತ್ತತೆ, ಪ್ರಾದೇಶಿಕ ಸಂಸ್ಕೃತಿಯ ಸೊಗಡನ್ನು ಕಾಪಿಡುವ ಸುಸ್ಥಿರ ಪರಿಸರ–ಸ್ನೇಹಿ ಅಭಿವೃದ್ಧಿ ಮಾದರಿ, ಸಹಕಾರ ಆಧಾರಿತ ಕೃಷಿ ಮತ್ತು ಕೈಗಾರಿಕೆ, ಎಲ್ಲದರಲ್ಲೂ ಧಾವಂತ ಗಡಿಬಿಡಿ ಇಲ್ಲದ “ಸಾವಧಾನ”ದ ನಡೆ – ಎಡರಂಗ ಪ್ರತಿಪಾದಿಸಿ ಜಾರಿ ಮಾಡಿದ ಮತ್ತು ದೇಶಕ್ಕೆ ಮಾದರಿಯಾಗಬಹುದಾದ ಮೌಲ್ಯಗಳು. ಬಿಜೆಪಿ ಭಾರೀ ಕೈಗಾರಿಕೆಗಳು, ಆಧುನಿಕ ಗ್ಯಾಜೆಟುಗಳು, ಮಾಲ್‌ಗಳು, ಉದ್ಯೋಗಗಳ ಬೊಗಳೆ ಆಶ್ವಾಸನೆ, ಬುಡಕಟ್ಟು ಪ್ರತ್ಯೇಕತೆ, ರೇಗಾ ಮುಂತಾದ ಕೇಂದ್ರೀಯ ಅನುದಾನಗಳ ಭಾರೀ ಕಡಿತಗಳ ಮೂಲಕ

ಪುಟ 15 ಕ್ಕೆ

ಶ್ರೀ ಗಣೇಶ ನಾಯ್ಕ ಗೆ ಸಹಯಾನ ಸಮ್ಮಾನ

ಪ್ರತಿ ವರ್ಷದಂತೆ ಸಹಯಾನ ಕೆರೆಕೋಣ ನೀಡುತ್ತಾ ಬಂದಿರುವ ಜಿ. ಎಸ್. ಭಟ್ಟ, ಧಾರೇಶ್ವರ ಅವರ ನೆನಪಿನ 2018 ನೆ ಸಾಲಿನ “ಸಹಯಾನ ಸಮ್ಮಾನ” ಗೌರವವನ್ನು ಇತ್ತಿಚೆಗೆ ಕೆರೆಕೋಣದಲ್ಲಿ ನಡೆದ ವಿಶ್ವರಂಗಭೂಮಿ ದಿನಾಚರಣೆಯ ಸಂದರ್ಭದಲ್ಲಿ ಯಕ್ಷಗಾನ ಸ್ತ್ರೀ ವೇಷಧಾರಿಗಳಾದ ಗಣೇಶ ನಾಯ್ಕ ಮುಗ್ವಾ ಇವರಿಗೆ ನೀಡಲಾಯಿತು. ಅತಿಥಿಗಳಾಗಿ ಭಾಗವಹಿಸಿದ ಕೆರೆಮನೆ ರಾಮ ಹೆಗಡೆ, ಅಧ್ಯಕ್ಷತೆ ವಹಿಸಿದ ಶ್ರೀ ವಿಷ್ಣು ನಾಯ್ಕ ಅಂಕೋಲಾ, ಉದಯ ಭಟ್ ಇವರು ಗಣೇಶ ನಾಯ್ಕ ಅವರಿಗೆ ಶಾಲು, ಸನ್ಮಾನ ಪತ್ರ, ನೆನಪಿನ ಕಾಣಿಕೆ ಮತ್ತು 5000–00 ರೂ ನಗದನ್ನು ನೀಡಿ ಗೌರವಿಸಿದರು.

ಕಲಾವಿದರನ್ನು ಸನ್ಮಾನಿಸಿ ಮಾತನಾಡಿದ ರಾಮ ಹೆಗಡೆ ಕೆರೆಮನೆಯವರು “ಈಗಲೂ ಪಾರಂಪರಿಕ ಯಕ್ಷಗಾನದ ಭಾವಾಭಿನಯ, ಕುಣಿತವನ್ನು ಕಾಯ್ದುಕೊಂಡು ಬಂದ ಗಣೇಶ ನಾಯ್ಕ ಒಬ್ಬ ಶುದ್ಧ ಯಕ್ಷಗಾನದ ಪ್ರತಿ ನಿಧಿ. ಇಂದು ಸಾಂಸ್ಕೃತಿಕ ರಾಜಕಾರಣ ಮಾಡುವವರೆ ಹೆಚ್ಚಾಗಿದ್ದಾರೆ. ಯಕ್ಷಗಾನ ಕ್ಷೇತ್ರ ಅದಕ್ಕೆ ಹೊರತಾಗಿಲ್ಲ.” ಎಂದರು.

ಸನ್ಮಾನ ಕಾರ್ಯಕ್ರಮದ ನಂತರ ತೊಳಸಾಣಿಯ ಕುಂಬಿ ಮರಾಠಿ ಸಮುದಾಯದ ಮಕ್ಕಳಿಂದ ಕನಕದಾಸರು ರಚಿಸಿದ ಪ್ರಸಿದ್ಧ ಕಾವ್ಯವಾದ “ರಾಮಧಾನ್ಯ ಚರಿತ್ರೆ” ಯನ್ನು ಆಧರಿಸಿದ ಯಕ್ಷಗಾನ ಪ್ರಸಂಗವನ್ನು ಗಣೇಶ ಭಂಡಾರಿಯವರ ನಿರ್ದೇಶನದಲ್ಲಿ ಅತ್ಯುತ್ತಮವಾಗಿ ಪ್ರಯೋಗಿಸಿದರು.

ರಾಷ್ಟ್ರೀಯ ಸಾಧನಾ ಮಹಿಳಾ ಸಾಹಿತಿ ಪ್ರಶಸ್ತಿ ಯಮುನಾ ಗಾಂವ್ಕರ್ ಗೆ ಪ್ರಧಾನ



ಧಾರವಾಡದಲ್ಲಿ ದಿ. ವೀಣಾ ಕುಲಕರ್ಣಿ ಸ್ಮರಣೆಯ “ರಾಷ್ಟ್ರೀಯ ಸಾಧನಾ ಮಹಿಳಾ ಸಾಹಿತಿ” ಪ್ರಶಸ್ತಿಯನ್ನು ಯಮುನಾ ಗಾಂವ್ಕರ್ ರಿಗೆ ನೀಡಿ ಪುರಸ್ಕರಿಸಲಾಗಿದೆ. ಇದನ್ನು ಈ ವರೆಗಿನ ಅವರ ಜನಮುಖಿ ಹೋರಾಟ ಮತ್ತು ಸಾಹಿತ್ಯಿಕ ಕೃತಿಗಳನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ ಎಂದು ಸಂಘಟಕರಾದ ಸಾಧನಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಮಾನವ ಹಕ್ಕುಗಳ ಕೇಂದ್ರ, ಧಾರವಾಡ ಇವರು ತಿಳಿಸಿದ್ದಾರೆ. ವಿದ್ಯಾರ್ಥಿದೆಸೆಯಿಂದಲೇ ಚಳುವಳಿಗಳನ್ನು ಸಂಘಟಿಸುತ್ತಾ ರೈತರು, ಕಾರ್ಮಿಕರು, ಮಹಿಳೆಯರು, ಆದಿವಾಸಿಗಳು ಹಾಗೂ ಯುವಜನರ ಹಕ್ಕುಗಳಿಗಾಗಿ ಪ್ರತಿದಿನವೂ ತೊಡಗಿಸಿಕೊಂಡವರಾದ ಯಮುನಾ ಗಾಂವ್ಕರ್ ಸಾಹಿತ್ಯ ಬರವಣಿಗೆಯ ಮೂಲಕವೂ ಸಮಾಜಮುಖಿ ಚಿಂತನೆ ರೂಢಿಸಿಕೊಂಡವರು. ಮೂಲತಃ ಜೋಯಿಡಾ ತಾಲೂಕಿನ ಗುಂದ ಊರಿನವರಾದ ಯಮುನಾ ಗಾಂವ್ಕರ್, ಸಮಾಜದಲ್ಲಿ ನೆಲೆ ನಿಂತಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಲಿಂಗ ಅಸಮಾನತೆಯ ವಿರುದ್ಧ ಸಮಾನ ಮನಸ್ಕ ಸಂಘಟನೆಗಳ ಮೂಲಕ ಬಲವಾದ ಪ್ರತಿರೋಧ ವ್ಯಕ್ತ ಪಡಿಸುತ್ತಿರುವವರು. ಜೊತೆಗೆ ರಾಜಕೀಯ ಮತ್ತು ಸಾಂಸ್ಕೃತಿಕ ಪರ್ಯಾಯವನ್ನು ಕಟ್ಟಿಕೊಡುವಲ್ಲಿ ಕ್ರಿಯಾಶೀಲವಾಗಿರಬೇಕೆಂದು ಪ್ರತಿಪಾದಿಸುತ್ತಾ ಬಂದವರು, ಸ್ವತಃ ತಮ್ಮ ಬದುಕಿನಲ್ಲಿ ಈ ಆದರ್ಶಗಳನ್ನು ರೂಢಿಸಿಕೊಂಡು ಬಂದಿರುವ ಇವರು ದುಡಿಯುವ ಕೈಗಳ ಹೋರಾಟಗಾರ್ತಿ ಎಂದೇ ಗುರ್ತಿಸಲ್ಪಟ್ಟವರು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾಹ ದೇಶಪಾಂಡೆ ಸಭಾಭವನದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ದಿ. ವೀಣಾ ಕುಲ್ಕರ್ಣಿ ಸ್ಮರಣಾರ್ಥ ನಡೆದ ಸಮಾರಂಭದಲ್ಲಿ ಡಾ. ಇಸಬೆಲ್ಲಾ ಝೇವಿಯರ್, ನಿಂಗಣ್ಣ ಕುಂಠಿ, ಉರ್ದು ಕವಿ ಅಫರೋಜಾ ಕಾಟೇವಾಡಿ, ಲಡಾಯಿ ಪ್ರಕಾಶನದ ಬಸವರಾಜ ಸೂಳಿಬಾವಿ, ವಿ.ಜಿ. ಕಮ್ಮಾರ, ನಾಗಸುಧೆಯ ಪ್ರಕಾಶ ಕಡಮೆ, ಬಿ.ಎಸ್. ಸೊಪ್ಪಿನ್, ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು ಪುರಸ್ಕರಿಸಿದರು.

ಹೈಕೋರ್ಟಿನ ಹಿರಿಯ ವಕೀಲರಾದ ಪ್ರಕಾಶ ಉಡಕೇರಿಯವರು ಯಮುನಾ ಗಾಂವ್ಕರ್ ಸಂಘಟನಾತ್ಮಕ ಕೆಲಸಗಳನ್ನು ಮತ್ತು ಅವರ ಕವನ ಸಂಕಲನ ಹಾಗೂ ವೈಚಾರಿಕ ಪುಸ್ತಕಗಳನ್ನು ಪರಿಚಯ ಮಾಡಿಕೊಟ್ಟರು. ಡಾ. ಇಸಬೆಲ್ಲಾ ಪ್ರಾಸ್ತಾವಿಕ ಮಾತನಾಡಿದರು. ಪ್ರಶಸ್ತಿ ಪುರಸ್ಕೃತರಾದ ಯಮುನಾ ಗಾಂವ್ಕರ್ ದೇಶದ ಪ್ರಸಕ್ತ ವಿದ್ಯಮಾನಗಳ ಬಗ್ಗೆ ಮಾತನಾಡಿದರು. ಶಿವಾನಂದ ಬಾವಿಕಟ್ಟಿ, ಸದಾನಂದ ಶಿವಳ್ಳಿ, ಕೆ.ಎಚ್. ಪಾಟೀಲ, ಮೋಹನ ನಾಗಮ್ಮನವರ್, ಮೇಘಾ ಹುಕ್ಕೇರಿ, ವೀಣಾ ಚಿಕ್ಕಮಠ, ಲಕ್ಷ್ಮಿ ನೇಗಿಹಾಳ ಮುಂತಾದವರು ಉಪಸ್ಥಿತರಿದ್ದರು. ಸಭೆಯಲ್ಲಿ ವಿವಿಧ ಮಹಿಳಾ ಸಂಘಟನೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**